ಸಂಕಲನ

೩ನೇ ವರ್ಷ ೧೪ ಮೇ ೨೦೦೪

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

೧೫

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು. ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ೧೪ ರ ದಿನಾಂಕ ಹೊತ್ತು ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

೯. ಸಂಕಲನದ ವಾರ್ಷಿಕ ಚಂದಾ ರೂ. ೧೫೦/-

ಸಂಕಲನ

ಸಂಚಿಕೆ - ೧೫

೧೪ ಮೇ ೨೦೦೪

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC
SANKALANA :
A Kannada Literary Magazine
Volume 3, Issue 3 : 14 May 2004
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004

Yearly subscription : Rs. 150/-

Printed by Saraswati Offset Printers, Shivaji Road, Dharwad - 580 001

•
•
•

ಸಂಕಲನ - ೧೫ : ಸಂಪುಟ ೩, ಸಂಚಿಕೆ ೩ : ೧೪ ಮೇ ೨೦೦೪
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಮತ್ತು ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೭೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವರ್ಷ ೨೦೦೪ ರಲ್ಲಿ ಪ್ರಕಟವಾಗುವ ಸಂಕಲನದ
ಆರು ಸಂಚಿಕೆಗಳ ಒಟ್ಟು ೪೯೨ ಪುಟಗಳ ಬೆಲೆ ರೂ. ೧೫೦/-
ಚಂದಾ ಹಣವನ್ನು ಮನಿಆರ್ಡರ್ ಇಲ್ಲವೆ ಕ್ರಾಸ್ ಮಾಡಿದ ಡಿ. ಡಿ. ಮೂಲಕ
ಸಂಕಲನ ಅಥವಾ ಸಂಪಾದಕರ ಹೆಸರಿಗೆ ಕಳಿಸುವುದು.
ಚೆಕ್ ಕಳಿಸುವುದಾದಲ್ಲಿ ಬ್ಯಾಂಕ್ ಕಮೀಶನ್ ರೂ. ೨೦/- ಹೆಚ್ಚಿಗೆ ಸೇರಿಸುವುದು.

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಮೇನ್, ವಿಜಯನಗರ, ಧಾರವಾಡ - ೫೮೦ ೦೦೩

ಸಂಪಾದಕರ ಮಾತು

ಬಾಗಲಕೋಟೆಯ ವಿಭಾಗೀಯ ಅಂಚೆ ಕಛೇರಿಯಲ್ಲಿ ಸಹಾಯಕಿಯಾಗಿದ್ದ ವಿಭಾ ೨೦೦೩ ರ ನವೆಂಬರ್ ತಿಂಗಳಲ್ಲಿ ಸಂಕಲನಕ್ಕೆ ಒಂದು ಕವನ ಕಳಿಸಿದ್ದಳು. ಅದಾದ ಒಂದೇ ತಿಂಗಳಲ್ಲಿ ಅಲಿ ಸರ್‌ದಾರ್ ಜಾಫ್‌ರೀಯವರ ೬ ಮತ್ತು ಕೈಫೀ ಆಜ್‌ಮೀಯವರ ೪ ಕವಿತೆಗಳ ಅನುವಾದ ಕಳಿಸಿದಳು. ಈ ಕವಿಗಳ ಬೇರೆ ಕವಿತೆಗಳನ್ನು ಬೇರೆಯವರು ಅನುವಾದಿಸಿದ್ದು ಅವು ಅಲ್ಲಲ್ಲಿ ಪ್ರಕಟವಾಗಿವೆ, ಈಗ ತಾನು ಕಳಿಸಿದ್ದುವನ್ನು ಯಾರೂ ಅನುವಾದಿಸಿಲ್ಲ, ಇವನ್ನು ಪ್ರಕಟಿಸಿರಿ ಎಂದು ಬರೆದಳು. ಸಂಕಲನಕ್ಕೆ ಅವನ್ನು ಪ್ರಕಟಣೆಗೆ ಸ್ವೀಕರಿಸಿದ್ದನ್ನು ತಿಳಿಸಿದ ತಕ್ಷಣ ವಿಭಾ ಉತ್ತರಿಸಿದಳು, ನವೆಂಬರದಲ್ಲಿ ಕಳಿಸಿದ್ದ ಕವನವನ್ನು ಬೇರೊಂದು ಮಾಸಿಕಕ್ಕೆ ಕಳಿಸಿದ್ದೆ, ಅದು ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟವಾಗಿದೆ, ಮತ್ತೆ ಜಾಫ್‌ರೀ, ಆಜ್‌ಮೀಯವರ ಅನುವಾದಗಳನ್ನು ಮಾತ್ರ ಬೇರೆ ಕಡೆ ಕಳಿಸಿದ ನೆನಪಿಲ್ಲ ಎಂದು ಬರೆದಳು. ಜೊತೆಗೆ ಬೇರೆ ೫ ಕವನಗಳನ್ನು ಕಳಿಸಿ, ಅವನ್ನು ಪ್ರಕಟಿಸಲು ಆಗ್ರಹಿಸಿದ್ದಳು. ಇದಕ್ಕೆ ಉತ್ತರ ಬರೆಯುವಷ್ಟರಲ್ಲಿಯೇ ೨೧-೦೩-೦೪ ರಂದು ನಿಧನಳಾದಳೆಂಬ ಆಘಾತಕರ ಸುದ್ದಿ ತಿಳಿಯಿತು.

ವಿಭಾ ಬರೆದ ಯಾವ ಪತ್ರಕ್ಕೂ ದಿನಾಂಕ ಇರುತ್ತಿರಲಿಲ್ಲ. ಅಂಚೆ ಕಛೇರಿಯಲ್ಲಿಯೇ ಕೆಲಸ ಮಾಡುತ್ತಿದ್ದರೂ ತನ್ನ ಪತ್ರ+ಕವನ ಖಾಸಗೀ ಕುರಿಯರ್ ಮೂಲಕವೇ ಕಳಿಸುತ್ತಿದ್ದಳು. ತನ್ನ ಈ ಕವನಗಳನ್ನು ಬೇರೆ ಪತ್ರಿಕೆಗೆ ಕಳಿಸಿಲ್ಲವೆಂದಿದ್ದರೂ ಕಳಿಸಿರುತ್ತಿದ್ದಳು. ೩ ನೆಯ ಕಂತಿನಲ್ಲಿ ಸಂಕಲನಕ್ಕೆ ಕಳಿಸಿದ ಅಯ್ದು ಕವನಗಳಲ್ಲಿ ೫ ನೇದ್ದರಲ್ಲಿ ೧೦ ದ್ವಿಪದಿಗಳಿದ್ದವು. ಅವುಗಳಲ್ಲಿಯ ೭ ದ್ವಿಪದಿ ವಿಭಾ ಗತಿಸಿದ ನಂತರ ೦೪-೦೪-೦೪ ರಂದು ಬೇರೆಡೆ ಪ್ರಕಟವಾದುವು.

ವಿಭಾಳ ೪ ಪೂರ್ಣ ಕವನಗಳನ್ನು ಮತ್ತು ೫ ನೇದ್ದರಲ್ಲಿಯ ಉಳಿದ ೩ ದ್ವಿಪದಿಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ಅನುವಾದದ ಕವಿತೆಗಳನ್ನು ನಂತರ ಪ್ರಕಟಿಸುತ್ತೇವೆ.

ನಮ್ಮ ಮಧ್ಯದ ಪ್ರಾಮಾಣಿಕ ಹೋರಾಟಗಾರ, ಭಾವುಕ ಕವಿ, ಧೀಮಂತ ಪತ್ರಕಾರ, ಸಜ್ಜನ ಸ್ನೇಹಿತ, ಆತ್ಮೀಯ ಬಂಧು, ವತ್ಸಲ ತಂದೆಯಾಗಿದ್ದ ಕೊಪ್ಪಳದ 'ತಳಮಳ' ಪತ್ರಿಕೆಯ ಸಂಪಾದಕ ಗವಿಸಿದ್ಧ ಬಳ್ಳಾರಿ ಇಷ್ಟು ಬೇಗನೆ ಹೋಗಿದ್ದು ನಂಬಲಾಗದ, ಸಹಿಸಲಾಗದ ಸಂಗತಿ. ಇವೆಲ್ಲ ಬದುಕಿನ ಅನಿವಾರ್ಯ ಸತ್ಯಗಳಿರಬಹುದು. ಆದರೆ ಸಾಹಿತಿಗಳಿಗೆ, ಕಲಾವಿದರಿಗೆ, ಚಿಂತಕರಿಗೆ ಅನೇಕಾರ್ಥಗಳನ್ನು ದ್ಯೋತಿಸುವ ಮುನ್ಸೂಚನೆಗಳಲ್ಲವೆ?

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

೧ ಮೇ ೨೦೦೪
ಹೂಮನೆ, ಧಾರವಾಡ-೪

ಪರಿವಿಡಿ

೧. ನನ್ನ ಅಪ್ಪಯ್ಯ : ಪಿ. ಎಂ. ಹೆಗಡೆ ೫ - ೧೧

೨. ಸೋದರ ಅತ್ತೆ ನನ್ನ ಅಮ್ಮ : ಉಮೇಶ ಎಸ್. ಸಂಗನಾಳಮಠ ೧೧ - ೧೫

೩. ಅಯ್ದು ಕವಿತೆಗಳು : ವಿಭಾ ೧೫ - ೧೮

೪. ಸದ್ಯದ ಸಂಸ್ಕೃತಿ ವಿವೇಚನೆಯ ಹಿನ್ನೆಲೆಯಲ್ಲಿ ಕುವೆಂಪು ವೈಚಾರಿಕತೆ :
ಸಿ. ಎನ್. ರಾಮಚಂದ್ರನ್ ೧೯ - ೩೦

೫. ಈ ಬೆಳಕು : ಡಿ. ಬಿ. ಢಂಗ ೩೦

೬. ಮುಳ್ಳೂರು ನಾಗರಾಜ್ ಅವರ 'ನೆಲದ ಜೋಗುಳ' :
ಬಸವರಾಜ ಸಬರದ ೩೧ - ೩೯

೭. ನಾಲ್ಕು ಶಬ್ದಬಿಂಬಗಳು : ಕಿರಣ ೩೯ - ೪೧

೮. ಗೀತೆಯು ಸಮಾಜಶಾಸ್ತ್ರ - ಶ್ರೀರಂಗ : ರಾ. ಕ. ನಾಯಕ ೪೧ - ೪೪

೯. ಶ್ರೀಕೃಷ್ಣಪಾರಿಜಾತ : ಎಂ. ಎಂ. ಕಲಬುರ್ಗಿ ೪೫ - ೫೩

೧೦. ಕವನಾ ಬರೀತ್ಯಾರಂತ ಕವನಾ, ಅವನವ್ವನ ಕವನಾ! :
ಬಸವರಾಜ ಸಾದರ ೫೪ - ೫೫

೧೧. ಡೊಳ್ಳು ಹೋಗಿ ಬಾಲಾ ಬಂತು ಡುಂ...ಡುಂ... : ಮಕ್ಕಳ ನಾಟಕ :
ದಮಯಂತಿ ನರೇಗಲ್ಲ ೫೬ - ೭೦

೧೧. ಪುಸ್ತಕ ಪರಿಶೀಲನೆ : ೭೦ - ೭೭

೧. ಮುತ್ತಿನ ಸತ್ತಿಗೆ : ಡಾ. ತಾಳ್ತಜೆ ವಸಂತಕುಮಾರ —ಬಿ. ಟಿ. ದೇಸಾಯಿ

೨. ಅಮ್ಮ ಪಂಡರಿಬಾಯಿ : ಸಿ. ಎಸ್. ನಂಜುಂಡಯ್ಯ —ಜಿ. ಟಿ. ಶ್ರೀಧರ ಶರ್ಮ

೩. ಸಾಂಖ್ಯ ದರ್ಶನ : ಎಸ್. ಎಸ್. ಹಿರೇಮಠ —ಶಿವಶಂಕರ ಹಿರೇಮಠ

೪. ಕನ್ನಡ ಜಗದ್ಗುರು : ಚಂದ್ರಶೇಖರ ವಸ್ತ್ರದ —ಶ್ರೀಪತಿ ಮಂಜನಬೈಲು

೫. ಮನದಾಳದ ಮಾತುಗಳು : ರೂಪಾ ಕುಲಕರ್ಣಿ —ವಸಂತ ಕುಲಕರ್ಣಿ

೬. ರಂಗಲೋಕ : ಡಾ. ಹೆಚ್. ಎ. ಪಾರ್ಶ್ವನಾಥ್ —ಎ. ಡಿ. ನಂಜುಂಡಸ್ವಾಮಿ

೭. ಸೂಜಿಗಲ್ಲು : ಲತಾ ಗುತ್ತಿ —ದೇಶಪಾಂಡೆ ಸುಬ್ಬರಾಯ

೧೨. ಸಂಕಲನ : ಅನಿಸಿಕೆ : ೭೮ - ೭೯

೧೩. ಕಡೇ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ : ೮೦ + ಆವರಣ ಪುಟ ೩

ನನ್ನ ಅಪ್ಪಯ್ಯ

ಪಿ. ಎಂ. ಹೆಗಡೆ

ನನ್ನ ತಂದೆ ಮಹಾಬಲೇಶ್ವರ ಹೆಗಡೆ ತೀರಿಕೊಂಡು ಸುಮಾರು ೩೦ ವರ್ಷಗಳ ನಂತರ ಅವರ ದೈಹಿಕ ಚಿತ್ರಗಳನ್ನು ಮನಃಪಟಲದ ಮೇಲೆ ಮೂಡಿಸಿಕೊಳ್ಳುತ್ತಿದ್ದೇನೆ. ಎತ್ತರದ ನಿಲುವು, ಗೌರ ವರ್ಣ, ಆ ದೇಹಕ್ಕೆ ಒಪ್ಪುವ ಅಷ್ಟು ಅಗಲವಲ್ಲದ ಉದ್ದನೆಯ ಮುಖ, ಬಾಯಲ್ಲಿ ರಸಗವಳ, ಉಡುವ ಬಿಳಿಯ ಧೋತರ, ತೊಟ್ಟ ಎರಡೂ ಕಡೆ ಕಿಸೆಯಿರುವ ಫೈರನ್ ಅಂಗಿ, ಮೂರನೆಯ ಹಾಗೂ ಅನಾಮಿಕಾ ಬೆರಳುಗಳ ಮಧ್ಯೆ ಉರಿಯುತ್ತಿರುವ ಗ್ರ್ಯಾಂಡ್ ಸಾಹೇಬರ ಅಂಗಡಿಯ ಉದ್ದನೆಯ ಬೀಡಿ ಹಾಗೂ ಹಳೇ ಸೈಕಲ್ಲಿನ ಹೆಂಡಲ್ಲಿನ ಮಧ್ಯಭಾಗವನ್ನು ಹಿಡಿದ ಅವನ ನೀಳವಾದ ಎಡಗೈ, ತಲೆಯ ಮೇಲಿರುವ ಕರಿ ಟೊಪ್ಪಿ.

ನನ್ನ ಅಜ್ಜನಿಗೆ ಎರಡು ಗಂಡುಮಕ್ಕಳು ಹಾಗೂ ಎರಡು ಹೆಣ್ಣುಮಕ್ಕಳು. ಹೆಣ್ಣುಮಕ್ಕಳ ಮದುವೆಯಾಗಿ ಹೋಗಿತ್ತು. ನನ್ನ ತಂದೆಯನ್ನು ನಾನು ಅಪ್ಪಯ್ಯ ಎಂದು ಕರೆಯುತ್ತಿದ್ದೆ. ಅಪ್ಪಯ್ಯ ಹಾಗೂ ದೊಡ್ಡಪ್ಪ ಅತ್ಯಂತ ಅನ್ಯೋನ್ಯತೆಯಿಂದಿದ್ದುದರಿಂದ ಅವರಿಗೆ ಊರವರು ಹಾಗೂ ಸುತ್ತಲಿನ ಊರವರು ರಾಮ ಲಕ್ಷ್ಮಣರೆಂದೇ ಕರೆಯುತ್ತಿದ್ದರು. ನಮ್ಮೂರಲ್ಲಿ ಅಂದರೆ ಕಬ್ಬಿನಹಳ್ಳಿಯಲ್ಲಿ ಎರಡು ಕುಟುಂಬಗಳು. ಸ್ವಲ್ಪ ಪ್ರಸಿದ್ಧ ಕುಟುಂಬಗಳೆಂದೇ ಹೇಳಬೇಕು. ನಮ್ಮ ಕುಟುಂಬಕ್ಕೆ 'ಮಟ್ಟೆ'ಮನೆ ಎಂದು ಕರೆದರೆ ಮತ್ತೊಂದು ಕುಟುಂಬಕ್ಕೆ 'ಪಟ್ಟು'ವಿನ ಮನೆ ಎನ್ನುತ್ತಿದ್ದರು. ಮಟ್ಟೆಮನೆ ಎಂದರೆ ಅಡಿಕೆ-ಮಟ್ಟೆ ಅಥವಾ ಚೀಲದ ಮನೆ; ಪಟ್ಟುವಿನ ಮನೆ ಎಂದರೆ ಇಸ್ಪೀಟು ಪಟ್ಟುವಿನ ಮನೆ.

ನನ್ನ ಅಜ್ಜ ಇದ್ದ ಹಣ ಹಾಗೂ ಆಸ್ತಿಯಲ್ಲಿ ಚೌಕಾಶಿ ಮಾಡಿ ಹೆಚ್ಚು ಖರ್ಚುವೆಚ್ಚ ಮಾಡದೆ, ಸಾಲ ಮಾಡದೆ ಬದುಕಿದವನು. ಆದರೆ ನನ್ನ ಅಪ್ಪ ಹಾಗೂ ದೊಡ್ಡಪ್ಪ ಸ್ವಲ್ಪ ಮಹತ್ವಾಕಾಂಕ್ಷೆಯುಳ್ಳವರು. ಆದುದರಿಂದ ಅವರು ಪ್ರಾಯ ಪ್ರಬುದ್ಧರಾದ ಮೇಲೆ ಆಲ್ಮನೆಯಲ್ಲಿ ಮತ್ತೊಂದು ಅಡಿಕೆ ತೋಟ ಖರೀದಿಸಿದರು. ಮತ್ತು ಅಡಿಕೆ ವ್ಯಾಪಾರವನ್ನು ಆರಂಭಿಸಿದರು. ನನ್ನ ಅಪ್ಪಯ್ಯ ಹಳ್ಳಿಹಳ್ಳಿಗೆ ಹೋಗಿ ಕೆಂಪಡಿಕೆ, ಚಾಲಿ, ಕರಿಮೆಣಸು, ಯಾಲಕ್ಕಿ ಮುಂತಾದವುಗಳನ್ನು ಸಣ್ಣ ಪ್ರಮಾಣದಲ್ಲಿ ಖರೀದಿಸಿ, ಶಿರಸಿಗೆ ತಂದು ಅಡಿಕೆ ವಖಾರದಲ್ಲಿ, ಅದರಲ್ಲೂ ಮುಖ್ಯವಾಗಿ ಭೈರಿ ಹೆಗಡೆಯವರ ವಖಾರದಲ್ಲಿ ಮಾರುತ್ತಿದ್ದರು. ಅಪ್ಪಯ್ಯ ಸದಾ, ಮಳೆಗಾಲವೇ ಇರಲಿ, ಬೇಸಿಗೆಯೇ ಇರಲಿ, ಸೈಕಲ್ಲ ಮೇಲೆ ಶಿರಸಿಯಿಂದ ಹಳ್ಳಿಹಳ್ಳಿಗೆ, ಹಳ್ಳಿಗಳಿಂದ ಶಿರಸಿಗೆ ಹೋಗಿಬರುತ್ತಲೇ ಇರುತ್ತಿದ್ದರು. ಅಂದಿನ ಮಳೆ, ಅಂದಿನ ಮಣ್ಣಿನ ರಸ್ತೆಗಳನ್ನು ಇಂದು ನೆನೆಸಿಕೊಂಡರೆ ಅಪ್ಪಯ್ಯ ದೈಹಿಕವಾಗಿಯೂ ಎಷ್ಟು ಘಟ್ಟಿ ವ್ಯಕ್ತಿಯಾಗಿದ್ದ ಎಂದೆನಿಸುತ್ತದೆ. ಅಪ್ಪಯ್ಯ ಕೆಲಸಗಾರನಾದರೆ ದೊಡ್ಡಪ್ಪ ಸಲಹೆಗಾರ. ದೊಡ್ಡಪ್ಪ ಸಲಹೆ ಕೊಟ್ಟರೂ ಅಪ್ಪಯ್ಯನ ಅಭಿಪ್ರಾಯ ಹಾಗೂ ಒಪ್ಪಿಗೆ ಇಲ್ಲದೆ ಯಾವ ಕೆಲಸವನ್ನು ಮುಂದುವರಿಸಲೂ ಅವನಿಗೆ ಧೈರ್ಯವಾಗುತ್ತಿರಲಿಲ್ಲ. ನನ್ನ ಅಪ್ಪಯ್ಯನಿಗೆ ಅಧೈರ್ಯವೆಂಬುದೇ ಇರಲಿಲ್ಲ. ಅಪ್ಪಯ್ಯ ಹಾಗೂ ದೊಡ್ಡಪ್ಪ ಇಬ್ಬರಿಗೂ ರಾಹುಕಾಲ, ಗುಳಿಕಕಾಲ, ಜಾತಕ,

ಗುಮ್ಮ ಕೂಗುವದು, ಕರೇಬೆಕ್ಕು ಅಡ್ಡಬರುವುದು —ಇತ್ಯಾದಿಗಳಲ್ಲಿ ಅತ್ಯಂತ ನಂಬುಗೆ. ಅತ್ಯಂತ ಕಡಿಮೆ ಮಾಲು (ಅಡಿಕೆ, ಚಾಲಿ, ಯಾಲಕ್ಕಿ, ಮೆಣಸು) ಖರೀದಿಯಿಂದ ಆರಂಭಿಸಿದ ಇವರ ವ್ಯಾಪಾರ-ವ್ಯವಹಾರ ನೂರಾರು ಕ್ವಿಂಟಲ್ ಖರೀದಿ-ವಿಕ್ರಿಯ ವರೆಗೂ ಹೋಯಿತು. ಶಿರಸಿಯಲ್ಲಿ ಒಂದೇ ವಖಾರದಲ್ಲಿ ಇವರ ವ್ಯವಹಾರವಿದ್ದದ್ದು, ೪-೫ ವಖಾರ ಹಾಗೂ ಟಿ.ಎಸ್.ಎಸ್.ಗಳಲ್ಲೂ ಆರಂಭವಾಯಿತು. ಎಲ್ಲ ವ್ಯಾಪಾರಸ್ಥರೂ ಭವಿಷ್ಯದಲ್ಲಿ ಬದುಕುವವರು. ಇಂದು ಖರೀದಿಸಿದ ಮಾಲು ಯಾವ ಧಾರಣೆಗೆ ಹೋಗಬಹುದು? ಎಂಬುದನ್ನು ಅಂದಾಜು ಮಾಡುತ್ತಲೇ ಇರುವವರು. ನನ್ನ ಅಪ್ಪ ಹಾಗೂ ದೊಡ್ಡಪ್ಪನವರ ಸಲಹೆ ೧೦೦ ರಲ್ಲಿ ೯೦ ರಷ್ಟು ಲಾಭಕಾರಕವಾದದ್ದೆಂದು ವ್ಯಾಪಾರಸ್ಥರು ಇವರ ಸಲಹೆ ಕೇಳುತ್ತಿದ್ದರು. 'ಹಾಯ್, ಕಬ್ನಳ್ಳಿ, ಚಾಲಿ ರೇಟು ಏನಕ್ರಾ?' ಎಂದು ಕೇಳಿದರೆ 'ನಿನ್ನೆ ಹುಣ್ವಿ, ಗುಮ್ಮ ಸುತಾ ಕೂಗಿದ್ದು; ಅಂದ್ರೆ ಚಾಲಿ ದರ ಏರ್ತೂ ಹೇಳಾತು' ಎಂದು ನನ್ನಪ್ಪ ಹೇಳಿದರೆ, ಸಾಮಾನ್ಯವಾಗಿ ದರ ಏರಿಯೇ ಏರುತ್ತಿತ್ತಂತೆ. ಆದರೆ ಕೆಲವೊಮ್ಮೆ ದರ ಇಳಿದದ್ದೂ ನನಗೆ ನೆನಪಿದೆ. ಒಮ್ಮೆ ನಮ್ಮ ಮನೆಯವರು ಕರಿಮೆಣಸನ್ನು ಖರೀದಿಸಿಟ್ಟಿದ್ದರು. ನನಗೆ ನೆನಪಿದ್ದಂತೆ ಸುಮಾರು ೭೦-೮೦ ಕ್ವಿಂಟಲ್ಲಾದರೂ ಇರಬಹುದು. ಖರೀದಿಸಿದ ದರ ಕ್ವಿಂಟಲ್ಲಿಗೆ ೧೩೦-೧೫೦ ರೂ. ಆದರೆ ಕರಿಮೆಣಸಿನ ದರ ಏರುತ್ತಲೇ ಹೋಗಿ ಒಂದು ಸಾವಿರದ ಅಂಕಿಯನ್ನೂ ದಾಟಿತು. ಟಿ.ಎಸ್.ಎಸ್.ನಲ್ಲಿ ನಮ್ಮ ಕರಿಮೆಣಸನ್ನು ಇಟ್ಟಿದ್ದರು. ಯಾರೋ ಒಬ್ಬ ವ್ಯಾಪಾರಸ್ಥರಿಗೆ ಎಲ್ಲವನ್ನೂ ಖರೀದಿಸುವ ಹುಮ್ಮಸ್ಸು ಬಂದು ನನ್ನ ಅಪ್ಪಯ್ಯನನ್ನು ನಿಮ್ಮ ಮೆಣಸು ಮಾರುವಿರಾ? ಎಂದು ಕೇಳಿದರಂತೆ. ಅಪ್ಪಯ್ಯ ಕಣ್ಣು ಮುಚ್ಚಿ ಎರಡು ನಿಮಿಷ ಯೋಚಿಸಿ, 'ಈಗ ರಾಹುಕಾಲ' ನಂತರ ಹೇಳುವೆನೆಂದು ಮನೆಗೆ ಬಂದುಬಿಟ್ಟ. ನಂತರ ರೇಟು ಕಡಿಮೆಯಾಗುತ್ತಲೇ ಬಂತು. ಇವರಿಗೆ ತೊಡಗಿಸಿದ ಹಣವನ್ನು ತಿರುಗಿ ಪಡೆಯಬೇಕಾದರೆ ಸಾಕಷ್ಟು ಪೇಚಾಟವಾಯಿತು. ಅಪ್ಪಯ್ಯನಿಗೆ ರಾಹುಕಾಲವಾಯಿತು; ಆ ವ್ಯಾಪಾರಸ್ಥನಿಗೆ ಲಾಭ ಕಾಲವಾಯಿತು.

ನನ್ನ ಅಪ್ಪ-ದೊಡ್ಡಪ್ಪ ಅನ್ಯೋನ್ಯವಾಗಿದ್ದರೆಂದ ಮಾತ್ರಕ್ಕೆ ಅವರ ವ್ಯಕ್ತಿತ್ವ, ವಿಚಾರ ನಡೆವಳಿಕೆ ಒಂದೇ ತೆರನೆ ಇದ್ದವು ಎಂದು ತಿಳಿಯಬಾರದು. ದೊಡ್ಡಪ್ಪ ರಾಜಕಾರಣಿಗಳಂತೆ, ಎಲ್ಲವನ್ನೂ ಹೇಳದೆಯೇ ಹೇಳಿದ ಇಂಪ್ರೆಶನ್ ಕೊಡುತ್ತಿದ್ದರೆ, ಅಪ್ಪಯ್ಯನ ನುಡಿ ನೇರ, ಸರಳ; ದೊಡ್ಡಪ್ಪನು ಸೂಚ್ಯವಾಗಿ ಮಾತನಾಡುವವ; ಅಪ್ಪಯ್ಯ ಸ್ಪಷ್ಟವಾಗಿ ಹೇಳಿಬಿಡುವವ. ದೊಡ್ಡಪ್ಪನ ಕೈ ಬಿಗಿಯಾದರೆ, ಅಪ್ಪಯ್ಯನದು ಉದಾರ ಹಸ್ತ; ದೊಡ್ಡಪ್ಪನ ಪ್ರತಿಕ್ರಿಯೆ ಸ್ವಲ್ಪ ನಿಧಾನವಾದರೆ, ಅಪ್ಪಯ್ಯನದು ತತ್‌ಕ್ಷಣ; ಅಪ್ಪಯ್ಯನ ಹೃದಯ ಬೇಗನೇ ಕರಗುತ್ತಿದ್ದರೆ, ದೊಡ್ಡಪ್ಪನದು ಕೆಲವೊಮ್ಮೆ ಕಲ್ಲುಹೃದಯವೆಂದು ಕಾಣುತ್ತಿತ್ತು; ದೊಡ್ಡಪ್ಪನು ಯಾರಾದರೂ ತಪ್ಪು ಮಾಡಿದರೆ, ಆ ತಪ್ಪನ್ನೇ ಎತ್ತಿ ಎತ್ತಿ ಹಲವು ಬಾರಿ ತೋರಿಸುವ ಸ್ವಭಾವದವನಾದರೆ, ಅಪ್ಪಯ್ಯನದು ಕ್ಷಮಿಸುವ ಸ್ವಭಾವ. ಆದರೆ ಇಬ್ಬರೂ ಒಮ್ಮೆ ಮಾತು ಕೊಟ್ಟರೆ ತಪ್ಪುವವರಲ್ಲ. ಅವರಲ್ಲಿ ಎಷ್ಟೇ ಅನ್ಯೋನ್ಯತೆಯಿದ್ದರೂ, ಅವರಲ್ಲಿ ವೈಮನಸ್ಯ ಅನೇಕ ಬಾರಿ ಕಂಡುಬರುತ್ತಿತ್ತು. ಅದಕ್ಕೆ ಮುಖ್ಯ ಕಾರಣ ಅಪ್ಪಯ್ಯನ ಔದಾರ್ಯ.

ಒಮ್ಮೆ ನಮ್ಮ ಊರಿನ ಸಮೀಪದಲ್ಲೇ ಇರುವ, ನಮ್ಮ ಮನೆಯಲ್ಲಿ ಖರೀದಿಸಿದ ಮಾಲನ್ನು ಶಿರಸಿಗೆ ತನ್ನ ಗಾಡಿಯಲ್ಲಿ ತೆಗೆದುಕೊಂಡು ಹೋಗುವ ಮಲ್ಕ್ಯಾ ಹಣ ಕೇಳಿದ. ದೊಡ್ಡಪ್ಪ ಅವನು ಈಗಾಗಲೇ ೬-೭ ನೂರು ರೂಪಾಯಿ ಮುಂಗಡ ಪಡೆದುದರಿಂದ, ಹಿಂದಿನ ಬಾಕಿ ತೀರಿಸಿದ ನಂತರ ಹಣ ಕೊಡಲಾಗುವದು ಎಂದ. ಮಲ್ಕ್ಯಾ ತಮ್ಮ ಮನೆಯ ಏಳೂ ಜನ ಸದಸ್ಯರು ಅಂದು ಮಧ್ಯಾಹ್ನವೇ ಉಪವಾಸ ಬೀಳುತ್ತಾರೆ, ಕಾರಣ ಹಣವನ್ನಾದರೂ ಕೊಡಿ ಅಥವಾ ವಿಷವನ್ನಾದರೂ ಕೊಡಿ ಎಂದು ಅಳಲಾರಂಭಿಸಿದ. ಆಗ ದೊಡ್ಡಪ್ಪ ಒಳಗೆ ಹೋದವನು ಹೊರಗೆ ಬರಲೇ ಇಲ್ಲ. ಅಪ್ಪಯ್ಯನಿಗೆ ಮಲ್ಕ್ಯಾನ ಗೋಳು ನೋಡಲಾಗದೆ ೨೫ ರೂ. ಕೊಟ್ಟು ಕಳುಹಿಸಿದ. ಈ ವಿಷಯ ದೊಡ್ಡಪ್ಪನಿಗೆ ತಿಳಿದುಬಂತು. ೩-೪ ದಿನ ಅಪ್ಪಯ್ಯನೊಡನೆ ಮಾತನಾಡುವದನ್ನೇ ಬಿಟ್ಟ. ಅವರಿಬ್ಬರು ಪರಸ್ಪರ ಮಾತು ಬಿಟ್ಟರೆ ಮನೆಯಲ್ಲಿ ಯಾವಾಗಲೂ ಸ್ಮಶಾನ ಮೌನ ಆವರಿಸುತ್ತಿತ್ತು. ನಂತರ ಯಾವುದೋ ನೆಪ ಮಾಡಿ ದೊಡ್ಡಪ್ಪ ಮಾತನಾಡಲು ಆರಂಭ ಮಾಡಿದ ಮೇಲೇ ಅಪ್ಪಯ್ಯ ಮಾತನಾಡುತ್ತಿದ್ದ.

ಅಪ್ಪಯ್ಯನಿಗೆ 'ದೇಹಿ' ಎಂದು ಬಂದವರನ್ನು ಖಾಲಿ ಕಯ್ಯಲ್ಲಿ ಕಳಿಸಿ ಗೊತ್ತಿರಲಿಲ್ಲ. ಅವನು ದೊಡ್ಡಪ್ಪನಿಗೆ ಗೊತ್ತಿಲ್ಲದೆಯೇ ಅನೇಕರಿಗೆ ಸಾವಿರಾರು ರೂಪಾಯಿಗಳ ಸಹಾಯ ಮಾಡಿದ್ದು ಬೆಳಕಿಗೆ ಸಾವಕಾಶವಾಗಿ ಬಂದಿದೆ. ಓರ್ವ ಬಸ್ ಕಂಡಕ್ಟರ್ ಬಹಳ ದೈನ್ಯದಿಂದ ತನ್ನ ಹತ್ತಿರ ರೊಕ್ಕವಿಲ್ಲದ ಕಾರಣ ತನ್ನ ಮದುವೆಯಾಗದೆ ಮುಂದು ಬೀಳುತ್ತಿದೆ ಎಂದಾಗ ಅಪ್ಪಯ್ಯ ತನ್ನ ಕಿಸೆಯಲ್ಲಿದ್ದ ೩ ಸಾವಿರ ರೂಪಾಯಿ ಕೊಟ್ಟದ್ದು; ಸಹಕಾರಿ ಸಂಘದಿಂದ ಪಡೆದ ಸಾಲ ತೀರಿಸಲಾರದೆ ಕಟ್ಟಬಾಕಿದಾರರಾದಾಗ ಎರಡು ಜನ ನೆರೆಯೂರವರಿಗೆ ಒಟ್ಟೂ ೧೦ ಸಾವಿರಕ್ಕಿಂತ ಹೆಚ್ಚು ಹಣ ಕೊಟ್ಟದ್ದು; ತುಮಕೂರಿನ ಜಾಣ ಮಾತುಗಾರನೊಬ್ಬನು ನನ್ನ ಅಣ್ಣ ಹಾಗೂ ಅವನ ಹೆಸರಿನಲ್ಲಿದ್ದ ಬಾಳೆಕಾಯಿ ಅಂಗಡಿಯೊಂದನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭ ಮಾಡಿ,ದೊಡ್ಡ ಮೊತ್ತದ ಹಣವನ್ನು ಅಪ್ಪಯ್ಯನಿಂದ ಪಡೆದು, ಒಂದು ದಿನ ತಾನು ದಿವಾಳಿಯಾದೆನೆಂದು ಘೋಷಿಸಿದ್ದು ನನಗೆ ನೆನಪಿದೆ. ನಮ್ಮ ಸಂಬಂಧಿಕರು ಆರ್ಥಿಕ ತೊಂದರೆಯಲ್ಲಿದ್ದು, ಅಪ್ಪಯ್ಯನನ್ನು ಸಂಪರ್ಕಿಸಿದರೆ ಅಪ್ಪಯ್ಯ ತನ್ನಿಂದಾಗುವ ಎಲ್ಲ ಸಹಾಯ ಮಾಡಿ, ದೊಡ್ಡಪ್ಪನೊಡನೆ ಭಿನ್ನಾಭಿಪ್ರಾಯ, ಜಗಳ, ವೈಮನಸ್ಸಿಗೆ ಒಳಗಾಗುತ್ತಿದ್ದ. ನಾನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದುವಾಗ ಪ್ರತಿ ತಿಂಗಳು ಮನೆಯಿಂದ ಹಣ ಬರುತ್ತಿತ್ತು. ನಾನು ೮೦ ರೂ. ಬೇಕೆಂದರೆ, ನನಗೆ ೮೦ ರೂ. ಎಂ.ಓ. ಬಂದರೆ ಅದು ದೊಡ್ಡಪ್ಪ ಕಳಿಸಿದ್ದೆಂದೂ, ೧೦೦ ರೂ. ಬಂದರೆ ಅದು ಅಪ್ಪಯ್ಯ ಕಳಿಸಿದ್ದೆಂದೂ ತಿಳಿದುಬರುತ್ತಿತ್ತು.

ನಮ್ಮ ಮನೆಯಲ್ಲಿ ಯಾವಾಗಲೂ ಒಬ್ಬರಾದರೂ ಕನ್ನಡಾ ಶಾಲಾ ಮಾಸ್ತರರು ಇರುತ್ತಿದ್ದರು. ಅವರಿಗೆ ಉಳಿಯಲು ಮನೆಯಾಗಲಿ, ಅಥವಾ ಕೊಠಡಿಯಾಗಲೀ ಅಂದು ಎಲ್ಲೂ ದೊರೆಯುತ್ತಿರಲಿಲ್ಲ. ಅವರು ನಮ್ಮ ಮನೆಯ ಸದಸ್ಯರಂತೇ ಉಳಿದುಬಿಡುತ್ತಿದ್ದರು. ಒಮ್ಮೆ ಅಪ್ಪಯ್ಯ ಸಿಟ್ಟು ಬರುವ ಮಾಸ್ತರರ ಹತ್ತಿರ ಹೇಳಿದ ಘಟನೆ ನನಗೆ ನೆನಪಿದೆ. ಅವನ ಅಭಿಪ್ರಾಯದಂತೆ ಶಿಕ್ಷಕರಾದವರು ಮಕ್ಕಳಿಗೆ ಯಾವ ಪರಿಸ್ಥಿತಿಯಲ್ಲೂ ಹೊಡೆಯಬಾರದು. ಶಿಕ್ಷಕರು ಹೊಡೆಯುವವರೆಂದು ಮಕ್ಕಳಿಗೆ ತಿಳಿದರೆ ಅವರ ನಿಜವಾದ

ಪ್ರತಿಭೆ ವ್ಯಕ್ತವಾಗುವದೇ ಇಲ್ಲ ಹಾಗೂ ಅವರ ಕಲಿಕೆ ಕುಂಠಿತವಾಗುತ್ತದೆ. ಓರ್ವ ಶಿಕ್ಷಕರು ೨ ವರ್ಷ ನನ್ನಪ್ಪನಿಗೆ ಹೊಡೆದು ಕಲಿಸಲು ಪ್ರಯತ್ನಪಟ್ಟು ಒಂದಕ್ಷರವನ್ನೂ ಕಲಿಸಲಾಗದೆ ಹೋದರಂತೆ. ಆದರೆ ಮತ್ತೊಬ್ಬ ಮಾಸ್ತರರು ಅವರ ಸ್ಥಾನಕ್ಕೆ ಬಂದ ಮೇಲೆ, ಅವರು ತೋರಿಸಿದ ಪ್ರೀತಿ ಹಾಗೂ ಅವರಿಟ್ಟ ವಿಶ್ವಾಸದಿಂದ ಒಂದೇ ತಿಂಗಳಲ್ಲಿ ಅಕ್ಷರಗಳನ್ನೂ, ಮಗ್ಗಿಯನ್ನೂ ಕಲಿತು, ಕ್ಲಾಸಿಗೇ ಒಂದನೇ ನಂಬರ್ ಬಂದನಂತೆ. ಅಲ್ಲದೆ ಅಂಕಗಣಿತದಲ್ಲಿ ಎಲ್ಲ ಲೆಕ್ಕವನ್ನೂ ಸರಿಯಾಗಿ ಇವನೊಬ್ಬನೇ ಮಾಡುತ್ತಿದ್ದನಂತೆ. ಕಾರಣ ಯಾವ ಶಿಕ್ಷಕರು ಮನೆಗೆ ಬಂದರೂ ಅಪ್ಪಯ್ಯ ಆ ಇಬ್ಬರು ಶಿಕ್ಷಕರ ವಿಷಯ ಹೇಳಿಯೇ ತೀರುತ್ತಿದ್ದ.

ಅಪ್ಪಯ್ಯನಿಗೆ ಒಟ್ಟೂ ೧೨ ಮಕ್ಕಳು (೬ ಗಂಡು + ೬ ಹೆಣ್ಣು). ನನ್ನ ತಾಯಿ ನಾನು ಇನ್ನೂ ೨ ವರ್ಷವನ್ನು ಕಾಣುವ ಮೊದಲೇ ತೀರಿಕೊಂಡದ್ದರಿಂದ ತಾಯಿಯ ನೆನಪು ಸ್ವಲ್ಪವೂ ನನಗಿಲ್ಲ. ಅವಳನ್ನು ನೋಡಬೇಕೆಂದಿದ್ದರೆ ನಿನ್ನ ಅಂಚಕ್ಕ(ಅನಸೂಯಾ)ನನ್ನು ನೋಡು, ನಿನ್ನ ಅಂಚಕ್ಕನಲ್ಲಿರುವ ಸಾತ್ವಿಕ ಕಳೆ, ಮೃದು ಭಾಷೆ, ದೈವಪ್ರೀತಿ ಅವಳಲ್ಲಿಯೂ ಇತ್ತು ಎಂಬುದನ್ನು ನನ್ನ ದೊಡ್ಡಮ್ಮ ಹೇಳಿದುದು ನೆನಪಿದೆ. ಅಪ್ಪಯ್ಯ ನನ್ನ ತಾಯಿ ಸತ್ತು ಒಂದು ವರ್ಷದೊಳಗೇ ಮತ್ತೊಂದು ೧೪ ವರ್ಷದವಳನ್ನು ಮದುವೆಯಾದರು. ನಾನು, ತಾಯಿ ತೀರಿಕೊಂಡಿದ್ದರಿಂದ, ಅಪ್ಪಯ್ಯನ ಸಂಗಡ ಅವನ ಹಾಸಿಗೆಯಲ್ಲೇ ಮಲಗುತ್ತಿದ್ದೆ. ಆದರೆ ಒಮ್ಮೆ ನನ್ನನ್ನು ಬೇರೆ ಹಾಸಿಗೆಯಲ್ಲಿ ಮಲಗಿಸಿದ್ದರೆಂದು ತೋರುತ್ತದೆ. ರಾತ್ರಿ ಯಾವಾಗಲೋ ಎಚ್ಚರವಾದಾಗ ಅಪ್ಪಯ್ಯನ ಹಾಸಿಗೆಗೆ ಮಲಗಲು ಹೋದೆ. ಆದರೆ ಅವನೊಡನೆ ಮತ್ತೆ ಯಾರೋ ಮಲಗಿದ್ದುದು ಸ್ಪರ್ಶದಿಂದ ತಿಳಿಯಿತು. ನಂತರ ಅಪ್ಪಯ್ಯನ ಹಾಸಿಗೆಗೆ ಹೋಗಲಿಲ್ಲ, ರಾತ್ರಿ ಎಚ್ಚರವಾದಾಗಲೂ ಸಹ.

ನನ್ನ ಚಿಕ್ಕ ತಾಯಿ ನನ್ನನ್ನು ತಾಯಿಯಂತಲೇ ನೋಡಿಕೊಂಡದ್ದರಿಂದ ತಾಯಿಯನ್ನು ಕಳೆದುಕೊಂಡ ಅನುಭವ ನನಗೆ ೬-೭ ವರ್ಷದವನಿದ್ದಾಗ ಮಾತ್ರ ಆಗತೊಡಗಿತು. ಚಿಕ್ಕಿಗೂ ಮಕ್ಕಳಾದುದರಿಂದ ನನ್ನ ದೇಖರೇಖೆಯನ್ನು ನನ್ನ ಅಂಚಕ್ಕ ನೋಡಿಕೊಳ್ಳುತ್ತಿದ್ದಳು. ಒಮ್ಮೆ ಅಪ್ಪಯ್ಯನ ಹತ್ತಿರ ಯಾರೋ ಪ್ರಶ್ನಿಸಿದರು : 'ಅಲ್ಲಾ, ಮಹಾಬಲೇಶ್ವರ ಹೆಗಡೇರೆ, ನೀವು ಇಷ್ಟೆಲ್ಲಾ ಹೊಸ ಜಗತ್ತನ್ನು ನೋಡಿದರೂ ನಿಮಗೆ ೧೨ ಮಕ್ಕಳು (ಮೊದಲನೇ ಹೆಂಡತಿಗೆ ೪, ಎರನೇ ಹಂಡತಿಗೆ ೮) ಹೇಗಾದರು? ಅವರನ್ನು ಬೆಳೆಸಿ ಓದಿಸುವುದು ಸಾಮಾನ್ಯ ವಿಷಯವೇ?' ಅದಕ್ಕೆ ಅಪ್ಪಯ್ಯನ ಉತ್ತರ: 'ತಿನ್ನುವ ಬಾಯಿ ೧೨, ಆದರೆ ದುಡಿಯುವ ಕೈ ೨೪'. ಅವನು ಎಂದೂ ಮನೆಯಲ್ಲಿದ್ದವರಿಗೆ 'ಕೊರತೆ' ಎಂಬುದರ ಅರಿವಾಗದಂತೆ, ಸಮೃದ್ಧಿಯಿಂದ ಜೀವನ ನಡೆಸಿದವನು. ಯಾರಿಗೂ 'ಇಲ್ಲ' ಎಂಬ ಶಬ್ದ ಬಳಸಿದ್ದನ್ನು ನಾನು ಕೇಳಿಲ್ಲ.

ನನ್ನ ಅಪ್ಪಯ್ಯನ ಧೈರ್ಯ ಹಾಗೂ ಸಾಹಸದ ವಿಷಯವಾಗಿ ಒಂದೆರಡು ಉದಾಹರಣೆ ಕೊಡಲೇಬೇಕು : ನಮ್ಮ ಊರ ಹತ್ತಿರ ಕಾನಗೋಡ ಕಾನು(ಅಡವಿ) ಇತ್ತು. ಸಾಮಾನ್ಯವಾಗಿ ಚಕ್ಕಡಿಗಾಡಿಯಲ್ಲಿ ಸಾಮಾನುಗಳನ್ನು ಒಯ್ಯುವಾಗ ಅಲ್ಲಿ ಕಳ್ಳರು ಅಡ್ಡಗಟ್ಟಿ ಆ ಗಾಡಿಗಳಿಂದ ಸಾಮಾನು ದೋಚಿಕೊಂಡು ಹೋಗುತ್ತಿದ್ದರು. ನಮ್ಮ ಊರು ಅಲ್ಲಿಂದ

ಅತಿ ಸಮೀಪವಿರುವುದರಿಂದ ಅಪ್ಪಯ್ಯನಿಗೆ ಕಳ್ಳರನ್ನು ಹಿಡಿಯಬೇಕು ಅಥವಾ ಕಳ್ಳರು ಅಲ್ಲಿ ಬರದಂತೆ ಮಾಡಬೇಕು, ಎಂದೆನಿಸಿ, ಚಕ್ಕಡಿಗಾಡಿಗಳು ಸಾಮಾನು ತುಂಬಿಕೊಂಡು ಹೋಗುವ ಸಮಯದಲ್ಲಿ ಕವಣೆ ಮಾಡಿಕೊಂಡು ಕವಣೆಗೆ ಬೇಕಾದಷ್ಟು ಕಲ್ಲು ಇಟ್ಟುಕೊಂಡು ದೊಡ್ಡಪ್ಪನೊಡನೆ ಆ ಸ್ಥಳಕ್ಕೆ ಹೋಗಿ, ಒಂದು ಮರದ ಹಿಂದೆ ನಿಂತು ಕಳ್ಳರಿಗೆ ಕವಣೆಗಳಿಂದ ಗುರಿ ಇಟ್ಟು ಹೊಡೆಯುತ್ತಿದ್ದನಂತೆ. ಕಳ್ಳರು ಅಲ್ಲಿಯೇ ಇರುವ ಬೀರಲು ದೇವರ ಕಾಟ ತಮಗೆ ಬಂದಿತೆಂದೂ, ಆ ಸ್ಥಳವನ್ನು ಬೀರಲು ದೇವರು ಕಾಯುವನೆಂದೂ ತಿಳಿದು ಅಲ್ಲಿಗೆ ಕಳ್ಳತನಕ್ಕೆ ಬರುವುದನ್ನೇ ಬಿಟ್ಟುಬಿಟ್ಟರಂತೆ.

ಮತ್ತೊಂದು ಘಟನೆ : ನಾನು ಹುಟ್ಟಿದ ಸಂವತ್ಸರದಲ್ಲಿ, ಅಂದರೆ ಬಹುಧಾನ್ಯ ಸಂವತ್ಸರದಲ್ಲಿ, ಆಲ್ಮನೆಯ ತೋಟವನ್ನು ನನ್ನ ಅಪ್ಪಯ್ಯ ಹಾಗೂ ದೊಡ್ಡಪ್ಪ ಖರೀದಿಸಿದರು. ಅದೇ ಊರಲ್ಲಿ ಆ ತೋಟವನ್ನು ಖರೀದಿಸುವ ಆಕಾಂಕ್ಷೆ ಇರುವವರೊಬ್ಬರಿದ್ದರು. ಅವರ ತೋಟವು ನಮ್ಮ ಆಲ್ಮನೆ ತೋಟಕ್ಕೆ ಹೊಂದಿಕೊಂಡೇ ಇದೆ. ಅವರಿಗೆ ಹೇಗಾದರೂ ಮಾಡಿ ಅಪ್ಪಯ್ಯ ದೊಡ್ಡಪ್ಪ ಅಲ್ಲಿಗೆ ಬರದಂತೆ ಮಾಡಬೇಕೆಂದೆನಿಸಿ ಕಿರುಕುಳ ಕೊಡುತ್ತಿದ್ದರು. ಒಮ್ಮೆ ಅಪ್ಪಯ್ಯ ಅಡಿಕೆ ಮರ ಹತ್ತಿ ಪಕ್ಕದಲ್ಲಿರುವ ದೊಡ್ಡದಾಗಿ ಬೆಳೆದು ಹೋದ ಮಾವಿನ ಮರದ ಟೊಂಗೆಗಳನ್ನು ಕಡಿಯುತ್ತಿರುವಾಗ, ಆ ಮಹಾಶಯ ಬಂದು ಅಪ್ಪಯ್ಯನ ವಿರುದ್ಧ ಒಂದೆರಡು ಅವಾಚ್ಯ ಶಬ್ದಗಳನ್ನು ಬಳಸಿದನಂತೆ. ಅಪ್ಪಯ್ಯ ಕೂಡಲೇ ಜರ್‍ನೆ ಅಡಿಕೆ ಮರದಿಂದ ಕೆಳಗಿಳಿದು ಅವನ ತಲೆಗೆ ಚೆನ್ನಾಗಿ ನಾಲ್ಕು ಪೆಟ್ಟು ಕೊಟ್ಟನಂತೆ. ಅಲ್ಲಿಂದ ಅವನು ಓಡಿಹೋದ. ಮುಂದೆಂದೂ ಅಪ್ಪಯ್ಯನ ಉಸಾಪರಿಗೆ ಬರಲಿಲ್ಲ.

ಇನ್ನೂ ಒಂದು ಘಟನೆ : ಅಪ್ಪಯ್ಯ ಮಧ್ಯಾಹ್ನ ಶಿರಸಿಯಿಂದ ಸೈಕಲ್ ಮೇಲೆ ಬರುವಾಗ, ಯಾರೋ ಒಬ್ಬರು ಒಂದು ಬಾಳೆಕಾಯಿ ಗೊನೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುವದನ್ನು ಕಂಡ. ಸ್ವಲ್ಪ ಮುಂದೆ ಬಂದ ಮೇಲೆ ಅದು ನಮ್ಮ ತೋಟದಲ್ಲಿ ಬೆಳೆದ ಬಾಳೆಗೊನೆ ಎಂಬುದು ಅವನಿಗೆ ಖಾತ್ರಿಯಾಯಿತು. ಕೂಡಲೇ ಸೈಕಲ್ ಹಿಂದೆ ತಿರುಗಿಸಿಕೊಂಡು ಹೋಗಿ ಅವನನ್ನು ಹಿಡಿದು, ಅವನಿಂದ ತಪ್ಪಾಯಿತೆಂದು ಹೇಳಿಸಿ, ಅವನ ತಲೆಯ ಮೇಲೇ ಅದನ್ನು ಹೊರಿಸಿಕೊಂಡು ಮನೆಗೆ ಬಂದ. ಅವನ ಕೃಶ ದೇಹ, ಹಸಿದ ಮುಖ ನೋಡಿ, ಊಟ ಮಾಡಿಸಿ, ಇನ್ನು ಮುಂದೆ ಕಳ್ಳತನ ಮಾಡಬೇಡೆಂದು ಹೇಳಿ ಕಳುಹಿಸಿದ.

ಅಪ್ಪಯ್ಯನಿಗೆ ಕೃಷಿ ಹಾಗೂ ವ್ಯಾಪಾರದಲ್ಲಿ ಆಸಕ್ತಿ ಇದ್ದಂತೆ ನಾಟಕ, ಯಕ್ಷಗಾನಗಳಲ್ಲೂ ಆಸಕ್ತಿ ಇತ್ತು. ಜೀವನದಲ್ಲಿ ಒಂದು ತರಹದ ಕುತೂಹಲವೂ ಇತ್ತು. ಮನುಷ್ಯ ಚೌಕಾಶಿಯಿಂದ ಬದುಕಬಾರದು; ದೇವರು ಕೊಟ್ಟಾಗ ಸಮೃದ್ಧಿ, ತೃಪ್ತಿಯಿಂದ ಬಾಳಬೇಕು ಎಂದು ಹೇಳುತ್ತಿದ್ದ. ೧೯೫೭ ರಲ್ಲಿ ಅಪ್ಪಯ್ಯನಿಗೆ ಕ್ಯಾನ್ಸರ್ ಆಗಿದೆಯೆಂದು, ಡಾಕ್ಟರರ ಸಲಹೆಯ ಮೇರೆಗೆ ಮುಂಬಯಿಗೆ ಅವನನ್ನು ನಾನು ಕರೆದುಕೊಂಡು ಹೋಗಿದ್ದೆ. ಆಗ ನಾನು ತಿನ್ನುವದು, ರೂಮಿನಲ್ಲಿ ಸುಮ್ಮನೇ ಓದುತ್ತ ಕೂಡ್ರುವದನ್ನು ನೋಡಿ ನನಗೆ ಹೇಳುತ್ತಿದ್ದ, 'ಇಲ್ಲಿಗೆ ಬರುವದು ಅಪರೂಪ. ಇಲ್ಲಿ ಸಿನೆಮಾ ನೋಡಿ ಬಾ. ಹೊಸ ತರಹದ

ತಿಂಡಿ ಇಲ್ಲಿ ಮಾಡುತ್ತಾರೆ, ಅದನ್ನು ತಿಂದು ಬಾ' ಎಂದು ಒತ್ತಾಯಿಸುತ್ತಿದ್ದ. ಆಗಲೇ ಅವನು, ತನಗೆ ಅಲ್ಲಿಯ ಭಾಷೆ ಬರದಿದ್ದರೂ, ಎರಡು ಮೂರು ಭಾಷೆಗಳ ಕೆಲ ಶಬ್ದಗಳನ್ನಷ್ಟೇ ಬಳಸಿ, ತನ್ನ ವಿಚಾರವನ್ನು ಅವರಿಗೆ ತಿಳಿಯಪಡಿಸುತ್ತಿದ್ದ ಎಂಬುದನ್ನು ತಿಳಿದುಕೊಂಡೆವು. ಅಪ್ಪಯ್ಯನು ಸುಂದರವಾದ ವಸ್ತುಗಳು, ಸುಂದರ ಸ್ತ್ರೀ-ಪುರುಷರನ್ನು ನೋಡಿ ಸಂತೋಷ ಪಡುತ್ತಿದ್ದ. ಜೀವನದಲ್ಲಿ ಎಲ್ಲವನ್ನೂ ನೋಡಬೇಕು, ಅನುಭವಿಸಬೇಕು, ಎಂಬುದೂ ಅವನ ಅಭಿಪ್ರಾಯ. ಒಮ್ಮೆ ಅವನ ಪ್ರಾಯದ ಕಾಲದಲ್ಲಿ ಅವನ ಮಿತ್ರನೊಡನೆ ಓರ್ವ ವೇಶ್ಯೆಯ ಮನೆಗೆ ಹೋಗಿದ್ದನಂತೆ. ಅಲ್ಲಿ ಏನು ಮಾಡಿದಿರಿ?– ಎಂದು ಕೇಳುವದಿಲ್ಲವೇ? ಎಂದು ಅವನೇ ಕೇಳಿದ. ಅವನದೇ ಉತ್ತರ : ನಮಗೆ ಆ ವೇಶ್ಯೆಯರಲ್ಲಿ ಆಸಕ್ತಿ ಇರಲಿಲ್ಲ. ವೇಶ್ಯೆಯರು ಹೇಗೆ ಇರುತ್ತಾರೆ ಹಾಗೂ ಏನು ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಹೋಗಿದ್ದೆವು. ಅವಳು ನಾವು ಹೋದಾಗ ಹಾರ್ಮೋನಿಯಂ ನುಡಿಸುತ್ತ ಹಾಡುತ್ತಿದ್ದಳು. ಅಲ್ಲದೆ ಆ ಹಾಡು ಮುಗಿದೊಡನೆ ನಾಚು(ನೃತ್ಯ) ಮಾಡಿದಳು ಎಂದ. ಇವರು ಮುಕ್ಕಾಲು ತಾಸು ಮಾತ್ರ ಅಲ್ಲಿದ್ದರಂತೆ.

ನನಗೆ ಅಪ್ಪಯ್ಯನನ್ನು ನೆನೆಸಿಕೊಂಡಾಗ 'ಮೇಯರ್ ಆಫ್ ಕ್ಯಾಸ್ಟರ್‌ಬ್ರಿಜ್' ಕಾದಂಬರಿಯ ನೆನಪಾಗುತ್ತದೆ. ಬಡತನದಿಂದ ಮೇಲೆ ಎದ್ದು, ನಂತರ ಎಲ್ಲವನ್ನೂ ಕಳೆದುಕೊಂಡು ಮೊದಲಿನ ಬಡತನದ ಸ್ಥಿತಿಗೆ ಮೇಯರ್ ಬರುತ್ತಾನೆ. ಅಪ್ಪಯ್ಯ ಬಡತನದಿಂದ ಮೇಲೆದ್ದು ವ್ಯಾಪಾರ ಮಾಡಿ ದುಡಿದು ಹಣವಂತನಾದುದು ಅವನ ಹಾಗೂ ದೊಡ್ಡಪ್ಪನ ಪರಿಶ್ರಮದಿಂದ. ಈ ಪರಿಶ್ರಮದಲ್ಲಿ ಅಪ್ಪನದು ಪ್ರತಿಶತ ನೂರಕ್ಕೆ ತೊಂಬತ್ತು. ೧೯೬೪ ರಿಂದ ಅಪ್ಪಯ್ಯನ ವ್ಯಾಪಾರ ಜಾರುವ ದಾರಿಯಲ್ಲಿ. ಚಾಲಿಯನ್ನು ಮಾರಿ ಲಕ್ಷಗಟ್ಟಲೆ ನಷ್ಟ ಅನುಭವಿಸಿದ. ದೊಡ್ಡಪ್ಪ ಅವನ ಕುಂಡಲಿಯನ್ನು ನೋಡಿ, ಅಪ್ಪಯ್ಯ ವ್ಯಾಪಾರ ಮಾಡಿದರೆ ಮತ್ತೂ ಹೆಚ್ಚಿನ ನಷ್ಟವಾಗುವದೆಂದು ವ್ಯಾಪಾರವನ್ನೇ ಬಿಟ್ಟು ಬಿಡಲು ಸಲಹೆ ನೀಡಿದ. ಅಲ್ಲದೆ ಟಿ.ಎಸ್.ಎಸ್.ಗೆ ಪತ್ರ ಬರೆದು ಅವರ ಜಂಟಿ ಖಾತೆಯನ್ನು ಅಪ್ಪಯ್ಯ ಆಪರೇಟ್ ಮಾಡದಂತೆ ತಿಳಿಸಿದ. ವಖಾರಿಯ ವ್ಯವಹಾರವನ್ನೂ ಅಪ್ಪಯ್ಯನು ನಡೆಸದಂತೆ ಮಾಡಿದ್ದು ಅಪ್ಪಯ್ಯನಿಗೆ ತಿಳಿದದ್ದು ಅವನು ಸ್ವಲ್ಪ ಹಣ ಬೇಕೆಂದು ಕೇಳಲು ಹೋದಾಗ ಮಾತ್ರ. ಅಪ್ಪಯ್ಯನ ಸ್ವಾಭಿಮಾನಕ್ಕೆ ಧಕ್ಕೆ ತಗಲಿ 'ಇನ್ನು ನನ್ನ ಜೀವ ಇರುವವರೆಗೆ ನಿಮ್ಮ ವಖಾರಿಯ ಮೆಟ್ಟಿಲು ಹತ್ತುವದಿಲ್ಲ' ಎಂದು ಹೇಳಿ ಬಂದವನು ಆ ವಖಾರಿಗೆ ಹೋಗಲಿಲ್ಲ.

ಅಪ್ಪಯ್ಯನಿಗೂ ಜಾತಕದಲ್ಲಿ ಬಹಳ ನಂಬಿಕೆ ಇತ್ತು. ತನ್ನ ಜಾತಕವನ್ನು ತಾನೇ ನೋಡಿಕೊಂಡು ಫೆಬ್ರುವರಿ ೨೫ (೧೯೭೨) ಕಳೆಯಲಿ; ನಂತರ ಮತ್ತೆ ವ್ಯಾಪಾರ ಮಾಡುತ್ತೇನೆ ಎಂದು ಹೇಳುತ್ತಿದ್ದ. ಅದೇ ಸಮಯದಲ್ಲಿ ಅಪ್ಪಯ್ಯನಿಗೆ ಎಲ್ಲಿಯೂ ಹಣ ಸಿಗದಂತೆ ದೊಡ್ಡಪ್ಪ ವ್ಯವಸ್ಥೆ ಮಾಡಿದ್ದು ಅಪ್ಪಯ್ಯನಿಗೆ ತಿಳಿಯಿತು. ಹಾಗೆ ಮಾಡಿದರೆ ನಮ್ಮ ಜಾಯಿಂಟ್ ಕುಟುಂಬದಲ್ಲಿ ಎರಡು ಭಾಗವಾಗುವದು ಹಾಗೂ ಅಪ್ಪಯ್ಯನಿಗೆ ಅರ್ಧ ಆಸ್ತಿ ಸಿಕ್ಕುವದು; ದೊಡ್ಡಪ್ಪನಿಗೆ ಅರ್ಧ ಆಸ್ತಿ. ಅಪ್ಪಯ್ಯನ ಕುಟುಂಬ ದೊಡ್ಡದು ಅಲ್ಲದೆ ಅಪ್ಪಯ್ಯನಿಗೆ ಇನ್ನೂ ಮದುವೆಯಾಗದ ಮೂರು ಹೆಣ್ಣುಮಕ್ಕಳಿದ್ದರು. ಅಲ್ಲದೆ ಗಂಡುಮಕ್ಕಳು ಕೂಡ

ಚಿಕ್ಕವರಿರುವವರಿಂದ ಅವರನ್ನು ಓದಿಸುವ ಭಾರವೂ ಅಪ್ಪಯ್ಯನ ಮೇಲೇ ಬರುವದು. ದೊಡ್ಡಪ್ಪನಿಗಾದರೆ ಒಂದೇ ಮಗ. ಆಸ್ತಿಯಲ್ಲಿ ಪಾಲಾದರೆ ಅವನು ಸಾಕಷ್ಟು ಉಳಿತಾಯವನ್ನು ಮಾಡಬಹುದು– ಹೀಗೆ ದೊಡ್ಡಪ್ಪನು ವಿಚಾರ ಮಾಡಿ ತನ್ನ ಮೇಲೆ ಆರ್ಥಿಕ ದಿಗ್ಬಂಧನ ಹಾಕಿದ್ದಾನೆಂದು ಅಪ್ಪಯ್ಯ ತಿಳಿದ. ಅಲ್ಲದೆ ತಾನು ಸಾಯುವ ವರೆಗೆ ಮನೆ ಒಡೆಯಲು ಬಿಡುವದಿಲ್ಲವೆಂದೂ ಹೇಳಿದ.

ಆದರೆ ಇದೆಲ್ಲ ನಡೆಯುವಾಗ ಅಪ್ಪಯ್ಯ ಮಾನಸಿಕ ಒತ್ತಡದಲ್ಲೇ ಇರುತ್ತಿದ್ದ. ಫೆಬ್ರುವರಿ ೨೫ ಕಳೆದರೆ ಮತ್ತೆ ವ್ಯಾಪಾರವನ್ನಾರಂಭಿಸುವೆ ಎಂದು ಹೇಳಿದವನು ಫೆಬ್ರುವರಿ ೨೪ ರಂದು ಬೆಳಿಗ್ಗೆ ೧೦ ಘಂಟೆಗೆ ಮನೆಯಿಂದ ಹೋದದ್ದು ಅಲ್ಲಿದ್ದವರಿಗೆ ಗೊತ್ತು. ಅವನು ಹೊರಗೆ ಹೋಗುವಾಗ ಹಾಕಿಕೊಳ್ಳುವ ಅವನ ಧೋತರ, ಅಂಗಿ ಹಾಗೂ ಕರಿ ಟೊಪ್ಪಿ ಮನೆಯಲ್ಲೇ ಇದ್ದವು. ಸಂಜೆ ೪-೫ ಘಂಟೆಯಾದರೂ ಅಪ್ಪಯ್ಯ ಮನೆಗೆ ಬರಲಿಲ್ಲ. ಆಮೇಲೆ ಎಲ್ಲ ಕಡೆ ಹುಡುಕಿದರು. ಅಪ್ಪಯ್ಯ ಆಲ್ಮನೆಯ ಹತ್ತಿರದ ಒಂದು ಗುಡ್ಡದ ಮೇಲೆ ಚಿರನಿದ್ರೆಯಲ್ಲಿ ಮಲಗಿದ್ದ.

● ●

ಪರಮೇಶ್ವರ ಮ. ಹೆಗಡೆ : ಪೂರ್ಣಿಮಾ ನಿವಾಸ, ಹೊಸಪೇಟೆ ವಿಸ್ತರಣೆ, ಶಿರಸಿ - ೫೮೧ ೪೦೧

'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತೆ- ೧೮

ಸೋದರ ಅತ್ತೆ ನನ್ನ ಅಮ್ಮ

ಉಮೇಶ ಎಸ್. ಸಂಗನಾಳಮಠ

ನನ್ನ ಪೂರ್ವಿಕರು ಯಲಬುರ್ಗಾದ ಸಂಗನಾಳಕ್ಕೆ ಸೇರಿದವರು. ಕಲ್ಯಾಣ ಕ್ರಾಂತಿಯ ಸಮಯದಲ್ಲಿ ಅನೇಕ ಶರಣರು ಚದುರಿದ ಸಮಯದಲ್ಲಿ ಈ ನನ್ನ ಪೂರ್ವಿಕರು ನೆಲೆಸಿರಬಹುದು ಎಂದು ಅಜ್ಜ ನನಗೆ ಹೇಳುತ್ತಿದ್ದರು. ಅಲ್ಲಿಂದ ಕೆಲವು ತಲೆಮಾರುಗಳ ಹಿಂದೆ ಹಾವೇರಿ, ರೋಣ, ಧಾರವಾಡ, ರಾಯಚೂರ ಈ ಪ್ರದೇಶಗಳಲ್ಲಿ ಹಲವಾರು ಕಾರಣಗಳಿಂದ ವಲಸೆ ಬಂದಿರುವರು. ಹೀಗೆ ನನ್ನ ಅಜ್ಜ ನೆಲೆಸಿದ್ದು ರೋಣ ತಾಲೂಕಿನ ನರೇಗಲ್ಲ. ನನ್ನ ಅಜ್ಜ ಕರಬಸಯ್ಯ ಸಂಗನಾಳಮಠ ಚಿಕ್ಕಪುಟ್ಟ ವ್ಯಾಪಾರ ಮಾಡುತ್ತಿದ್ದರು. ಬಡತನದ ಜಂಗಮ ಕುಟುಂಬ. ಸ್ವಲ್ಪ ಹೊಲ ಇದ್ದಿತಂತೆ. ಅದು ಮಳೆ ಅವಲಂಬಿತವಾದದ್ದು. ಎರೆ ಭೂಮಿ. ಜೋಳ, ಗೋದಿ, ಬೇಳೆಕಾಳುಗಳನ್ನು ಬೆಳೆಯುತ್ತಿದ್ದರಂತೆ. ಅಜ್ಜ ಅಲ್ಪಸ್ವಲ್ಪ ವೈದ್ಯವಿದ್ಯೆಯನ್ನು ಕಲಿತಿದ್ದರು. ಊರಲ್ಲಿ ತಮಗೆ ತಿಳಿದ ಮಟ್ಟಿಗೆ ಕೆಲವು ಸಾಮಾನ್ಯ ರೋಗಗಳಿಗೆ ಔಷಧಿ ಕೊಡುತ್ತಿದ್ದರಂತೆ. ನನ್ನ ಅಜ್ಜನಿಗೆ ನೀಲಕಂಠಯ್ಯ, ಚಂದ್ರಶೇಖರಯ್ಯ ಮತ್ತು ಶಂಕರಯ್ಯ ಎಂಬ ಮೂವರು ಗಂಡುಮಕ್ಕಳು, ಹಾಗೂ ಓರ್ವ ಹೆಣ್ಣುಮಗಳಿದ್ದಳು. ಮಕ್ಕಳು ವಿದ್ಯೆಯಲ್ಲಿ ಆಸಕ್ತಿ ಹೊಂದಿದ್ದರಿಂದ ಸಾಧ್ಯವಾದಷ್ಟು ಶಿಕ್ಷಣವನ್ನು ಕೊಡಿಸಿದರು. ನೀಲಕಂಠಯ್ಯ ಮತ್ತು ಶಂಕರಯ್ಯ ಪದವಿ ವರೆಗೆ ಶಿಕ್ಷಣ ಹೊಂದಿದರೆ, ಚಂದ್ರಶೇಖರಯ್ಯ ಮ್ಯಾಟ್ರಿಕ್ ನಂತರ ಶಿಕ್ಷಣವನ್ನು ಮುಂದುವರಿಸದೇ ವೈದ್ಯ ವೃತ್ತಿಯನ್ನು ತಂದೆಯಿಂದ ಹೊಂದಿ ಅದರಲ್ಲಿ ಹೆಚ್ಚಿನ

ವಿದ್ಯಾಭ್ಯಾಸ ಮಾಡಿ ಉತ್ತಮ ಆಯುರ್ವೇದ ವೈದ್ಯರಾಗಿ ಸುತ್ತಲಿನ ಊರುಗಳಲ್ಲಿ ಪ್ರಸಿದ್ಧರಾಗಿದ್ದರು. ಅವರ ಮಗ ಈಗ ಗಂಗಾವತಿಯ ಬಳಿ ಮರಲಾನಹಳ್ಳಿಯಲ್ಲಿ ವೈದ್ಯಕೀಯ ವೃತ್ತಿ ನಡೆಸುತ್ತಿದ್ದರೆ, ಉಳಿದವರು ನರೇಗಲ್ಲಿನಲ್ಲಿದ್ದಾರೆ.

ನೀಲಕಂಠಯ್ಯ ನನ್ನ ಅಪ್ಪ. ಅಪ್ಪನ ಸಂಪರ್ಕ ನನಗೆ ಇಲ್ಲವೇ ಇಲ್ಲ. ಇದೇ ನನ್ನ ಜೀವನದ ರಹಸ್ಯ. ಅಪ್ಪನ ಬಗ್ಗೆ, ಅವನ ಸ್ವಭಾವದ ಬಗ್ಗೆ ಆಪ್ತರಿಂದ, ನನ್ನ ಹೆಣ್ಣಜ್ಜನಿಂದ ಕೆಲವು ವಿಷಯಗಳು ತಿಳಿದಿವೆ. ಅಪ್ಪನದು ವಿಕ್ಷಿಪ್ತ ಸ್ವಭಾವ. ಅಷ್ಟೊಂದು ಎತ್ತರವಲ್ಲದ, ಬೆಳ್ಳನೆಯ ದಪ್ಪ ದೇಹದ ವ್ಯಕ್ತಿ. ತುಂಬ ಗಂಭೀರ. ಶಿಸ್ತಿಗೆ ಮಹತ್ವ ಕೊಟ್ಟವ. ಆದರೆ ಹೃದಯಶೂನ್ಯ. ಅಂತಃಕರಣವಿಲ್ಲದವ. ಕುಡಿತ ಹೆಣ್ಣಿನ ಚಟವಿಲ್ಲದ, ಸಿಗರೇಟುಪ್ರಿಯ ವ್ಯಕ್ತಿ.

ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಎ.(ಆನರ್ಸ್) ಹೊಂದಿ ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ ಕೆಲಕಾಲ ಸೇವೆ ಸಲ್ಲಿಸಿ ನಂತರ ಬಿಜಾಪುರದ ಸರಕಾರಿ ಹೈಸ್ಕೂಲಿನಲ್ಲಿ ತಮ್ಮ ಸೇವೆ ಪ್ರಾರಂಭಿಸಿದರು. ಬೆಳಗಾಂವ ಸಮೀಪದ ಸಂಪಗಾಂವ ಊರಿನ ಕನ್ಯೆಯನ್ನು ಮದುವೆಯಾದರು. ಇವರು ನನ್ನ ಅಪ್ಪನ ಮೊದಲ ಹೆಂಡತಿ. ಇವರಿಗೆ ಒಬ್ಬ ಮಗ ಹುಟ್ಟಿದ ಮೇಲೆ ಹೆಂಡತಿ ತೀರಿಕೊಂಡಳು. ನನ್ನ ಅಣ್ಣ, ನರೇಗಲ್ಲಿನಲ್ಲಿ ಚಿಕ್ಕಪ್ಪನವರ ಸಹಾಯದಿಂದ; ಮತ್ತು ಪ್ರತಿಭಾವಂತ ವಿದ್ಯಾರ್ಥಿ ಆದದ್ದರಿಂದ ಶಿಷ್ಯವೇತನ ಮತ್ತು ಇತರರ ಸಹಾಯದಿಂದ ಶಿಕ್ಷಣ ಪಡೆದು ಬೆಳಗಾಂವಿಯ ಖಾಸಗಿ ಹೈಸ್ಕೂಲಲ್ಲಿ ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದಾರೆ. ಅಪ್ಪನಾದವನು ಮಗನ ಯಾವ ವಿಷಯದ ಕಡೆಗೂ ಲಕ್ಷ್ಯವಹಿಸಲಿಲ್ಲ ಎಂದು ನನಗೆ ಹೇಳಿದನು. ನನ್ನ ಅಪ್ಪನ ಎರಡನೆಯ ಹೆಂಡತಿ ನನ್ನ ಹಡೆದವ್ವ. ನನ್ನ ಅವ್ವನ ತವರೂರು ಹುಬ್ಬಳ್ಳಿ. ನನ್ನ ಅವ್ವನ ತಂದೆ (ಹೆಣ್ಣಜ್ಜ) ೨೦ನೇ ಶತಮಾನದ ಪ್ರಾರಂಭ ಕಾಲದ ಸಾಹಿತಿ, ಶಿಕ್ಷಣತಜ್ಞ ಬಸವಾರ್ಯ ಬೂದಿಹಾಳಮಠ. ನನ್ನ ಅವ್ವ ಸರ್ವಮಂಗಳ. ಮ್ಯಾಟ್ರಿಕ್ ಪಾಸಾಗಿದ್ದರು. ಪ್ರಜಾಮತದಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ನನ್ನ ಅವ್ವನ ಬಣ್ಣ ಕಪ್ಪು. ತೆಳ್ಳಗೆ ಇದ್ದರಂತೆ. ನನಗೆ ನನ್ನ ಅವ್ವನನ್ನು ನೋಡಿದ ನೆನಪಿಲ್ಲ. ಏಕೆಂದರೆ ನಾನು ಮೂರು ವರ್ಷದವನಿದ್ದಾಗ ಅವ್ವನನ್ನು ಕಳೆದುಕೊಂಡೆ. ಅವ್ವ ನನ್ನ ಅಪ್ಪನನ್ನು ಮೆಚ್ಚಿ ಮದುವೆಯಾದರಂತೆ. ಮದುವೆ ನಂತರ ಮುಂಬಯಿ ಎಸ್.ಟಿ. ಕಾಲೇಜಿನಲ್ಲಿ ಬಿ.ಟಿ. ಪದವಿಯನ್ನು ಪಡೆದು, ಇಂಡಿ, ಕಾರವಾರದಲ್ಲಿ ಸೇವೆ ಸಲ್ಲಿಸಿ ಮಹಾರಾಷ್ಟ್ರದ ಡಾಂಗ್ ಪ್ರದೇಶದ ಆಹವಾದಲ್ಲಿ ಆಡಳಿತಾಧಿಕಾರಿಯಾದಾಗ ನಾನು ಹುಟ್ಟಿದ್ದು. ಈಗಾಗಲೇ ನನಗಿಂತ ೧೦ ವರ್ಷಕ್ಕೆ ಹಿರಿಯಳಾದ ಉಷಕ್ಕಳಿದ್ದಳು. ನಾನು ಹುಟ್ಟಿದ್ದು ಪುಣೆಯ ಡಾ. ಮುಳೆ ದವಾಖಾನೆಯಲ್ಲಿ ೧೯೪೪ ರಲ್ಲಿ. ನನಗೆ ೨ ವರ್ಷವಾದಾಗ ಪ್ಲೂರಸಿ ಎಂಬ ರೋಗದಿಂದ ಉಳಿದದ್ದೇ ಹೆಚ್ಚು. ಅದರ ದೆಸೆಯಿಂದ, ನೆಗಡಿ-ಜ್ವರ-ಶೀತ ನನ್ನ ೨೨ ನೆಯ ವಯಸ್ಸಿನ ವರೆಗೂ ತಪ್ಪಲಿಲ್ಲ. ಮದುವೆಯ ನಂತರ ನನ್ನ ಪ್ರಕೃತಿಯಲ್ಲಿ ಬದಲಾವಣೆಯಾಯಿತು. ಆದರೆ ತೆಳ್ಳನೆಯ ಶರೀರ ಇನ್ನೂ ಹಾಗೆಯೇ ಇದೆ.

ನನ್ನ ಅವ್ವ ಸಾಯುವಾಗ ತನ್ನ ಅಣ್ಣನ ಮಡಿಲಲ್ಲಿ ತಲೆಯಿಟ್ಟು ತನ್ನ ಇಬ್ಬರೂ ಮಕ್ಕಳನ್ನು ಜೋಪಾನ ಮಾಡಿ ಅವರ ಮುಂದಿನ ಆಗು-ಹೋಗುಗಳ ಜವಾಬ್ದಾರಿಯನ್ನು

ವಹಿಸಿ ಮಾತನ್ನು ತೆಗೆದುಕೊಂಡಳಂತೆ. ಆ ಮಾತಿನ ಪ್ರಕಾರ ನನ್ನ ಸೋದರಮಾವ ನನ್ನ ಮತ್ತು ಅಕ್ಕನ ಜವಾಬ್ದಾರಿ ವಹಿಸಿಕೊಂಡರು. ಅವರಿಗೂ ಮಕ್ಕಳಾಗಲಿಲ್ಲ. ನನ್ನ ಅವ್ವ ಸತ್ತ ಎರಡು ವರ್ಷಕ್ಕೆ ಅಪ್ಪ ಪುನಃ ಮದುವೆ ಆದನು. ಹೀಗಾಗಿ ನಾನು ಮತ್ತು ಅಕ್ಕ ಬೆಳೆದದ್ದು ಅಜ್ಜ ಮತ್ತು ಸೋದರಮಾವ-ಅತ್ತೆಯ ಆಶ್ರಯದಲ್ಲಿ. ಸೋದರಮಾವ ಮತ್ತು ಅತ್ತೆಯವರೇ ನನ್ನಪ್ಪ ನನ್ನವ್ವ. ಅತ್ತೆಯನ್ನು ಎಂದೂ ಅತ್ತೆ ಎಂದು ಕರೆಯದೇ ಅಮ್ಮ ಎಂದೆನ್ನುತ್ತಿದ್ದೆನು. ಅವರ ಹೆಸರು ಪಾರ್ವತಮ್ಮ. ಅಜ್ಜ ಈಗಾಗಲೇ ನಿವೃತ್ತಿ ಹೊಂದಿ ಮನೆಯಲ್ಲಿದ್ದರು.

ನನ್ನ ಸೋದರಮಾವ ಸ್ವಾತಂತ್ರ್ಯ ಹೋರಾಟಗಾರ, ಪತ್ರಕರ್ತ ಮತ್ತು ಸಾಹಿತಿಗಳಾದ ಎಂ. ಬಿ. ಬೂದಿಹಾಳಮಠ. ರವೀಂದ್ರರ 'ಗೀತಾಂಜಲಿ'ಯನ್ನು ೧೯೪೩ ರಲ್ಲಿ ಪ್ರಥಮವಾಗಿ ಕನ್ನಡಕ್ಕೆ ಅನುವಾದಿಸಿದ ಮತ್ತು ಸುಭಾಸಚಂದ್ರ ಬೋಸರನ್ನು ಪ್ರಥಮವಾಗಿ ಕರ್ನಾಟಕದ ಧಾರವಾಡಕ್ಕೆ ಕರೆಯಿಸಿದ ವ್ಯಕ್ತಿ. ಚಿಕ್ಕ ವಯಸ್ಸಿನಲ್ಲಿ ಅಜ್ಜ ನನಗೆ ಅಕ್ಷರಜ್ಞಾನವನ್ನು ಮತ್ತು ಮಗ್ಗಿಯನ್ನು ಕಲಿಸಿದರು. ಒಂದು ಪರೀಕ್ಷೆ ಮಾಡಿ ಒಮ್ಮೆಲೆ ಮೂರನೇ ತರಗತಿಗೆ ಸೇರಿಸಿದರು! ಹುಬ್ಬಳ್ಳಿಯ ಹೊಸೂರಿನಲ್ಲಿಯ ೧೬ ನೇ ನಂಬರ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ೩ ರಿಂದ ೭ ನೇ ತರಗತಿ ವರೆಗೆ ಓದಿದೆನು. ಯಾವಾಗಲೂ ಮೊದಲ ವರ್ಗದಲ್ಲಿ ಪಾಸಾಗುತ್ತಿದ್ದೆನು. ನನ್ನ ಅಪ್ಪ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಯಾಗಿದ್ದಾಗ ನಡೆದ ಒಂದು ಘಟನೆ ನೆನಪಿದೆ. ಆಗ ಶಾಲೆಯಲ್ಲಿ ಪ್ರತಿವರ್ಷ 'ಪಾಲಕರ ದಿನಾಚರಣೆ'ಯನ್ನು ಆಚರಿಸುತ್ತಿದ್ದರು. ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಅಮ್ಮಿನಭಾವಿ ಮಾಸ್ತರರು ನನ್ನ ಅಪ್ಪನಿಗೆ ಅಧ್ಯಕ್ಷರಾಗಲು ಕೇಳಿದಾಗ ಒಪ್ಪಿಗೆ ಕೊಟ್ಟಿದ್ದರಂತೆ. ದಿನಾಚರಣೆಯ ದಿನ ಅವರನ್ನು ಕರೆದುಕೊಂಡು ಬರಲು ಹೋದಾಗ, 'ನಿಮ್ಮ ಮಗ ಉಮೇಶ್ ನಮ್ಮ ಶಾಲೆಯಲ್ಲಿ ಓದುತ್ತಿದ್ದಾನೆ. ಪ್ರತಿಭಾವಂತ.' ಎಂದು ಹೇಳಿದಾಗ ಸ್ವಲ್ಪ ಆಲೋಚಿಸಿ, 'ನನಗೆ ಬೇರೆ ಕೆಲಸವಿದೆ, ನನ್ನ ಸಹಾಯಕ ಅಧಿಕಾರಿಯನ್ನು ಕಳಿಸುವೆ' ಎಂದು ಹೇಳಿ ಹಾಗೆ ಮಾಡಿದರಂತೆ. ಮಾಸ್ತರರು ಬಂದು ಈ ವಿಷಯವನ್ನು ನನ್ನ ಅಜ್ಜನಿಗೆ ಹೇಳಿದರು. ಇದು ನನ್ನ ಅಪ್ಪನ ರೀತಿ.

ನನ್ನನ್ನು ಮತ್ತು ಅಕ್ಕನನ್ನು ಕರೆದುಕೊಂಡು ಬರಲು ನನ್ನ ಅಪ್ಪ ತನ್ನ ಹೆಂಡತಿಯ ತಮ್ಮನನ್ನು ಕಳಿಸಿದ್ದನು. ಆದರೆ ನಾನು ಹೋಗಲು ಒಪ್ಪಲಿಲ್ಲವಂತೆ. ಅಪ್ಪ-ಅವ್ವನಿಗಿಂತ ಹೆಚ್ಚು ಮಮತೆ, ಆರೈಕೆ ಪೋಷಣೆಯನ್ನು ಮಾವ-ಅತ್ತೆಯರಿಂದ ಪಡೆದದ್ದೇ ಅದಕ್ಕೆ ಕಾರಣ. ನನ್ನ ಅಕ್ಕ ಮಾತ್ರ ಹೋದಳು. ನಾಲ್ಕು ತಿಂಗಳಿಗೆ ಅವಳೂ ಬಂದದ್ದಾಯಿತು. ನಾನು ಅಶಕ್ತ ಪ್ರಕೃತಿಯವನಾದ್ದರಿಂದ ಯಾವ ಕೆಲಸವನ್ನೂ ಹಚ್ಚುತ್ತಿದ್ದಿಲ್ಲ. ಮನೆಯಲ್ಲಿ ಚಿಕ್ಕವನು ನಾನು ಒಬ್ಬನೇ ಇದ್ದುದರಿಂದ ಅಕ್ಕರೆಯಿಂದ ಬೆಳೆಸುತ್ತಿದ್ದರು.

ನಾನು ಏಳನೆಯ ತರಗತಿಯಲ್ಲಿ ಓದುತ್ತಿದ್ದಾಗ, ನನ್ನ ಅಪ್ಪನಿಗೆ ಅರ್ಧಾಂಗವಾಯು ಆಗಿದೆ ಎಂಬ ಸುದ್ದಿ ಬಂದಿತು. ವಿಜಾಪುರದಲ್ಲಿ ಶಿಕ್ಷಣಾಧಿಕಾರಿಯಾಗಿದ್ದಾಗ ಕೂಡಲಸಂಗಮಕ್ಕೆ ಹೋದಾಗ ಅರ್ಧಾಂಗವಾಯು ಆಗಿದ್ದರಿಂದ, ಅಂಕೋಲೆಗೆ ಕರೆದುಕೊಂಡು ಹೋಗುವ ದಾರಿಯಲ್ಲಿ ರಾತ್ರಿ ೯ ಗಂಟೆಗೆ ಹುಬ್ಬಳ್ಳಿಯ ಮನೆಗೆ ಕರೆದುಕೊಂಡು ಬಂದರು. ಆಗ ನನ್ನ ಅಪ್ಪನನ್ನು ನೋಡಿದ್ದು ಸ್ಪಷ್ಟವಾಗಿ ನೆನಪಿಲ್ಲ. ಮರುದಿನ ನಾನು ಏಳುವಷ್ಟರಲ್ಲಿ ಕರೆದುಕೊಂಡು

ಹೋಗಿದ್ದರು. ಚಿಕ್ಕಮ್ಮನನ್ನು ಬಿಟ್ಟು ಹೋಗಿದ್ದರು. ಅಂದಿನಿಂದ ಪುನಃ ನನ್ನ ಅಪ್ಪನನ್ನು ನೋಡಲಿಲ್ಲ. ನೋಡಬೇಕು ಎಂದು ಅನಿಸಲಿಲ್ಲ.

ನನ್ನ ಸೋದರಮಾವ ಬಹಳ ಬಿಗಿ. ಅವರನ್ನು ನೋಡಿದರೆ ಭಯ. ಅವರೆಂದೂ ಬೈದವರಲ್ಲ, ಹೊಡೆದವರಲ್ಲ. ನನ್ನನ್ನು ವಿನಾಕಾರಣ ಹೊರಗೆ ಕಳಿಸುತ್ತಿದ್ದಿಲ್ಲ. ಯಾವದೇ ಸ್ನೇಹಿತರೊಂದಿಗೆ ಹೆಚ್ಚಾಗಿ ಬೆರೆಯಲು ಬಿಡುತ್ತಿದ್ದಿಲ್ಲ. 'ಕಂಕಣ' ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದರು. ಪತ್ರಿಕೆಗಳಿಗೆ ವಿಳಾಸ ಬರೆದು ಪೋಸ್ಟ್ ಮಾಡಲು ಸಜ್ಜು ಮಾಡುವದು ನನ್ನ ಕೆಲಸವಾಗಿತ್ತು. ನನ್ನ ಅಕ್ಕನಿಗೆ ಮದುವೆ ಮಾಡಿದರು. ಆಗಲೇ ನನ್ನ ದೀಕ್ಷೆಯಾಯಿತು. ಅಕ್ಕ ನ್ಯಾಮತಿಯ ಗಂಡನ ಮನೆಗೆ ಹೋದಾಗ ಒಂಟಿತನ ಎನಿಸಿತು. ಆಗಿನ ಅಕ್ಕನೊಂದಿಗೆ ಜಗಳ ಮಾಡುತ್ತಿದ್ದ ನನಗೆ ಇಲ್ಲಿಂದ ಒಂಟಿತನವೇ ಮುಂದೆ ಅಭ್ಯಾಸವಾಯಿತು, ಜೀವನ ಸಂಗಾತಿಯಾಯಿತು. ಈಗಲೂ ಸಹ ಮದುವೆ ಗದ್ದಲ ಗಲಾಟೆಗಳಿಂದ ದೂರವಾಗಿ ಏಕಾಕಿತನವೇ ಪ್ರಿಯವಾಗಿದೆ.

ನನ್ನ ಹೈಸ್ಕೂಲ ಅಭ್ಯಾಸ ಹುಬ್ಬಳ್ಳಿ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಆರಂಭವಾಯಿತು. ಮಾವನವರು ಯಾವ ಪಾಠವನ್ನೂ ಹೇಳಿಲ್ಲ. ಧಾರವಾಡದ ಜಯಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದರು. ಅನೇಕ ಪತ್ರಿಕೆಗಳು ಬರುತ್ತಿದ್ದುದರಿಂದ, ಪತ್ರಿಕೆಗಳನ್ನು ಓದುವ ಚಟ ಪ್ರಾರಂಭವಾಯಿತು.

ನನ್ನ ಕಾಲೇಜು ಶಿಕ್ಷಣ ಶ್ರೀ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ನಡೆಯಿತು. ಮಾವನವರು ಪಾಟೀಲ ಪುಟ್ಟಪ್ಪನವರ 'ವಿಶ್ವವಾಣಿ'ಗೆ ಸಹ-ಸಂಪಾದಕರಾಗಿದ್ದಾಗ ಪತ್ರಿಕೋದ್ಯಮದ ಪರಿಚಯವಾಯಿತು. ಅಜ್ಜನನ್ನು ಕಳೆದುಕೊಂಡೆನು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಭ್ಯಾಸದಲ್ಲಿದ್ದಾಗ ಅಮ್ಮನಿಗೆ ಆರೋಗ್ಯ ಸರಿ ಇಲ್ಲದ್ದರಿಂದ ಮನೆಗೆಲಸ ಮಾಡಿಕೊಂಡು ಅಭ್ಯಾಸ ಮಾಡಬೇಕಾಯಿತು. ಒಂದು ವರ್ಷವೂ ಅನುತ್ತೀರ್ಣನಾಗಲಿಲ್ಲ. ಅಂದಿನ ಅಭ್ಯಾಸವನ್ನು ಅಂದೇ ಮಾಡುವದು. ಬೇಸಿಗೆ ರಜೆಯಲ್ಲಿ ಮುಂದಿನ ವರ್ಷದ ಅಭ್ಯಾಸವನ್ನು ನೋಡಿಕೊಳ್ಳುವದು. (ಪ್ರತಿವರ್ಷ ಪಾಸಾಗುತ್ತದೆಂಬ ಆತ್ಮವಿಶ್ವಾಸ ನನ್ನಲ್ಲಿ ಇದ್ದಿತು.) ಮಾವನವರ ಗ್ರಂಥಭಂಡಾರ ಅಪಾರ, ಅಪೂರ್ವವಾದದ್ದು. ಸುಮಾರು ೪,೦೦೦ ಕ್ಕಿಂತ ಹೆಚ್ಚಿನ ಪುಸ್ತಕಗಳು ಇದ್ದವು. ಅಲ್ಲದೇ ಹಳೇ ಆಂಗ್ಲ ಪತ್ರಿಕೆಗಳ ಸಂಗ್ರಹ ಇದ್ದಿತು.

ಹುಬ್ಬಳ್ಳಿಯ ಪ್ರಸಿದ್ಧ ಪ್ರಕಾಶಕರೊಬ್ಬರ ಪುಸ್ತಕಗಳ ಕರಡನ್ನು ತಿದ್ದುತ್ತ ಅಷ್ಟಿಷ್ಟು ಸಂಪಾದನೆಯನ್ನೂ ಮಾಡುತ್ತಿದ್ದೆನು. ಅವರು ನನ್ನ ಒಂದು ಪುಸ್ತಕವನ್ನೂ ಪ್ರಕಾಶಿಸಿದರು. ಎಂ.ಎ. ಆದ ನಂತರ ಪತ್ರಿಕಾರಂಗವನ್ನು ಸೇರಿದೆನು. ಅಮ್ಮನ ಆರೋಗ್ಯ ಉಲ್ಬಣಾವಸ್ಥೆಗೆ ತಲುಪಿದ್ದರಿಂದ ಮದುವೆ ಮಾಡಲು ಮಾವ ನಿರ್ಧರಿಸಿದರು. ಅಮ್ಮನ ಒಪ್ಪಿಗೆಯಿಂದ ಹಳೆಯ ಸಂಬಂಧದಲ್ಲಿ ಹೊದಿಗೆರೆಯ (ತಾ. ಚೆನ್ನಗಿರಿ) ಕನ್ಯೆಯನ್ನು ಮದುವೆ ಆದೆನು. ಆದರೆ ಮದುವೆ ಆದ ಹದಿನೈದು ದಿನದಲ್ಲಿ, ನನ್ನ ೩ ನೇ ವರ್ಷದಿಂದಲೂ ಸಾಕಿ ಸಲುಹಿದ 'ಮಮತೆಯ ಮಾತೆ'ಯನ್ನು ಕಳೆದುಕೊಂಡದ್ದು ನನ್ನ ಬದುಕಿನ 'ಆಘಾತಕಾರಿ' ಘಟನೆ. ತನ್ನ

ಜವಾಬ್ದಾರಿಯನ್ನು ನನ್ನ ಹೆಂಡತಿಗೆ ಒಪ್ಪಿಸಿ ತನ್ನ ಕೊನೆ ಉಸಿರೆಳೆದ ಆ ಪುಣ್ಯಾತ್ಮಳ ಕೃಪಾಶೀರ್ವಾದ ಸದಾಕಾಲ ನನ್ನ ಮೇಲಿದೆ. ಮಾವ ಪತ್ನಿಯ ಅಗಲುವಿಕೆ ಸಹಿಸದೇ ತಾವು ವಾಸಿಸುತ್ತಿದ್ದ ಮನೆಯನ್ನು ಮಾರಿದರು. ಅಲ್ಲಿಂದ ಅಲೆದಾಟ. ನಾನು ಸರಕಾರಿ ನೌಕರಿಯನ್ನು ಸೇರಿ ಊರಿಂದೂರಿಗೆ ಅಲೆಯುತ್ತಿದ್ದಾಗ ಸದಾಕಾಲ ನನ್ನ ಜೊತೆಗಿದ್ದವರು ಸೋದರಮಾವ.

ನನ್ನ ಅಪ್ಪ ಅರ್ಧಾಂಗವಾಯುಪೀಡಿತನಾಗಿ ಸುಮಾರು ೧೫ ವರ್ಷ ಇದ್ದರು. ಅರೆಪ್ರಜ್ಞಾವಸ್ಥೆಯಲ್ಲಿದ್ದರಂತೆ. ನನ್ನ ಮದುವೆಗೂ ಚಿಕ್ಕಮ್ಮ ಮಾತ್ರ ಬಂದಿದ್ದರು. ಆಂಗ್ಲಭಾಷೆಯ ಮೇಲೆ ಅಪಾರ ಪ್ರಭುತ್ವ ಹೊಂದಿದ, ತತ್ವಶಾಸ್ತ್ರದಲ್ಲಿ ಪರಿಣತಿ ಹೊಂದಿದ ಅಪ್ಪ ಕೊನೆಗಾಲದಲ್ಲಿ ಪುಸ್ತಕಗಳನ್ನು ಹರಡಿಕೊಂಡು ಓದುತ್ತ, ಏಕಾಂಗಿಯಾಗಿ ಕಾಲ ಕಳೆಯುತ್ತಿದ್ದರು. ಈಗ್ಗೆ ೨೦ ವರ್ಷಗಳ ಹಿಂದೆ ತೀರಿಕೊಂಡರು. ಅವರು ತೀರಿಕೊಂಡ ಒಂದು ತಿಂಗಳ ನಂತರ ನನಗೆ ಸುದ್ದಿಯು ನರೇಗಲ್ಲ ಊರಿನ ಒಬ್ಬರಿಂದ ತಿಳಿಯಿತು. ಏಕೆಂದರೆ ಅವರ ಸಂಪರ್ಕವೇ ಇದ್ದಿಲ್ಲ. ಇತ್ತಿತ್ತಲಾಗಿ ಸ್ವಲ್ಪ ಸಂಪರ್ಕವಿದೆ. ಚಿಕ್ಕಮ್ಮ ತನ್ನ ತವರೂರಾದ ದೇವರಹಿಪ್ಪರಗಿಯಲ್ಲಿ ವೃದ್ಧಾಪ್ಯದಿಂದ, ಅಪ್ಪನ ಪಿಂಚಣಿಯಿಂದ ಜೀವನ ನಿರ್ವಹಿಸುತ್ತಿದ್ದಾರೆ.

ನನಗೆ ೩ ಮಕ್ಕಳಾದರೂ ನನ್ನ ಮಾವನವರಿಗೆ ನಾನು ಮಗು. ತಂದೆಯ ಸ್ಥಾನದಲ್ಲಿದ್ದು ತಂದೆಯ ಎಲ್ಲ ಕರ್ತವ್ಯಗಳನ್ನು ಮಾಡಿ ನನಗೆ ಒಂದು ನೆಲೆಯನ್ನು ದೊರಕಿಸಿ, ಮನುಷ್ಯನನ್ನಾಗಿ ಮಾಡಿದ ವ್ಯಕ್ತಿ ೫ ವರ್ಷಗಳ ಹಿಂದೆ ನನ್ನನ್ನು ಅಗಲಿದರು. ನನ್ನ ಬರವಣಿಗೆಗಳಿಗೆ ಪ್ರೋತ್ಸಾಹ, ಮಾರ್ಗದರ್ಶನ ನೀಡಿದವರು ನನ್ನ ಅಜ್ಜ ಮತ್ತು ಮಾವ. ಸ್ವಂತ ಮಗನಿಗಿಂತಲೂ ಹೆಚ್ಚಾಗಿ ನನಗೆ ಎಲ್ಲವನ್ನು ಮಾಡಿದ ಸೋದರ ಅತ್ತೆ ನನ್ನ ಅಪ್ಪ ಅಮ್ಮ. ಆ ಮಹಾತಾಯಿಗೆ ಎಷ್ಟು ಋಣಿಯಾದರೂ ಸಾಲದು.

● ●

ಉಮೇಶ ಎನ್. ಸಂಗನಾಳಮಠ : ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು, ಹೊನ್ನಾಳಿ

ಅಯ್ದು ಕವಿತೆಗಳು

ವಿಭಾ

೧. ಆಹ್ವಾನ

ಅಕ್ಷರಗಳೇ ಮಾತಾಡಿ
ಎದೆಯ ಗಾಯ ಬೆಳೆದು
ಒಡೆದು-ಕೀವಾಗಿ ಕಾಲಗರ್ಭದ
ನಡುವೆ ಒಸರುವ ಮುನ್ನ

ನಿರ್ಲಜ್ಜ ಕಾಲ ಚಲಿಸಿ
ದಿನಕ್ಕೊಂದು ಹೆಜ್ಜೆ ಬದಲಿಸಿ
ಒಂದು ದಿನ ಧುತ್ತನೇ ಎರಗಿ
ಚರಿತ್ರೆಯಾಗಿಸುವ ಮುನ್ನ

ಚೂರಿಗಳ ಮೊನೆಗಂಟಿದ
ಹಸಿ ಹಸಿ ನೆತ್ತರಿನ ಬಗ್ಗೆ
ಬೀದಿಯಲ್ಲಿ ಬಿದ್ದ ಅನಾಥ ಕರುಳಿನ ಬಗ್ಗೆ
ಮಡಿಲೊಳಗೇ ಕತ್ತು ಹಿಸುಕಿಕೊಂಡ
ನಿಷ್ಪಾಪಿ ಭ್ರೂಣಗಳ ಬಗ್ಗೆ
ಇನ್ನಾದರೂ ಮಾತಾಡಿ ಅಕ್ಷರಗಳೇ.

ಸ್ಮಶಾನವಾಗುತ್ತಿರುವ ರಾತ್ರಿಗಳು
ಪ್ರೀತಿ ಕಾಣದೆ ಅಳುವ ನಕ್ಷತ್ರಗಳು
ಹಸಿರಿಲ್ಲದೇ ನರಳುತ್ತಿರುವ ಭುವಿಯ ಬಗ್ಗೆ
ಸಾವಿಗೆ ಸಾಕ್ಷಿಯಾದ ಕಣ್ಣೀರಿನ ಬಗ್ಗೆ
ಕಡೆಯ ಪಕ್ಷ, ಬರಡು ಬದುಕಿಗೆ
ಜೀವ ತಂದ ಅವನ ಅನುರಾಗದ ಬಗ್ಗೆ
ಕ್ರೂರ ಜಗದ ಅರಿವಿಲ್ಲದೆ
ಒಡಲೊಳಗೆ ಮೊಳೆಯುತ್ತಿರುವ ಮುಗ್ಧ ಬೀಜದ ಬಗ್ಗೆ
ಈ ಜೀವದ ತಲ್ಲಣ-ಸಂಭ್ರಮಗಳ ಬಗ್ಗೆ
ಬಯಕೆಯ ಬಸಿರೊಡೆದು ಒಡಲ
ಕುಡಿ ಕೈಗೆ ಬರುವ ಮುನ್ನ
ಬದುಕ ಜೋಳಿಗೆಯಿಂದ ಸೂರ್ಯ
ಹಗಲೊಂದನ್ನು ಕಸಿದುಕೊಳ್ಳುವ ಮುನ್ನ
ಮಾತಾಡಿ ಅಕ್ಷರಗಳೆ.

೨. ಲೋಕನಿಂದಿತಳ ಅಂತರಂಗ

ನನಗೆ ಏನೋ ಆಗಿದೆ
ಜಗದ ಜನರೇ
ನನ್ನ ಹೃದಯದ ಮಾತು ಕೇಳಿ;
ನನ್ನನ್ನು ಮೌನಿಯಾಗಿರಲು ಬಿಡಿ
ನಾನು ದುಃಖವನ್ನು ಖುಶಿಯೆಂದು
ಹೇಗೆ ತಿಳಿಯಲಿ?
ಹಾಗೆ ಹೇಳುವವರು ಹೇಳುತ್ತ ಹೋಗಲಿ.

ನನ್ನ ಕನಸುಗಳು
ನಾನು ಹುಟ್ಟುವ ಮುನ್ನವೆ
ತಿಜೋರಿಗಳ ಪಾಲಾಗಿದ್ದವು.
ನನ್ನ ತುಟಿಯಂಚಿನ ನಗು
ಒದ್ದೆ ಎವೆಗಳ ತೇವೆಲ್ಲ

ಧರ್ಮದ ಮೊಹರೊತ್ತಿದ
ಬಂಧಿಖಾನೆಯ ಗೆಳೆಯರು.

ಹೆಸರಿಲ್ಲದೆ ಬೆಳೆದ ನಾನು
ಬದುಕಿನ ಖಾಲಿ ಕಾಗದದಲಿ
ಕಡುಪಾಪಿಯೊಬ್ಬನ ಮುಕ್ತಿಯ
ಕುರಿತು ಮಾತಾಡಿದೆ
ಈ ಲೋಕ ನನ್ನ ಖಾಸಗಿತನವನ್ನು
ಕುತೂಹಲದಿಂದ ನೋಡಿತು
ವಿದ್ರೋಹದ ಪಟ್ಟ ಕಟ್ಟಿತು.

ಅವನ ಪ್ರೀತಿಯ ಹೊರತು
ಬೇರೆ ಬದುಕಿಲ್ಲವೆನ್ನಿಸಿ, ನಾನು
ಅವನಿಗಾಗಿ ಅವನ ಮಡಿಲಿಗಾಗಿ ಹಾತೊರೆದೆ
ಈ ಜಗದ ನಾಲಿಗೆ
ಪ್ರೀತಿಸುವುದು ಮಹಾಪರಾಧವೆಂದಿತು
ಬಹಿಷ್ಕಾರದ ತೊಟ್ಟಿಲಲ್ಲಿ
ಲೋಕನಿಂದನೆಯ ಲಾಲಿ ಹಾಡಿತು.

ಜಗದ ಜನರೇ
ನಾನು ನಗಲಿಲ್ಲ ಅಳಲಿಲ್ಲ
ಧರ್ಮಲೋಕದ ಶ್ರೇಷ್ಠ ನಾರಿಯ
ಪಟ್ಟಕ್ಕೆ ಆಸೆ ಪಡಲಿಲ್ಲ.

ಲೋಕವೆಳೆದ ಗೆರೆಗಳನ್ನೆಲ್ಲ
ದಾಟಿ ಬಂದೆ
ನನ್ನ ಸಾಂಗತ್ಯಕ್ಕೀಗ
ಅಕ್ಕ, ಮೀರಾ, ರಾಧೆಯರ ಜಗತ್ತಿದೆ
ಮಿಗಿಲಾಗಿ ಸದಾ ಪುಟಿವ
ಅವನ ಒಲವಿನ ಒರತೆಯಿದೆ!

೩. ನಾನೆಂಬ ವಸ್ತು

ನೋಡಿ
ಇಲ್ಲೊಂದು ವಸ್ತುವಿದೆ
ಅದರ ವಿನ್ಯಾಸ ರೂಪ
ಆಕಾರ ಗುಣಗಳನ್ನು
ಸೂಕ್ಷ್ಮವಾಗಿ ಗಮನಿಸಿ
ಪ್ರತಿಕ್ಷಣ ಆ ವಸ್ತುವನ್ನು

ತಮ್ಮದನ್ನಾಗಿಸಿಕೊಳ್ಳಲು
ಮೀಸೆ ಹೊತ್ತವರು
ಹೊಡೆದಾಡುತ್ತಿದ್ದಾರೆ
ಈ ನಿರ್ಲಜ್ಜ ಜಗತ್ತಿನಲ್ಲಿ
ಶೀಲ ನನ್ನ ವಸ್ತುವೆಂದು
ನಾನೆಂದೂ ತಿಳಿದುಕೊಂಡಿಲ್ಲ
ಹಾಗಾಗಿ ಅದು ಕಳೆದು ಹೋದರೆ
ನಾನು ಖಂಡಿತವಾಗಿಯೂ
'ಪಾವಿತ್ರ್ಯ' ಕಳೆದುಕೊಂಡೆನೆಂದು
ದುಃಖಪಡುವುದಿಲ್ಲ.

೪. ವಿವಶತೆ

ಹುಣ್ಣಿಮೆಯ ಆ ಸುಂದರ ರಾತ್ರಿ
ನೀನುಸುರಿದ ಪಿಸುಮಾತು
ಒದ್ದೆ ಮದರಂಗಿಯ ಸುವಾಸನೆ
ಸುಳ್ಳು ತಕರಾರುಗಳು
ಸುಮ್ಮನೆ ನೀಡಿದ ಭಾಷೆಗಳು
ಮೈಯ ತಿರುವುಗಳಲ್ಲಿ
ತುಟಿಯೊತ್ತಿದ ಗಳಿಗೆಗಳು
ಎಲ್ಲ ನೆನಪಿಸಿಕೊ
ನಿನ್ನ ನಿರ್ದಯ ಮನಸು
ಇನ್ನೂ ಕರಗದಿದ್ದರೆ
ಒಮ್ಮೆ ಅಪ್ಪಣೆ ನೀಡು- ಸಾಕು
ನೆನಪಿನ ನಿಧಿಯನ್ನು ಹುಗಿದು ಬಿಡುತ್ತೇನೆ
ಜತೆಗೆ ನಾನೂ ಅಲ್ಲಿಯೇ ಹೂತು ಹೋಗುತ್ತೇನೆ.

೫. ಮೂರು ದ್ವಿಪದಿಗಳು

೧. ಈ ಇಂಡಿಯಾದಲ್ಲಿ ನಾನು ಹರಾಜಾಗಿದ್ದೇನೆ
ಈ ಜಗತ್ತು ನನ್ನನ್ನು ನಾನಾಗಿರಲು ಬಿಡುತ್ತಿಲ್ಲ.

೨. ಹಗಲು ನೆತ್ತಿ ಸುಡುವ ಸೂರ್ಯನಿರುವುದರಿಂದಲೇ
ರಾತ್ರಿ ಚಂದ್ರನ ಸನ್ನಿಧಿ ಹಿತವೆನ್ನಿಸುತ್ತದೆ.

೩. ಕಾಯುತ್ತ ಕುಳಿತೆ ಈ ಸಂಜೆ ನೀನು ಬರಲಿಲ್ಲ
ದಾರಿ ದಣಿದರೂ, ನನ್ನ ಕಣ್ಣೆವೆಗಳು ದಣಿಯಲಿಲ್ಲ.

● ●

ಸದ್ಯದ ಸಂಸ್ಕೃತಿ ವಿವೇಚನೆಯ ಹಿನ್ನೆಲೆಯಲ್ಲಿ ಕುವೆಂಪು ವೈಚಾರಿಕತೆ

ಸಿ. ಎನ್. ರಾಮಚಂದ್ರನ್

ಮೊದಲಿಗೆ, ಕುವೆಂಪು ವೈಚಾರಿಕತೆಯ ವಿಶ್ಲೇಷಣೆಗೆ ಹಿನ್ನೆಲೆಯಾಗಿ ಎರಡು ಮುಖ್ಯ ಪರಿಕಲ್ಪನೆಗಳನ್ನು ವಿವರಿಸುವುದು ಉಪಯುಕ್ತವೆಂದು ನನಗೆ ಕಾಣುತ್ತದೆ. ಅವೆಂದರೆ 'ಸಂಸ್ಕೃತಿ' ಮತ್ತು 'ಸಾಂಸ್ಕೃತಿಕ ಯಾಜಮಾನ್ಯ.'

ಮೊದಲನೆಯದಾಗಿ 'ಸಂಸ್ಕೃತಿ.' ಇದೊಂದು ಅಮೂರ್ತ ಪರಿಕಲ್ಪನೆ ಮತ್ತು ಇದಕ್ಕೆ ಕನ್ನಡದಲ್ಲಿ ಕೇವಲ ನೂರಿನ್ನೂರು ವರ್ಷಗಳ ಇತಿಹಾಸವಿದೆ. ವಸಾಹತುಶಾಹಿ ಯುಗದಲ್ಲಿ ಮ್ಯಾಥ್ಯೂ ಆರ್ನಲ್ಡ್ ಮುಂತಾದ ೧೯ ನೆಯ ಶತಮಾನದ ಉತ್ತರಾರ್ಧದ ಇಂಗ್ಲೀಷ್ ಲೇಖಕರು ಹಾಗೂ ಚಿಂತಕರು ಪ್ರಧಾನವಾಗಿ ರೂಪಿಸಿದ 'ಕಲ್ಚರ್' ಪದಕ್ಕೆ ಸಂವಾದಿಯಾಗಿ 'ಸಂಸ್ಕೃತಿ' ಎಂಬ ಪದ ಕನ್ನಡ ಸಾಂಸ್ಕೃತಿಕ ಲೋಕವನ್ನು ಪ್ರವೇಶಿಸಿತು. ಪ್ರಾರಂಭದಲ್ಲಿ ಡಿವಿಜಿ, ದೇವುಡು, ಕುವೆಂಪು ಇತ್ಯಾದಿ ಪ್ರಮುಖ ನವೋದಯ ಸಾಹಿತಿ-ಚಿಂತಕರು 'ಸಂಸ್ಕೃತಿ' ಪರಿಕಲ್ಪನೆಯನ್ನು ಅದರ ಆಧ್ಯಾತ್ಮಿಕ ನೆಲೆಯಲ್ಲಿ ಮಾತ್ರ ನಿರ್ವಚಿಸಿದ್ದರು. ಡಿವಿಜಿಯವರು ತಮ್ಮ **ಸಂಸ್ಕೃತಿ** ಎಂಬ ಕೃತಿಯಲ್ಲಿ ಹೀಗೆ ಹೇಳುತ್ತಾರೆ : "ಅಂತರಾತ್ಮ ಶುಭವೇ ಧರ್ಮಕ್ಕೆ ಪ್ರಮಾಣ; ಅದೇ ಸಂಸ್ಕೃತಿ ಬೀಜ," ಮತ್ತು "ನಿಜವಾದ ಸಂಸ್ಕೃತಿಗೆ ಭೌತಸಂಪತ್ತಿನ ಪ್ರಗತಿಗಿಂತ ಆತ್ಮಸಂಪತ್ತಿನ ಪ್ರಗತಿ ಹೆಚ್ಚಾದುದು." ಇನ್ನೊಂದು ನೆಲೆಯಲ್ಲಿ, ಅಂದಿನ ಕಾಲದ ಇತರ ಪೌರ್ವಾತ್ಯ ಚಿಂತಕರು –ಪ್ರಾತಿನಿಧಿಕವಾಗಿ, **ದ ಡಾನ್ಸ್ ಆಫ್ ಶಿವ** ಎಂಬ ಪ್ರಸಿದ್ಧ ಗ್ರಂಥವನ್ನು ರಚಿಸಿದ ಆನಂದಕುಮಾರ ಸ್ವಾಮಿ –ಸಾಹಿತ್ಯ ಮತ್ತು ಲಲಿತ ಕಲೆಗಳ ಕ್ಷೇತ್ರದಲ್ಲಿ ಭಾರತವೂ ಸೇರಿದಂತೆ ಪೌರ್ವಾತ್ಯ ರಾಷ್ಟ್ರಗಳು ಮಾಡಿದ ಸಾಧನೆ ಮತ್ತು ಶ್ರೇಷ್ಠ ಕಲಾಕೃತಿಗಳ ಸಾಂಕೇತಿಕತೆ ಇವುಗಳ ಮೊತ್ತವನ್ನು 'ಸಂಸ್ಕೃತಿ' ಎಂದು ವ್ಯಾಖ್ಯಾನಿಸಿದರು. ಕಳೆತ ಶತಮಾನದ ಉತ್ತರಾರ್ಧದಲ್ಲಿ, ರೇಮಂಡ್ ವಿಲಿಯಮ್ಸ್ ಇತ್ಯಾದಿ ಪಾಶ್ಚಿಮಾತ್ಯ ಮಾರ್ಕ್ಸ್‌ವಾದೀ ಚಿಂತಕರನ್ನನುಸರಿಸಿ ಕನ್ನಡದ ದಲಿತ-ಬಂಡಾಯ ಲೇಖಕರು (ಮುಖ್ಯವಾಗಿ ಬರಗೂರು ರಾಮಚಂದ್ರಪ್ಪನವರು) 'ಸಂಸ್ಕೃತಿ' ಪದವನ್ನು ಅದರ ಸಾಮಾಜಿಕ ನೆಲೆಯಲ್ಲಿ, ಎಂದರೆ, ಒಂದು ಸಮುದಾಯದ ಸಾಮಾಜಿಕ ವರ್ತನೆ ಹಾಗೂ ಕಟ್ಟುಪಾಡುಗಳು ಮತ್ತು ನಂಬಿಕೆಗಳು ಆ ಸಮುದಾಯದ ಸಂಸ್ಕೃತಿ ಎಂದು ವ್ಯಾಖ್ಯಾನಿಸಿದರು. ಉದಾಹರಣೆಗೆ, ತಮ್ಮ ಒಂದು ಪ್ರಮುಖ ಲೇಖನವಾದ "ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ"ಯಲ್ಲಿ "ಶ್ರಮವೇ ಸಂಸ್ಕೃತಿಯ ತಾಯಿಬೇರು" ಎಂದು ಬರಗೂರರು ತೀರ್ಮಾನಿಸುತ್ತಾರೆ.[1] ಇಂದು ನಾವು, ಸಾಧಾರಣತಃ, 'ಸಂಸ್ಕೃತಿ' ಪರಿಕಲ್ಪನೆಯನ್ನು ಈ ಮೂರೂ ಆಯಾಮಗಳಲ್ಲಿ ಅರ್ಥೈಸುತ್ತೇವೆ.

ಎರಡನೆಯದಾಗಿ, 'ಯಾಜಮಾನ್ಯ.' ಇತ್ತೀಚಿನ ದಿನಗಳಲ್ಲಿ, ಪ್ರಾಯಃ ಕಳೆದೊಂದು ದಶಕದಿಂದ, ನಾವು ಈ ಪದವನ್ನು ಇಂಗ್ಲೀಷ್‌ನ 'ಹೆಜೆಮನಿ' ಎಂಬ ಪರಿಕಲ್ಪನೆಗೆ ಸಂವಾದಿಯಾಗಿ ಉಪಯೋಗಿಸುತ್ತಿದ್ದೇವೆ. ಇಂಗ್ಲೀಷ್‌ನ 'ಹೆಜೆಮನಿ' ಪದ ಇಟಾಲಿಯನ್ ಭಾಷೆಯ 'ಜೆಜೆಮೋನಿಯಾ' ಪದಕ್ಕೆ ಸಂವಾದಿ; ಮತ್ತು ಈ ಪರಿಕಲ್ಪನೆಯನ್ನು ಪ್ರಭುತ್ವದ

ಹಾಗೂ ವರ್ಗಸಂಘರ್ಷದ ಸ್ವರೂಪವನ್ನು ವಿಶ್ಲೇಷಿಸುವಾಗ ಕಳೆದ ಶತಮಾನದ ಎರಡನೆಯ ದಶಕದಲ್ಲಿ ಚಲಾವಣೆಗೆ ತಂದವನು ಇಟಲಿಯ ಪ್ರಖ್ಯಾತ ಮಾರ್ಕ್ಸಿಸ್ಟ್ ಚಿಂತಕ ಆಂಟೋನಿಯೋ ಗ್ರಾಮ್‌ಶಿ. ಈ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು : ಪ್ರಭುತ್ವ ತಾನು ಅಸ್ತಿತ್ವಕ್ಕೆ ಬರಲು ಎರಡು ಮಾರ್ಗಗಳನ್ನು ಅನುಸರಿಸುತ್ತದೆ. ಮೊದಲನೆಯದು, ಎಲ್ಲರಿಗೂ ಗೊತ್ತಿರುವಂತೆ, ಬಲಪ್ರಯೋಗದ ಮಾರ್ಗ. ಆದರೆ –ಗ್ರಾಮ್‌ಶಿ ಕೊಡುವ ಮಹತ್ವದ ಒಳನೋಟ ಇದು– ಬಲಪ್ರಯೋಗದ ನೆರವಿನಿಂದ ಒಂದು ವರ್ಗ/ಸಮುದಾಯ/ರಾಷ್ಟ್ರ ಗಳಿಸುವ ಅಧಿಕಾರ ದೀರ್ಘಕಾಲ ಬಾಳುವಂತಹುದಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ನೇರ ಬಲಪ್ರಯೋಗದ ನೆರವಿಲ್ಲದೆಯೂ ಒಂದು ಸಮಾಜದ ಪ್ರಬಲ ವರ್ಗ/ಸಮುದಾಯ ಅಥವಾ ರಾಷ್ಟ್ರ ಇತರ ದುರ್ಬಲ ವರ್ಗ/ಸಮುದಾಯ ಅಥವಾ ರಾಷ್ಟ್ರದ ಮೇಲೆ ಅವುಗಳ 'ಸ್ವಯಂಪ್ರೇರಿತ ಒಪ್ಪಿಗೆ'ಯಿಂದ ('ವಾಲಂಟರಿ ಕನ್‌ಸೆಂಟ್') ತನ್ನ ಅಧಿಕಾರವನ್ನು ಸ್ಥಾಪಿಸಬಹುದು, ಉಳಿಸಿಕೊಳ್ಳಬಹುದು. ಈ ಬಗೆಯ ನಿಯಂತ್ರಣಕ್ಕೆ ಕಾರಣ ಪ್ರಬಲ ವರ್ಗಗಳ ಚಿಂತನಾಕ್ರಮ, ಸಾಮಾಜಿಕ ವರ್ತನೆ, ಆಹಾರ-ವಿಹಾರ ಪದ್ಧತಿ, ಇತ್ಯಾದಿ ಸಾಂಸ್ಕೃತಿಕ-ವೈಚಾರಿಕ ರಚನೆಗಳಿಗೆ ಅವು ಶ್ರೇಷ್ಠವೆಂಬ ಮಾನ್ಯತೆಯನ್ನು ದುರ್ಬಲ ವರ್ಗಗಳು ನೀಡುವುದು. ಇಂತಹ, ಬಲಪ್ರಯೋಗವಿಲ್ಲದೆ ಗಳಿಸುವ ನಿಯಂತ್ರಣವನ್ನು ಗ್ರಾಮ್‌ಶಿ 'ಸಾಂಸ್ಕೃತಿಕ ಯಾಜಮಾನ್ಯ' ('ಕಲ್ಚರಲ್ ಹೆಜೆಮನಿ') ಎಂದು ಕರೆಯುತ್ತಾನೆ.[೬]

ಈ ಸಂದರ್ಭದಲ್ಲಿ ಎರಡು ಮುಖ್ಯ ಅನುಪ್ರಮೇಯಗಳನ್ನು ನಾವು ಗಮನಿಸಬೇಕು : (೧) ಅಧೀನ/ದುರ್ಬಲ ವರ್ಗಗಳು/ಸಮುದಾಯಗಳು ಪ್ರಭುತ್ವಕ್ಕೆ ತಮ್ಮ 'ಸ್ವಯಂಪ್ರೇರಿತ ಒಪ್ಪಿಗೆ'ಯನ್ನು ಒಂದು ಜಡ ಅಥವಾ ಪ್ರಜ್ಞಾಹೀನ ಸ್ಥಿತಿಯಲ್ಲಿ ನೀಡುತ್ತವೆ ಎಂದೇನೂ ಅಲ್ಲ. ಅವುಗಳು, ಪ್ರಜ್ಞಾಪೂರ್ವಕವಾಗಿಯೇ, 'ತಮ್ಮದೇ ಆದ ಕಾರಣಗಳಿಗಾಗಿ' ('ಫಾರ್ ದೇರ್ ಓನ್ ರೀಜನ್ಸ್') ಇತರರ ಯಾಜಮಾನ್ಯವನ್ನು ಒಪ್ಪಿಕೊಳ್ಳಬಹುದು. ಯಾಜಮಾನ್ಯದ ಈ ಬಗೆಯ ನಿರ್ವಚನೆ ಅದನ್ನು ಒಪ್ಪಿಕೊಳ್ಳುವ ವರ್ಗ/ಸಮುದಾಯ/ರಾಷ್ಟ್ರಗಳು ಕ್ರಿಯಾಶೂನ್ಯವಲ್ಲ; ಮತ್ತು ಅವುಗಳೂ ಸಾಮೂಹಿಕವಾಗಿ ಸ್ವತಂತ್ರ ಆಲೋಚನಾಶಕ್ತಿಯನ್ನು ಹೊಂದಿರುತ್ತವೆ ಎಂದು ಸ್ಥಾಪಿಸುತ್ತದೆ. (೨) ಗ್ರಾಮ್‌ಶಿ ವಾದಿಸುವುದೇನೆಂದರೆ, ಪ್ರಭುತ್ವದ ಯಾಜಮಾನ್ಯಕ್ಕೆ ಪ್ರತಿರೋಧವನ್ನು ಸಂಘಟಿಸಲು ಅಧೀನ/ದುರ್ಬಲ ವರ್ಗ/ಸಮುದಾಯಗಳು ತಮ್ಮ ಸಮಾಜದಲ್ಲಿ 'ಪ್ರತಿ-ಯಾಜಮಾನ್ಯ'ವನ್ನು ('ಕೌಂಟರ್ ಹೆಜೆಮನಿ') ಸ್ಥಾಪಿಸಲು ಪ್ರಯತ್ನಿಸಬೇಕು. 'ಪ್ರತಿ-ಯಾಜಮಾನ್ಯ'ವು ಅಸ್ತಿತ್ವಕ್ಕೆ ಬರುವ ಪ್ರಕ್ರಿಯೆಯನ್ನು ಗ್ರಾಮ್‌ಶಿ ಹೀಗೆ ವಿವರಿಸುತ್ತಾನೆ : "ಆಳುವ ವರ್ಗಕ್ಕೆ ಜನಸಮ್ಮತಿಯನ್ನು ಒದಗಿಸಿರುವ ಮೌಲ್ಯಗಳನ್ನು ಮತ್ತು ಅವುಗಳನ್ನು ಜೀವಂತವಾಗಿ ಇಟ್ಟಿರುವ ಸಂಸ್ಥೆಗಳ ಒಳಸುಳಿಗಳನ್ನು ಅರ್ಥಮಾಡಿಕೊಳ್ಳಬೇಕು. ಜನರ ನಿತ್ಯ ಜೀವನ ಹಾಗೂ ಸಮಾಜವಾದೀ ಮೌಲ್ಯಗಳನ್ನು ಜೀವಂತವಾಗಿ ಬೆಸೆಯುವ ಅವಕಾಶಗಳನ್ನು ಕಂಡುಕೊಳ್ಳಬೇಕು..." (ಫಣಿರಾಜ್, ಪು. ೪೬).

ಈ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಈಗ ನಾವು ಕುವೆಂಪು ಮತ್ತಿತರ ಸ್ವಾತಂತ್ರ್ಯಪೂರ್ವ ಕಾಲದ ಕನ್ನಡದ/ಭಾರತೀಯ ಶ್ರೇಷ್ಠ ಸಾಹಿತಿ-ಚಿಂತಕರು ಎದುರಿಸಿದ

ಒತ್ತಡಗಳು ಮತ್ತು ಅವರುಗಳು ಪ್ರಜ್ಞಾಪೂರ್ವಕವಾಗಿ ಮಾಡಿಕೊಂಡ ಆಯ್ಕೆಗಳು ಇವುಗಳನ್ನು ವಿಶ್ಲೇಷಿಸಬಹುದು.

ಇದು ಸರ್ವವಿದಿತವಾಗಿರುವಂತೆ, ಸ್ವಾತಂತ್ರ್ಯಪೂರ್ವ ಯುಗದ ಭಾರತೀಯ ಚಿಂತಕರು ಒಟ್ಟಿಗೇ, ಒಂದೇ ಕಾಲದಲ್ಲಿ, ಎರಡು ವಿಭಿನ್ನ ಯಾಜಮಾನ್ಯಗಳನ್ನು ಎದುರಿಸುತ್ತಿದ್ದರು– ಬ್ರಿಟಿಶರ ವಿದೇಶೀ ಯಾಜಮಾನ್ಯ ಮತ್ತು ಭಾರತೀಯ ಸಾಮಾಜಿಕ ವ್ಯವಸ್ಥೆಯ ಅಡಿಗಲ್ಲಾದ ದೇಶೀ ಯಾಜಮಾನ್ಯ. ವಿದೇಶೀ ಯಾಜಮಾನ್ಯಕ್ಕೆ ಕೇವಲ ಇನ್ನೂರು ವರ್ಷಗಳ ಇತಿಹಾಸವಿದ್ದರೆ, ಶ್ರೇಣೀಕೃತ ವರ್ಣಾಶ್ರಮ ಅಥವಾ ಜಾತಿವ್ಯವಸ್ಥೆಯನ್ನಾಧರಿಸಿದ ದೇಶೀ ಯಾಜಮಾನ್ಯಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿತ್ತು. ಇವೆರಡರಲ್ಲಿ, ದೇಶೀ ಯಾಜಮಾನ್ಯವನ್ನು ಹೆಚ್ಚು ಭೀಕರ ಎಂದು ರಾಜಾ ರಾಮ್‌ಮೋಹನ್ ರಾಯ್, ಕುವೆಂಪು, ಅಂಬೇಡ್ಕರ್ ಇತ್ಯಾದಿ ಪ್ರಮುಖ ಭಾರತೀಯ ಚಿಂತಕರು ಪರಿಗಣಿಸಿದರು. ಇನ್ನೂ ಮುಖ್ಯವಾಗಿ, ಈ ದೇಶೀ ಯಾಜಮಾನ್ಯವನ್ನು ಕೊನೆಗಾಣಿಸಲು ವಿದೇಶೀ ಯಾಜಮಾನ್ಯವನ್ನು ಒಂದು ಮಟ್ಟದ ವರೆಗೆ, ಪ್ರಜ್ಞಾಪೂರ್ವಕವಾಗಿ, ಮಾನ್ಯ ಮಾಡಿದರು : ಭಾಷೆ-ಸಾಹಿತ್ಯಗಳ ನೆಲೆಯಲ್ಲಿ ಇಂಗ್ಲೀಷ್ ಭಾಷೆ-ಸಾಹಿತ್ಯಗಳು ಹೆಚ್ಚು ಶ್ರೇಷ್ಠ ಎಂದು ಒಪ್ಪಿಕೊಂಡು, ಅವುಗಳ ಪ್ರಭಾವ-ಪ್ರಚೋದನೆಗಳ ಹಿನ್ನೆಲೆಯಲ್ಲಿ ಆಧುನಿಕ ದೇಶೀ ಸಾಹಿತ್ಯಗಳನ್ನು ನಿರ್ಮಿಸುವುದಕ್ಕೆ ಪ್ರಯತ್ನಿಸಿದರು; ದೇಶೀ ಸಾಹಿತ್ಯಗಳಲ್ಲಿ ಅಂದಿನ ವರೆಗೆ ಇಲ್ಲದಿದ್ದ ಕಾದಂಬರಿ, ಭಾವಗೀತೆ ಇತ್ಯಾದಿ ನೂತನ ಸಾಹಿತ್ಯ ಪ್ರಭೇದಗಳನ್ನು ಮೊದಲ ಬಾರಿಗೆ ದೇಶೀ ಭಾಷೆಗಳಲ್ಲಿ ರಚಿಸಿದರು; ವೈಚಾರಿಕ ನೆಲೆಯಲ್ಲಿ, ವಿದೇಶೀ ಪ್ರಭುತ್ವವು ಭಾರತಕ್ಕೆ ಪರಿಚಯಿಸಿದ ಧರ್ಮನಿರಪೇಕ್ಷ ಇಂಗ್ಲೀಷ್ ಶಿಕ್ಷಣವನ್ನು ಮುಕ್ತವಾಗಿ ಸ್ವಾಗತಿಸಿ, ಆ ಮೂಲಕ ಬೆಳೆಯುವ 'ವೈಜ್ಞಾನಿಕ ದೃಷ್ಟಿಕೋನ'ವು ಭಾರತೀಯ ಸಮಾಜದ ಗೊಡ್ಡು ಆಚಾರ-ವಿಚಾರಗಳನ್ನು ಕೊನೆಗಾಣಿಸಬಹುದು ಎಂದು ನಂಬಿದರು. "ಎಲ್ಲರೂ ನಿರಂಕುಶಮತಿಗಳಾಗಿ/ಎಲ್ಲರೂ ಸ್ವತಂತ್ರಮತಿಗಳಾಗಲಿ/ಎಲ್ಲರೂ ಮುಕ್ತಮತಿಗಳಾಗಲಿ" ಎಂದು ಕುವೆಂಪು ಕರೆಕೊಡುವುದು ಈ ಅರ್ಥದಲ್ಲಿ. ಇದೇ ನೆಲೆಯಲ್ಲಿ, ದೇಶೀ ಯಾಜಮಾನ್ಯದ ಪಕ್ಷಪಾತಪೂರಿತ ನ್ಯಾಯಪದ್ಧತಿ, ನಿರಂಕುಶ ಪ್ರಭುತ್ವ ಇತ್ಯಾದಿಗಳು ನಿರ್ಮೂಲನವಾಗುತ್ತವೆಂಬ ನಂಬಿಕೆಯಲ್ಲಿ ಪ್ರಜಾಪ್ರಭುತ್ವ, ಆಧುನಿಕ ನ್ಯಾಯಪದ್ಧತಿ, ಮುಕ್ತ ಶಿಕ್ಷಣ, ಇತ್ಯಾದಿಗಳನ್ನು ಸ್ವಾಗತಿಸಿದರು.

ಕೂಡಲೇ ಇಲ್ಲಿ ಸೇರಿಸಬೇಕಾದ ತಿದ್ದುಪಡಿಯೆಂದರೆ, ಈ ಬಗೆಯ ವಿದೇಶೀ ಸಾಂಸ್ಕೃತಿಕ ಯಾಜಮಾನ್ಯಕ್ಕೆ ಭಾರತೀಯರು ಕೊಟ್ಟ ಮಾನ್ಯತೆ, ಹಿಂದೆ ಸೂಚಿಸಿದಂತೆ, ಒಂದು ಮಟ್ಟದ ವರೆಗೆ ಮಾತ್ರ. ಅವರೆಂದೂ ಸಂಪೂರ್ಣವಾಗಿ ಬ್ರಿಟಿಶ್/ಪಾಶ್ಚಿಮಾತ್ಯ ಯಾಜಮಾನ್ಯವನ್ನು ಒಪ್ಪಿಕೊಂಡಿರಲಿಲ್ಲ. ನಿದರ್ಶನಾರ್ಥವಾಗಿ : ಭಾರತದಲ್ಲಿ ಇಂಗ್ಲೀಷ್ ಶಿಕ್ಷಣದ ಅಗತ್ಯವನ್ನು ಪ್ರಬಲವಾಗಿ ಪ್ರತಿಪಾದಿಸಿದ ರಾಮ್‌ಮೋಹನ್ ರಾಯ್ ಅವರೇ ಅಯ್ದು ಉಪನಿಷತ್ತುಗಳನ್ನು ಮೊಟ್ಟಮೊದಲಿಗೆ ಇಂಗ್ಲೀಷ್‌ಗೆ ಅನುವಾದಿಸಿದರು. ಆಧುನಿಕತೆಯನ್ನು ಮುಕ್ತವಾಗಿ ಸ್ವಾಗತಿಸಿದ್ದ ಕುವೆಂಪು ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರಬಿಂದೋ ಇವರುಗಳ ಮಾನಸ ಶಿಷ್ಯರಾಗಿದ್ದರು; ಮತ್ತು ತಮ್ಮ ಬದುಕಿನುದ್ದಕ್ಕೂ ಅವರು

ಪ್ರತಿಪಾದಿಸಿದ ಮಾರ್ಗವೆಂದರೆ ಪರಂಪರೆ ಮತ್ತು ಆಧುನಿಕತೆಗಳ ಆರೋಗ್ಯಕರ ಬೆಸುಗೆ. ಅವರ ಮಾತುಗಳಲ್ಲಿಯೇ ಈ ಅಂಶಗಳನ್ನು ಸ್ಪಷ್ಟಪಡಿಸಬೇಕಾದರೆ, "ಪ್ರಾಚೀನ ಸತ್ತ್ವದ ಮೇಲೆ ನಿಂತು ಅರ್ವಾಚೀನವನ್ನು ಸೃಜಿಸುತ್ತಾ, ಭವಿಷ್ಯತ್ತಿನ ನೂತನ ಆಗಾಮಿಕವತ್ತ ಮುಂದುವರೆಯಬೇಕು ಎಂಬುದು ನನ್ನ ಆದರ್ಶ."[೩]

ಹಾಗೆಯೇ, ತಮ್ಮ ಕಾಲದಲ್ಲಿ ಇಂಗ್ಲೀಷ್ ಸಾಹಿತ್ಯಕ್ಕಿದ್ದ ಶ್ರೇಷ್ಠತೆಯ ಪ್ರಭಾವಲಯದ ಹಿಂದೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅಗಾಧ ರಾಜಕೀಯ ಬಲವೂ ಇತ್ತು ಎಂಬುದರ ಅರಿವು ಅವರಿಗಿತ್ತು. ೧೯೭೪ ರಲ್ಲಿ ಮಾಡಿದ ಭಾಷಣವೊಂದರಲ್ಲಿ ಅವರು ಹೀಗೆ ಹೇಳುತ್ತಾರೆ : "ಶೇಕ್ಸ್‌ಪಿಯರಿಗೆ ಒದಗಿದ –ಅಥವಾ ಶೇಕ್ಸ್‌ಪಿಯರನ ಇಂಗ್ಲೆಂಡಿಗೆ ಒದಗಿದಂಥ– ಜಗತ್ತನ್ನೇ ಜಯಿಸುವ, ಆಳುವ ಒಂದು ಸಂದರ್ಭ ನಮ್ಮ ಕರ್ನಾಟಕಕ್ಕೆ ಒದಗಿದ್ದರೆ. ನಾವು ಆಗ ಕನ್ನಡವನ್ನು ಅಲ್ಲಿ ಅಧಿಕೃತ ಭಾಷೆ ಮಾಡಿ, ನಮ್ಮ ಪಂಪ, ರನ್ನ ಇವರನ್ನೆಲ್ಲಾ ಅಲ್ಲಿ ಮೆರೆದಿದ್ದರೆ. ನಮ್ಮ ವಿಮರ್ಶೆಗಳನ್ನೆಲ್ಲಾ ಬ್ರಾಡ್ಲೆ ಅವರೆಲ್ಲ ಬರೆದ ಹಾಗೆ ನಾವೂ ಬರೆದು ಮಾಡಿದ್ದರೆ, ಆಗ ಪಂಪನೂ ಕೀರ್ತಿದೃಷ್ಟಿಯಿಂದಲೂ ಜಗತ್ಕವಿಯೇ ಆಗಿಬಿಡುತ್ತಿದ್ದ. ಅನೇಕ ಇಂಗ್ಲೀಶ್ ಕವಿಗಳು ಜಗತ್ಕವಿಗಳಾಗುವುದಕ್ಕೆ ಕಾರಣ, ಇಂಗ್ಲೇಂಡ್ ದೇಶ ಜಗತ್ತಿನಲ್ಲೆಲ್ಲ ವ್ಯಾಪಿಸಿದ್ದು."[೪]

ಒಂದು ಮಟ್ಟದ ವರೆಗೆ ವಿದೇಶೀ ಯಾಜಮಾನ್ಯವನ್ನು ಒಪ್ಪಿಕೊಂಡು ದೇಶೀ ಯಾಜಮಾನ್ಯದ ವಿರುದ್ಧ ತಮ್ಮ ಬದುಕಿನುದ್ದಕ್ಕೂ ಕುವೆಂಪು ಸಂಘಟಿಸಿದ ಪ್ರತಿರೋಧವನ್ನು ಅಥವಾ ಪ್ರತಿ-ಯಾಜಮಾನ್ಯವನ್ನು ಮುಖ್ಯವಾಗಿ ಮೂರು ನೆಲೆಗಳಲ್ಲಿ ವ್ಯಾಖ್ಯಾನಿಸಬಹುದು : ಧರ್ಮ, ಸಾಹಿತ್ಯ ಮತ್ತು ರಾಷ್ಟ್ರ.

೧. ಧರ್ಮ :

ಕುವೆಂಪು ಯಾವಾಗಲೂ ಧರ್ಮವನ್ನು 'ಮತ'ದಿಂದ ಬೇರೆಯಾಗಿ ನೋಡುತ್ತಿದ್ದರು. ತಮ್ಮ ಪ್ರಸಿದ್ಧ 'ವಿಚಾರ ಕ್ರಾಂತಿಗೆ ಆಹ್ವಾನ' ಎಂಬ ಭಾಷಣದಲ್ಲಿ ಈ ಅಂಶವನ್ನು ಅವರು ಹೀಗೆ ವಿವರಿಸುತ್ತಾರೆ : "ನೀವು ಅಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತಭ್ರಾಂತಿ ಮತ್ತು ಮತಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲಿ ಸಮಾಜವಾದವಾಗಲಿ ಸಮಾನತಾಭಾವ ಸ್ಥಾಪನೆಯಾಗಲಿ ಎಂದೆಂದಿಗೂ ಸಾಧ್ಯವಾಗುವುದಿಲ್ಲ,"[೫]

ಈ ಬಗೆಯಲ್ಲಿ ಧರ್ಮ ಮತ್ತು ಮತಗಳನ್ನು ಬೇರೆ ಬೇರೆಯಾಗಿ ಕುವೆಂಪು ಕಂಡುದರಿಂದ, ಒಂದು ಕಡೆ ರಾಮಕೃಷ್ಣ ಪರಮಹಂಸರ ಮತ್ತು ವಿವೇಕಾನಂದರ ದಾರಿಯಲ್ಲಿ ನಡೆಯಲು ಮತ್ತು ಅದ್ವೈತ ತತ್ತ್ವ, ಕರ್ಮಸಿದ್ಧಾಂತ, ಪುನರ್ಜನ್ಮ ಇತ್ಯಾದಿ ಆರ್ಷೇಯ ಭಾರತೀಯ ಚಿಂತನೆಯ ಅನೇಕ ಮುಖ್ಯಾಂಶಗಳನ್ನು ಅವರು ಒಪ್ಪಲು ಸಾಧ್ಯವಾಯಿತು. ಮತ್ತೊಂದು ಕಡೆ, ಆತ್ಮವಾದಿಯಾಗಿದ್ದೂ ಸ್ಥಾಪಿತ ಮತಾಚರಣೆಗಳು, ಸಾಂಪ್ರದಾಯಿಕ ನಂಬಿಕೆಗಳು, ಮುಖ್ಯವಾಗಿ ಹುಟ್ಟಿನಿಂದ ನಿರ್ಧರಿಸಲ್ಪಟ್ಟ ಜಾತ್ಯಾಧಾರಿತ ಶ್ರೇಣೀಕರಣವನ್ನು ವಿರೋಧಿಸಲೂ ಸಾಧ್ಯವಾಯಿತು. "ನೂರು ದೇವರನೆಲ್ಲ ನೂಕಾಚೆ ದೂರ/ಭಾರತಾಂಬೆಯೆ

ದೇವಿ ಪ್ರಾಜಿಸುವ ಬಾರ." "ಗುಡಿ ಚರ್ಚು ಮಸಜೀದಿಗಳ ಬಿಟ್ಟು ಬನ್ನಿ/ಬಡತನದ ಬುಡಮುಟ್ಟ ಕೀಳಬನ್ನಿ" ಎಂದು ಸಮಾಜಕ್ಕೆ ಕರೆ ಕೊಡಲು ಸಾಧ್ಯವಾಯಿತು.

೨. ಸಾಹಿತ್ಯ :

ಸಾಹಿತ್ಯಕವಾಗಿ ಯಾಜಮಾನ್ಯವನ್ನು ವಿರೋಧಿಸುವುದೆಂದರೆ ಯಾಜಮಾನ್ಯವನ್ನು ಕೀರ್ತಿಸುವ ಹಾಗೂ ಪ್ರಭುತ್ವದಲ್ಲಿರುವವರನ್ನು ಕೇಂದ್ರದಲ್ಲಿ ಕಾಣುವ ಸಾಹಿತ್ಯ ಪರಂಪರೆಗಿಂತ ಭಿನ್ನವಾದ ಸಾಹಿತ್ಯ- ಸಾಹಿತ್ಯ ಪರಂಪರೆಗಳನ್ನು ನಿರ್ಮಿಸುವುದು. ಪರ್ಯಾಯ ಸಾಹಿತ್ಯಕ ಪರಂಪರೆಯ ಒಂದು ಆಯಾಮವೆಂದರೆ ಸಾಮಾಜಿಕ ಶ್ರೇಣೀಕರಣದ ಅಂಚಿನಲ್ಲಿರುವವರನ್ನು ಗಂಭೀರವಾಗಿ ಪರಿಗಣಿಸಿ, ಅವರನ್ನು ಸಾಹಿತ್ಯದ ಕೇಂದ್ರಕ್ಕೆ ತರುವುದು. ಈ ಕಾರ್ಯವನ್ನು ಕುವೆಂಪು ತಮ್ಮ ಎಲ್ಲಾ ಕಾವ್ಯ-ನಾಟಕ-ಕಾದಂಬರಿಗಳಲ್ಲಿ ಪ್ರಜ್ಞಾಪೂರ್ವಕವಾಗಿ ಕೈಗೊಂಡರು. ಈ ಸಂಗತಿ ಸಾಕಷ್ಟು ಈಗಾಗಲೇ ಚರ್ಚಿತವಾಗಿರುವುದರಿಂದ, ಸಂಕ್ಷಿಪ್ತವಾಗಿ ಅದನ್ನು ಹೀಗೆ ವಿವರಿಸಬಹುದು. ಅವರ ಭಾವಗೀತೆಗಳ ಹೆಚ್ಚಿನ ಕೇಂದ್ರ ಪಾತ್ರಗಳು ಅಲ್ಲಿಯ ವರೆಗೆ ನಿರ್ಲಕ್ಷಿಸಲ್ಪಟ್ಟಿದ್ದ 'ನೇಗಿಲಯೋಗಿ' ರೈತ, ಶಿವನೊಡನೆ ಸಮೀಕರಿಸಲ್ಪಟ್ಟ ಜಲಗಾರ, ಕೋಗಿಲೆಯೊಡನೆಯೇ ಕಾಜಾಣ, ಹೂವಿನೊಡನೆಯೇ ಗೊಬ್ಬರ, ನಕ್ಷತ್ರಗಳೊಡನೆಯೇ ಮಿಣುಕುಹುಳುಗಳು ಇತ್ಯಾದಿ. ಈ ಬಗೆಯ ಪ್ರಾಚೀನ ಕಾವ್ಯಪರಂಪರೆಯ ಉಲ್ಲಂಘನೆ ಪ್ರಜ್ಞಾಪೂರ್ವಕವಾಗಿತ್ತೆಂಬುದು "ಗೊಬ್ಬರ" ಕವನದ ಪ್ರಾರಂಭದಲ್ಲಿಯೇ ನಮ್ಮ ಅರಿವಿಗೆ ಬರುತ್ತದೆ : 'ಗೊಬ್ಬರದ ಮೇಲೆ ಬರೆವುದೆ ಕಬ್ಬಮಂ? ಹಾ/ಕಷ್ಟಂಕಷ್ಟ: ಕಲಿಕಾಲಕೇನೇನು ಬಂದಪುದೋ?/ಕಾಲವೇಂ ಪ್ರಲಯಕಿದೆ ಬೀರಿಕೆ?...' ಸಿರಿವರಸು ಶಕ್ತಿಯಿರೆ ಗೊಬ್ಬರವೆ ಪರಿಮಳಂ;/ ಇಲ್ಲದಿರೆ ಪುನುಗು ತಾನಾದೊಡಂ ಗೊಬ್ಬರಂ!' ಹಾಗೆಯೇ, ತಮ್ಮ ಮಹತ್ಕಾದಂಬರಿ ಮಲೆಗಳಲ್ಲಿ ಮದುಮಗಳು ಕೃತಿಲೋಕದಲ್ಲಿ ಮುಕುಂದಯ್ಯ-ಚಿನ್ನಮ್ಮ ಇವರಿಗೆ ಕೊಟ್ಟಷ್ಟು ಮಹತ್ವವನ್ನೇ ಐತ-ಪೀಂಚಲು ಅವರಿಗೂ ಕೊಟ್ಟು, ಆ ಪ್ರೇಮಿಗಳನ್ನು ಶಿವ-ಶಿವಾನಿಯರಂತೆ ಕುವೆಂಪು ಕಾಣುತ್ತಾರೆ.

ಪರ್ಯಾಯ ಮಹಾಕಾವ್ಯ-ಪರಂಪರೆಯನ್ನು ಕಟ್ಟುವುದರಲ್ಲಿ ಕುವೆಂಪು ಅವರ ಮೇರು ಕೃತಿ ಶ್ರೀ ರಾಮಾಯಣ ದರ್ಶನಂ ಅಪ್ರತಿಮವಾಗಿದೆ. ಸಾಂಪ್ರದಾಯಿಕ ರಾಮಾಯಣಗಳಲ್ಲಿ ಕಡೆಗಣಿಸಲ್ಪಟ್ಟಿದ್ದ ಅಥವಾ ತಿರಸ್ಕಾರಕ್ಕೆ ಒಳಪಟ್ಟಿದ್ದ ಮಂಥರೆ, ಶೂರ್ಪನಖಿ, ಶಬರಿ ಇತ್ಯಾದಿ ಅನೇಕ ಪಾತ್ರಗಳಿಗೆ ಕಥನದಲ್ಲಿ ಮಹತ್ವವನ್ನು ಕುವೆಂಪು ಕೊಡುತ್ತಾರೆ. ತನ್ನ ದೈಹಿಕ ನ್ಯೂನತೆಗಳಿಂದಾಗಿ ಎಲ್ಲರ ತಿರಸ್ಕಾರಕ್ಕೆ ಗುರಿಯಾಗಿ, ಕೇವಲ ಕೈಕಯಿಯಲ್ಲಿ ನಿಜವಾದ ಪ್ರೀತಿಯನ್ನು ಕಂಡು ಆ ಕಾರಣದಿಂದ ಅವಳ ಹಾಗೂ ಅವಳ ಮಗನ ಬಗ್ಗೆ ಅತಾರ್ಕಿಕ ಪ್ರೀತಿ-ಗೌರವಗಳನ್ನು ಬೆಳೆಸಿಕೊಳ್ಳುವ ಹತಭಾಗ್ಯೆ ಮಂಥರೆ ನಮ್ಮ ಅನುಕಂಪವನ್ನು ಗಳಿಸುತ್ತಾಳೆ. ಅಭಿಜಾತ/ಜನಪ್ರಿಯ ರಾಮಾಯಣಗಳಲ್ಲಿ ರಾಮ-ಲಕ್ಷ್ಮಣರ ಅಸಮರ್ಥನೀಯ ಶಿಕ್ಷೆಗೆ ಗುರಿಯಾಗುವ ಶೂರ್ಪನಖಿ ಕುವೆಂಪು ಅವರ ಕೃತಿಯಲ್ಲಿ ಚಂದ್ರನಖಿಯಾಗಿ ಆಕಸ್ಮಿಕವಾಗಿ ಗಾಯಗೊಳ್ಳುತ್ತಾಳೆ : "...ಎನುತೆ (ಲಕ್ಷ್ಮಣನು) ತೋಳಂ ಬಾಣಸಹಿತಮಂ ಬೀಸುತಿರೆ/ಕೆತ್ತಿತು ಪ್ರಮಾದದಿಂ ರಕ್ಕಸಿಯ ಮೊಲೆಯುಂ. /ನೆತ್ತರ್ವರಿಸಿ ಕೋಪಪುಕ್ಕಲ್ಕೆ..."[೬] ಶಬರಿಯಾದರೋ ವಿಶ್ವಮಾತೆಯ ಸಾಂಕೇತಿಕತೆಯನ್ನು ಕೃತಿಯಲ್ಲಿ ಪಡೆಯುತ್ತಾಳೆ.

ಇನ್ನೂ ಮುಖ್ಯವಾಗಿ, ಅಭಿಜಾತ ರಾಮಾಯಣ-ಪರಂಪರೆಯನ್ನು ಕುವೆಂಪು ಮುರಿಯುವುದು ರಾವಣನ ಪಾತ್ರದ ಮೂಲಕ; ಮತ್ತು, ಪರಿಣಾಮತಃ, ಪರಂಪರಾಗತ ಅವತಾರ-ಕಲ್ಪನೆಯನ್ನೇ ತಿರಸ್ಕರಿಸುವುದರ ಮೂಲಕ. ಅಭಿಜಾತ ಪರಂಪರೆಯ ಅಡಿಗಲ್ಲಾದ 'ರಾವಣಾಸುರ ಮಥನದಿಂದ ರಾಮ ಶ್ರೀರಾಮನಾಗುವುದಿಲ್ಲ' ಎಂಬ ಅಂಶವನ್ನು ಸ್ಪಷ್ಟವಾಗಿ ತಮ್ಮ ಕಥನದ ಒಂದು ಭಾಗದಲ್ಲಿ ಕುವೆಂಪು ಹೀಗೆ ವಿವರಿಸುತ್ತಾರೆ :

"... ಕೊಂದ ಕತದಿಂದೇಂ
ಪೆರ್ಮನಾದನೆ ರಾಮನಾ ಮಾತನುಳಿ: ಪಗೆಯೆ?
ತೆಗೆತೆಗೆ! ಪೆರ್ಮೆಗೊಲ್ಮೆಯೆ ಚಿಹ್ನೆ. ಮಹತ್ತಿಗೇಂ
ಬೆಲೆಯೆ ಪೇಳ್ ಕೊಲೆ? ದೈತ್ಯನಂ ಗೆಲಿದ ಕಾರಣಕಲ್ತು,
ತನ್ನ ದಯಿತೆಯನೊಲಿದ ಕಾರಣಕೆ, ಗುರು ಕಣಾ
ರಾಮಚಂದ್ರಂ. ಕೋಲಾಹಲದ ರುಚಿಯ ಮೋಹಕ್ಕೆ
ಮರುಳಾದ ಮಾನವರ್ ರಾವಣನ ಕೊಲೆಗಾಗಿ
ರಾಮನಂ ಕೊಂಡಾಡಿದೊಡೆ ಕವಿಗುಮಾ ಭ್ರಾಂತಿ
ತಾನೇಕೆ? ಮಣಿಯುವೆನು ರಾಮನಡಿದಾವರೆಗೆ :
ದಶಶಿರನ ವಧೆಗಾಗಿಯಲ್ತು;..." (೧:೮:೧೯೪-೨೦೩, ಪು. ೧೫೧)

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಒಂದು ಅರ್ಥಪೂರ್ಣ ಅಂಶವೆಂದರೆ ಕೃತಿಯಲ್ಲಿ ಕುವೆಂಪು ಉದ್ದೇಶಪೂರ್ವಕವಾಗಿ ತರುವ 'ಅನ್ಯ ಕೃತಿ ಮಾರ್ದನಿಗಳು.' ಕುವೆಂಪು ಅವರ ರಾವಣ ಅನೇಕ ಸಂದರ್ಭಗಳಲ್ಲಿ ಮಿಲ್ಟನ್‌ನ **ಪ್ಯಾರಡೈಜ್ ಲಾಸ್ಟ್** ಮಹಾಕಾವ್ಯದ ಸೇಟನ್ ಪಾತ್ರವನ್ನು ನೆನಪಿಗೆ ತರುತ್ತಾನೆ. "ಅತ್ತಲಾ ದೈತ್ಯ ಸಭೆಯೊಳ್" ಎಂದು ಪ್ರಾರಂಭವಾಗುವ ಭಾಗದಲ್ಲಿ **ಪ್ಯಾರಡೈಜ್ ಲಾಸ್ಟ್** ಕೃತಿಯ ಎರಡನೇ ಭಾಗದಲ್ಲಿ ಬರುವ 'ಪ್ಯಾಂಡೆಮೋನಿಯಂ' ಸಭೆಯ ಖಚಿತ ಮಾರ್ದನಿಗಳಿವೆ. ಆದರೆ ಈ ಅಂಶ, ಕೆಲ ವಿಮರ್ಶಕರು ತೀರ್ಮಾನಿಸಿರುವಂತೆ, ಮಿಲ್ಟನ್‌ನ ಪ್ರಭಾವವನ್ನಾಗಲೀ ಕುವೆಂಪು ಅವರ ಅನುಕರಣ ಸ್ವಭಾವವನ್ನಾಗಲೀ ದಾಖಲಿಸುವುದಿಲ್ಲ. ಅದಕ್ಕೆ ವಿರುದ್ಧವಾಗಿ, ಇಲ್ಲಿ ಕುವೆಂಪು ಅವರ ಉದ್ದೇಶವಿರುವುದು ಮಿಲ್ಟನ್‌ನ 'ಗಾಡ್-ಸೇಟನ್' ಪರಿಕಲ್ಪನೆಗೂ ತಮ್ಮ 'ರಾಮ-ರಾವಣ' ಪರಿಕಲ್ಪನೆಗೂ ಇರುವ ಅಗಾಧ ಭಿನ್ನತೆಯನ್ನು ದಾಖಲಿಸಲು. ಸೇಟನ್ ಎಂದೆಂದಿಗೂ ಬದಲಾಗದ ದೇವರ ಶತ್ರು. ಆದರೆ, ರಾವಣನಾದರೋ ಅವಿದ್ಯೆಯಿಂದ ತನ್ನ 'ರಾಮತ್ವ'ವನ್ನು ಮರೆತಿರುವ ವ್ಯಕ್ತಿ; ಆ ಅವಿದ್ಯೆಯ ಆವರಣದಿಂದ ಹೊರಬಂದ ಕೂಡಲೇ ರಾಮ-ರಾವಣರು ಭಿನ್ನರಾಗುತ್ತಾರೆ. ಇದೇ ನೆಲೆಯಲ್ಲಿ, ತಮ್ಮ ಸ್ಮಶಾನ ಕುರುಕ್ಷೇತ್ರಂ ನಾಟಕದಲ್ಲಿ ಕುವೆಂಪು ದುರ್ಯೋಧನನನ್ನು 'ಕೌರವಕೃಷ್ಣ' ಎಂದು ಸಂಬೋಧಿಸುತ್ತಾರೆ. ಕೊನೆಯಲ್ಲಿ, ರಾವಣ ಹಾಗೂ ದುರ್ಯೋಧನ ಇಬ್ಬರು ತಮ್ಮ ಅವಿದ್ಯೆಯ ಕತ್ತಲೊಳಗಿಂದ ಹೊರಬಂದು ವಿಭೂತಿಪುರುಷರಾಗುತ್ತಾರೆ.

ಎಂದರೆ, ತಮ್ಮ ಪ್ರಮುಖ ಕೃತಿಗಳಲ್ಲೆಲ್ಲಾ ಕುವೆಂಪು 'ಇಬ್ಬಗೆಯ ಪ್ರತಿರೋಧ'ವನ್ನು ಕೈಗೊಳ್ಳುತ್ತಾರೆ. ಒಂದೆಡೆ, ಕನ್ನಡದ/ಭಾರತೀಯ ಕಾವ್ಯ ಪರಂಪರೆ ಮತ್ತು ಅದು

ಮಾನ್ಯ ಮಾಡುವ ಮೌಲ್ಯಗಳು (ಯುದ್ಧ ಹಾಗೂ ಶೌರ್ಯ, ಜಾತಿ-ಕುಲಗಳ ಶ್ರೇಷ್ಠತೆ, ದೇವ-ದಾನವ, ಸ್ವರ್ಗ-ನರಕ, ಪುಣ್ಯ-ಪಾಪ –ಇತ್ಯಾದಿ ದ್ವಂದ್ವಗಳ ಮಾನ್ಯತೆ,....) ಇವುಗಳನ್ನು ಅವರ ಕೃತಿಗಳು ಪ್ರತಿಭಟಿಸುತ್ತವೆ; ಮತ್ತು ಪರ್ಯಾಯ ಪರಂಪರೆ-ಮೌಲ್ಯಗಳನ್ನು ನಿರ್ಮಿಸುತ್ತವೆ. ಮತ್ತೊಂದೆಡೆ, 'ಆಧುನಿಕ'ವೆಂಬ ಪ್ರಶಂಸೆಗೆ ಒಳಗಾಗಿ (ಸ್ವಾತಂತ್ರ್ಯಪೂರ್ವ ಯುಗದಲ್ಲಿ ಪ್ರಭುತ್ವದ ಮಾನ್ಯತೆಯನ್ನೂ ಪಡೆದಿದ್ದ) ಪಾಶ್ಚಾತ್ಯ ನಾಗರೀಕತೆಯ ಮಿತಿಗಳನ್ನು ದಾಖಲಿಸುತ್ತಾ, ಅದಕ್ಕೆ ವಿರುದ್ಧವಾಗಿ ಭಾರತೀಯ ಮೌಲ್ಯಗಳನ್ನು ಸ್ಥಾಪಿಸುತ್ತಾರೆ. ಈ ಕಾರಣಕ್ಕಾಗಿಯೇ, ಪ್ರಜ್ಞಾಪೂರ್ವಕವಾಗಿ, ಲಂಕೆಯನ್ನು ಕುವೆಂಪು ಒಂದು ವೈಭವೋಪೇತ ಹಾಗೂ ಆಮೋದ-ಪ್ರಮೋದಗಳ ಆಗರದಂತೆ ಚಿತ್ರಿಸುತ್ತಾರೆ. ಈ ಹೇಳಿಕೆಯ ಸಮರ್ಥನೆಗಾಗಿ ಲಂಕೆಯ ವರ್ಣನೆಯನ್ನು ಪರಿಗಣಿಸಬಹುದು. "ರೌಪ್ಯ ರತ್ನ ಸ್ವರ್ಣ ವರ್ಣ"ಗಳಿಂದ **ಸಂಶೋಭಿಸುತ್ತಿರುವ ಕನಕಲಂಕೆಯಲ್ಲಿ** :

ಲಂಕಾ ಲತಾಂಗಿಯರ ನೂಪುರ ಝಣತ್ಕೃತಿಗೆ
ಕಿವಿಯಿತ್ತೊಡಂ ಬಗೆಸೋಲದಾ ಬ್ರಹ್ಮಚಾರಿ,
ಲೆಕ್ಕಿಸದೆ ಲಲನಾ ಲಲಾಟ ಲಾವಣ್ಯಮಂ,
ದೇವಿ ಸೀತೆಯನಲ್ಲದರಸಲಿಲ್ಲನ್ಯಮಂ
ಕಂಡ ನಾನಾ ಸ್ಥಿತಿಯ, ವಸನಚ್ಯುತಿಯ, ಲಲಿತ
ದೇಹದ್ಯುತಿಯ ಭೋಗಮಂಚದ ರತವ್ರತದ
ಸೀಮೆಯಲಿ. ... (೩:೧:೧೨೦-೧೨೬, ಪು. ೪೪೫)

ರಾವಣಸೇನೆ ಮಾಡುವ ಯುದ್ಧದ ಸ್ವರೂಪವೂ ಕಳೆದ ಶತಮಾನದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಹೂಡಿದ ವಿಶ್ವಸಮರಗಳನ್ನು ನೇರವಾಗಿಯೇ ಪ್ರತಿಧ್ವನಿಸುತ್ತವೆ :

"ಇಂದಲ್ಲಿ ಐರೋಪ್ಯ ದೌಷ್ಟ್ಯಮ್
ಪ್ರಯೋಗಿಸುವ ದೈತ್ಯಯಂತ್ರಗಳೆಂತು ಮನೆಯೆನದೆ
ಮಠವೆನದೆ, ಚರವೆನದಚರವೆನದೆ, ಪೆಣ್ಣೆನದೆ
ಗಂಡೆನದೆ, ನಾಗರಿಕರೆನದೆ ಸೈನಿಕರೆನದೆ,
ಪಸು ಪಸುಳೆಯೆನ್ನದೆಯೆ, ...
ಮುಂಬರಿದನಾ ಕುಂಭಕರ್ಣಂ...." (೪:೨:೧೧೪-೧೨೩, ಪು. ೭೮೦)

ಮತ್ತೆ,

"ಕಲಿಯುಗಾಭೀಳ ಯುದ್ಧೋದ್ಯಮಕೆ ಪಾಶ್ಚಾತ್ಯ
ಭೌತವೈಜ್ಞಾನಿಕ ಯಮಾಸಕ್ತಿ ನಿರ್ಮಿಸುವ
ಯಂತ್ರಕರ್ಮಾಗಾರ ಭೂತಚೀತ್ಕಾರಮಂ
ಕೀಳ್ಗೈವ ನಾರಕ ಬೃಹಚ್ಛಬ್ದಕೋಟಿಗಳ್
ಪೊಣ್ಮೆದುವು ತಲ್ಲಣಂಗೊಳ್ಳಲಸು ಆ ಅಸುರ
ವೈಜ್ಞಾನಿಗುಂ!..." (೪:೪:೨೨೦-೨೨೫, ಪು. ೭೧೫)

ಸ್ವಲ್ಪದರಲ್ಲಿಯೇ ಹೇಳಬೇಕಾದರೆ, ಕುವೆಂಪು ಅವರ ಸಾಹಿತ್ಯ ಏಕಕಾಲದಲ್ಲಿ ಪಾಶ್ಚಾತ್ಯಪ್ರಣೀತ ಆಧುನಿಕತೆ ಮತ್ತು ವರ್ಣಾಶ್ರಮ ವ್ಯವಸ್ಥೆಯನ್ನಾಧರಿಸಿದ ಭಾರತೀಯ ಪರಂಪರೆ ಇವೆರಡನ್ನೂ ಪಾತ್ರ, ಘಟನೆ, ಪ್ರಬಂಧಧ್ವನಿ ಇವೇ ಮೊದಲಾದ ಅನೇಕ ನೆಲೆಗಳಲ್ಲಿ ಪ್ರತಿಭಟಿಸುತ್ತದೆ; ಅವನ್ನು ತಿರಸ್ಕರಿಸಿ ಪರ್ಯಾಯ ಸಾಧ್ಯತೆಗಳನ್ನು ದರ್ಶಿಸುತ್ತದೆ.

೩. ರಾಷ್ಟ್ರ, ಭಾಷೆ, ಇತ್ಯಾದಿ :

ಕುವೆಂಪು, ಟಾಗೋರ್ ಇತ್ಯಾದಿ ಎಲ್ಲಾ ಸ್ವಾತಂತ್ರ್ಯಪೂರ್ವ ಸಾಹಿತಿ-ಚಿಂತಕರಿಗೆ ರಾಷ್ಟ್ರೀಯತೆಯ ಪರಿಕಲ್ಪನೆ ಬಗೆಬಗೆಯ ದ್ವಂದ್ವಗಳಿಗೆ ಕಾರಣವಾಗಿತ್ತು. ಸ್ವಾತಂತ್ರ್ಯಪ್ರಾಪ್ತಿಗಾಗಿ ಬ್ರಿಟಿಷರ ವಿರುದ್ಧ ಹೋರಾಡಲು ಎಲ್ಲಾ ಪ್ರಾಂತ್ಯಗಳ, ಭಾಷೆಗಳ ಹಾಗೂ ವರ್ಗಗಳ ಜನರನ್ನು ಒಂದುಗೂಡಿಸಲು ಅವರಿಗೆಲ್ಲಾ ರಾಷ್ಟ್ರದ ಪರಿಕಲ್ಪನೆ ಅನಿವಾರ್ಯವಾಗಿತ್ತು; ಮತ್ತು ಇದನ್ನು ಕುವೆಂಪು, ಟಾಗೋರ್ ಮುಂತಾದವರೆಲ್ಲರೂ ಒಪ್ಪಿದ್ದರು. "ಸ್ವಾತಂತ್ರ್ಯೋದಯ ಮಹಾಪ್ರಗಾಥ", "ರಕ್ತತರ್ಪಣ", "ಇಂದಿನ ದೇವರು", "ಪಾಂಚಜನ್ಯ", "ಕಲ್ಕಿ", "ಜಯ ಹೇ ಕರ್ನಾಟಕ ಮಾತೆ" —ಇವೇ ಮುಂತಾದ ಅನೇಕಾನೇಕ ಕವನಗಳು ಮತ್ತು ಭಾಷಣಗಳು ಕುವೆಂಪು ಅವರ ರಾಷ್ಟ್ರನಿಷ್ಠೆಯನ್ನು ಸಮರ್ಥವಾಗಿ ದಾಖಲಿಸುತ್ತವೆ. ಕುವೆಂಪು ಅವರಲ್ಲಿ ಕ್ವಚಿತ್ತಾಗಿಯೇ ಕಾಣಬರುವ ಹಿಂಸೆ-ಸಾವುಗಳ ವೈಭವೀಕರಣವೂ ಈ ಸಂದರ್ಭದ ಕವನಗಳಲ್ಲಿ ಕಂಡುಬರುತ್ತದೆ : "ಬೀಳಲಿ/ಮ್ಮೆ ನೆತ್ತರು ಕಾರಿ; ಹೋದರೆ ಹೋಗಲಿ ತಲೆ ಹಾರಿ./ತಾಯ್ನಾಡಿನ ಮೇಲ್ಮೆಗೆ ಹೋರಿ; ಸ್ವಾತಂತ್ರ್ಯದ ಸ್ವರ್ಗಕೆ ಏರಿ" ("ಸುಮುಹೂರ್ತವೋ ಇಂದೆ," ೧೯೩೫); "ತನಿಯೆರೆಯಿರ್ಸೆ ನಿಮ್ಮ ಎದೆನೆತ್ತರನು ಬಸಿದು/ಸ್ವಾತಂತ್ರ್ಯದೇವತೆಯ ತೃಷಿತ ಮುಖಕೆ" ("ರಕ್ತತರ್ಪಣ," ೧೯೩೫); ಇತ್ಯಾದಿ. ಇನ್ನೊಂದು ಸಂದರ್ಭದಲ್ಲಿ ಕುವೆಂಪು ಅವರೇ ಹೇಳುವಂತೆ, "ಅಂದು ವೀರಪೂಜೆ, ವಿಭೂತಿಪೂಜೆಗಳು ಶಿಖರದ ಮಟ್ಟಕ್ಕೇರಿದ್ದುವು."

ಆದರೆ, ಈ ಬಗೆಯ ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಅನೇಕ ಬಿಕ್ಕಟ್ಟುಗಳಿದ್ದುವು, ಮತ್ತು ಕುವೆಂಪು (ಟಾಗೋರರಂತೆ) ಆ ಬಿಕ್ಕಟ್ಟುಗಳನ್ನು ಗ್ರಹಿಸಿದ್ದರು. ನಿಜವಾದ ಅರ್ಥದಲ್ಲಿ 'ಭಾರತ ಒಂದು ರಾಷ್ಟ್ರವೆ?' ಎಂಬ ಪ್ರಶ್ನೆಗೆ 'ಅಹುದು' ಮತ್ತು 'ಅಲ್ಲ' ಎಂಬ ಎರಡು ಪರಸ್ಪರ ವಿರುದ್ಧ ಉತ್ತರಗಳು ಸಾಧ್ಯ : ಭಾರತ ಒಂದು ರಾಷ್ಟ್ರವೂ ಅಹುದು, ಅನೇಕ ರಾಷ್ಟ್ರಗಳ ಸಂಕುಲವೂ ಅಹುದು. ಆದ್ದರಿಂದ, ಭಾಷಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಅನೇಕ ಸಂದಿಗ್ಧಗಳು ಎದುರಾಗುತ್ತವೆ.

'ರಾಷ್ಟ್ರ' ಎಂದ ಕೂಡಲೇ ಅದಕ್ಕೊಂದು 'ರಾಷ್ಟ್ರಭಾಷೆ,' 'ರಾಷ್ಟ್ರಲಿಪಿ,' 'ರಾಷ್ಟ್ರಧರ್ಮ' ಇತ್ಯಾದಿಗಳಿರಬೇಕೆಂಬ ಒತ್ತಡ ಪ್ರಬಲವಾಗುತ್ತದೆ. ನೂರಾರು ಭಾಷೆಗಳಿರುವ ಮತ್ತು ಹತ್ತಾರು ಲಿಪಿ-ಧರ್ಮಗಳಿರುವ ಭಾರತದಲ್ಲಿ ಯಾವುದನ್ನು ರಾಷ್ಟ್ರೀಯ ನೆಲೆಯಲ್ಲಿ ಆಯ್ಕೆ ಮಾಡಬೇಕು? ಯಾವುದಾದರೂ ಒಂದನ್ನು (ಹಿಂದಿ, ದೇವನಾಗರಿ, ಹಿಂದೂ ಧರ್ಮ) ಆಯ್ಕೆ ಮಾಡಿದಾಗ, ಉಳಿದ ಭಾಷೆ-ಲಿಪಿ-ಧರ್ಮಗಳ ಪಾಡೇನು? ಈ ಪ್ರಶ್ನೆಯನ್ನು ತಮ್ಮ ಸಾಹಿತ್ಯಕೃತಿಗಳಲ್ಲಿ ಮತ್ತು ವೈಚಾರಿಕ ಲೇಖನಗಳಲ್ಲಿ ಕುವೆಂಪು ಮತ್ತೆ ಮತ್ತೆ ಎತ್ತುತ್ತಾರೆ.

"ದೇವಭಾಷೆಯಿದೆಂದು, ರಾಷ್ಟ್ರಭಾಷೆಯಿದೆಂದು/ರಾಜಭಾಷೆಯೆಂದೊಂದು ಕನ್ನಡಮ್ಮನ /ಬೆನ್ನುಮೂಳೆ ನಿಟಿನಿಟಿಲು ಮುರಿಯುತಿದೆ" ಎಂದು ಕಾವ್ಯಾತ್ಮಕವಾಗಿ ಮಂಡಿಸಿದರೆ, ತಮ್ಮ "ಲಿಪಿ, ಭಾಷೆ ಮತ್ತು ಭಾವೈಕ್ಯತೆ" ಎಂಬ ಲೇಖನದಲ್ಲಿ ಹೀಗೆ ಚರ್ಚೆ ಮಾಡುತ್ತಾರೆ :

"ಏಕಲಿಪಿ, ಏಕಭಾಷೆ ಮತ್ತು ಏಕಮತ ಇವು ಯಾವುವೂ ಭಾವೈಕ್ಯವನ್ನು ಸಾಧಿಸಲಾರದೆ ಸೋತಿರುವುದಕ್ಕೆ ಇತಿಹಾಸದ ಉದ್ದಕ್ಕೂ ಸಾಕ್ಷ್ಯಗಳು ಚೆಲ್ಲಿಬಿದ್ದಿವೆಯಲ್ಲಾ! ಯುರೋಪಿನ ಏಕಮತ —ಕ್ರೈಸ್ತಮತ— ಅವರ ಐಕ್ಯಮತ್ಯ ಸಾಧಿಸಲಾರದೆ ಯುದ್ಧಗಳ ಪರಂಪರೆಯನ್ನೇ ಹೊತ್ತಿಸಿತು. ...ಮತ ಮತ್ತು ಭಾಷೆಗಳಿಗಿಂತಲೂ ಐಕ್ಯಕ್ಕೆ ಬಲಿಷ್ಠವಾದ ಸಾಕ್ಷ್ಯವಾಗಿದೆ ಏಕಲಿಪಿ. ...ನನಗನ್ನಿಸುತ್ತದೆ : ಭಾಷೆಯೂ ಅಲ್ಲ; ಲಿಪಿಯೂ ಅಲ್ಲ; ಮತವೂ ಅಲ್ಲ; ಸರ್ವೋದಯಕ್ಕೆ ಭದ್ರವಾದ ಆಧಾರ ಮತ್ತು ಬಲಿಷ್ಠ ಅಸ್ತಿವಾರವಿರುವುದು 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮ ಬಾಳು' ಎಂಬ ಆರ್ಥಿಕ ಸಮತೆಯಲ್ಲಿ ಎಂದು." **(ವಿಚಾರ ಕ್ರಾಂತಿಗೆ ಆಹ್ವಾನ, ಪು. ೯೧).**

ಆದ್ದರಿಂದಲೇ, ಕುವೆಂಪು 'ತ್ರಿಭಾಷಾ ಸೂತ್ರ'ವನ್ನು ಎಂದೂ ಒಪ್ಪಲಿಲ್ಲ. ಅವರ ಪ್ರಕಾರ, ಭಾರತಕ್ಕೆ ಬೇಕಾದುದು 'ದ್ವಿಭಾಷಾ ಸೂತ್ರ' —ಮಾತೃಭಾಷೆ/ಪ್ರಾಂತಭಾಷೆ ಮತ್ತು ಸಂಪರ್ಕ ಭಾಷೆಯಾಗಿ ಇಂಗ್ಲೀಷ್.

ಇದೇ ಬಗೆಯ ಚಿಂತನೆಯನ್ನು ಮುಂದುವರಿಸಿದ ಕುವೆಂಪು ಕೊನೆಕೊನೆಗೆ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಕೈಬಿಟ್ಟು, ವಿಶ್ವಮಾನವ ಪ್ರಜ್ಞೆಯನ್ನು ಅಂಗೀಕರಿಸಿದರೆಂದು ತೋರುತ್ತದೆ. ತಮ್ಮ ಅತಿ ಮುಖ್ಯ ಹಾಗೂ ಅಂತಿಮ ಸಂದೇಶ ಎಂದು ಅವರು ಪರಿಗಣಿಸಿದ "ಆಗು ನೀ ಅನಿಕೇತನ" ಕವನದಲ್ಲಿ "ಎಲ್ಲಿಯೂ ನಿಲ್ಲದಿರು/ಮನೆಯನೆಂದೂ ಕಟ್ಟದಿರು" ಎನ್ನುವಾಗ ಅವರು ಎಲ್ಲೆಗಳನ್ನು ಕಟ್ಟುವ ರಾಷ್ಟ್ರೀಯತೆಯ ನಿಕೇತನಗಳನ್ನು ಮೀರಿ, ವಿಶ್ವಮಾನವ ಪ್ರಜ್ಞೆಯನ್ನು ಸಾಧಿಸುತ್ತಾರೆ : ಅವರ ಈ 'ಅನಿಕೇತನ ಪ್ರಜ್ಞೆ'ಯನ್ನು ಪಾಶ್ಚಾತ್ಯ ಜಗತ್ತಿನ ಅಪ್ರತಿಮ ಪೌರ್ವಾತ್ಯ ಚಿಂತಕ ಎಡ್ವರ್ಡ್ ಸೈದ್ ಪ್ರತಿಪಾದಿಸಿದ 'ಎಕ್ಸಿಲಿಕ್ ಕ್ವಾಲಿಟಿ'ಯೊಂದಿಗೆ ಸಮೀಕರಿಸಬಹುದು.[೬]

ಕೊನೆಯಲ್ಲಿ, ಎಲ್ಲಾ ಬಗೆಯ ಮಾನವ ಕಾರ್ಯಗಳಲ್ಲಿ ಅನಿವಾರ್ಯವಾಗುವ ಒಂದು ಅಂಶವನ್ನು ಪ್ರಸ್ತಾಪಿಸಿ ಈ ಚರ್ಚೆಯನ್ನು ಮುಗಿಸಬಹುದು. 'ಪ್ರತಿ-ಯಾಜಮಾನ್ಯ'ವೂ ಅನಿವಾರ್ಯವಾಗಿ 'ಪ್ರತಿ-ಯಾಜಮಾನ್ಯ'ವೇ ಆಗಿರುತ್ತದೆ. ಎಂದರೆ, ತಾನು ವಿರೋಧಿಸಿದ ಯಾಜಮಾನ್ಯದ ಕೆಲವಂಶಗಳನ್ನು ಅದೂ ಸ್ವೀಕರಿಸಿರುತ್ತದೆ. ಈ ಸಾಧಾರಣೀಕೃತ ಹೇಳಿಕೆ ಕುವೆಂಪು ಅವರ ವೈಚಾರಿಕತೆಗೂ ಅನ್ವಯಿಸುತ್ತದೆ.

ಸಂಸ್ಕೃತಿಯ ವಿಷಯದಲ್ಲಿ ಕುವೆಂಪು 'ಪ್ರಕೃತಿ' ಮತ್ತು 'ಸಂಸ್ಕೃತಿ'ಗಳ ನಡುವೆ ಭಿನ್ನತೆಯನ್ನು ಗುರುತಿಸುತ್ತಾರೆ. ಅವರ ದೃಷ್ಟಿಯಲ್ಲಿ 'ಪ್ರಕೃತಿ' ಹುಟ್ಟಿನಿಂದ ಬರುತ್ತಾದರೆ 'ಸಂಸ್ಕೃತಿ' ವ್ಯಕ್ತಿಯೊಬ್ಬನು ಅರ್ಜಿಸುವಂತಹುದು. ಆದ್ದರಿಂದ, ಸಮಾಜದ ಕೆಲವೇ ಕೆಲವು ಆಯ್ದ ವಿಶಿಷ್ಟ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಸಮೂಹಕ್ಕೆ ಮಾತ್ರ ಶ್ರೇಷ್ಠ ಸಂಸ್ಕೃತಿ ಸಾಧ್ಯ ಎಂದು ಅವರು ನಂಬಿದ್ದರು. ಈ ಸಂದರ್ಭದಲ್ಲಿ ಅವರು ತಮ್ಮ "ಹೊಸ ಸಾಹಿತ್ಯ ಹೊಸ

ದೃಷ್ಟಿ" ಎಂಬ ಲೇಖನದಲ್ಲಿ ಮಂಡಿಸುವ ವಿಚಾರಗಳು ಗಮನಾರ್ಹ : "ಅಲ್ಪಸಂಖ್ಯೆ ವಿವೇಕದ ಕಿರುದನಿಯನ್ನು ಬಹುಸಂಖ್ಯೆ ತನ್ನ ಬೊಬ್ಬೆಯಬ್ಬರದಿಂದ ಮುಳುಗಿಸಲು ಪ್ರಯತ್ನಿಸಿದರೆ... ಸರ್ವನಾಶವಾಗುತ್ತದೆ. ....ಬಹುಜನರು ಹೇಳಿದುದೇ ಬಹಳ ಸತ್ಯವಾಗುವುದಿಲ್ಲ. ಗಾತ್ರ ಪ್ರಾಧಾನ್ಯವೇ ಪಾತ್ರ ಪ್ರಾಧಾನ್ಯವಾಗುವುದಿಲ್ಲ"[೮] ಈ ನಿಲುವು ಮ್ಯಾಥ್ಯೂ ಆರ್ನಲ್ಡ್‌ನ 'ಅಲ್ಪಸಂಖ್ಯಾತ ಸಂಸ್ಕೃತಿ'ಯ (ಮೈನಾರಿಟಿ ಕಲ್ಚರ್) ಸ್ವೀಕಾರವೇ ಆಗುತ್ತದೆ. ಸಂಸ್ಕೃತಿಯನ್ನು ಕುರಿತ ಈ ಬಗೆಯ ನಿಲುವು ಶ್ರೀ ರಾಮಾಯಣ ದರ್ಶನಂ ಕೃತಿಯಲ್ಲಿಯೂ ಕಂಡುಬರುತ್ತದೆ : "ಕ್ಷಾತ್ರಕ್ಕೆ ಕ್ರೌರ್ಯಮುಂ ಕಿರೀಟಮೆ?" ಎಂದು ರಾಕ್ಷಸರನ್ನು ಸಂಹರಿಸುವ ಪ್ರತಿಜ್ಞೆ ಮಾಡಿದ ಶ್ರೀರಾಮನನ್ನು ಸೀತೆ ಪ್ರಶ್ನಿಸಿದಾಗ, ರಾಮ ಹೀಗೆ ಉತ್ತರಿಸುತ್ತಾನೆ : "ತಿಮಿರಕ್ಕೆ ರವಿ ದಸ್ಯು. / ಜ್ಞಾನಮಜ್ಞಾನಕ್ಕೆ ದಸ್ಯು. ...ಪಿರಿತನಕೆ ಮಣಿವುದೆ ಕಿರಿಯ ಸಂಸ್ಕೃತಿಗೆ/ ಮೇಲ್ಮೆ." (೧:೧೦:೨೮೭-೨೮೮, ಪು. ೧೮೮).

ಹಾಗೆಯೇ, ಆಧ್ಯಾತ್ಮಿಕ ನೆಲೆಯಲ್ಲಿ, ವಿವೇಕಾನಂದರ ಅದ್ವೈತ ತತ್ವದ ಶ್ರೇಷ್ಠತೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದ ಕುವೆಂಪು ಅವರಿಗೆ ಬಹುಸಂಖ್ಯಾತ ಅನಕ್ಷರಸ್ಥರ ಧಾರ್ಮಿಕ 'ಮೌಢ್ಯ'ದ ಬಗ್ಗೆ ಅಸಹನೆಯಿತ್ತು. ಒಂದು ಸಂದರ್ಭದಲ್ಲಿ, ಮಲೆ ಮಾದೇಶ್ವರನ ಜಾತ್ರೆಗೆ ಸಾಲುಸಾಲಾಗಿ ಹೋಗುತ್ತಿದ್ದ ಗುಡ್ಡರನ್ನು ಕಂಡು ಕುವೆಂಪು ಅವರ 'ಮೌಢ್ಯ'ದ ಬಗ್ಗೆ ಅಪಾರ ಖೇದವನ್ನು ವ್ಯಕ್ತಪಡಿಸಿದುದನ್ನು ಪ್ರಭುಶಂಕರ್ ಇತ್ತೀಚೆಗೆ ನಡೆದ ಒಂದು ಸಂದರ್ಶನದಲ್ಲಿ ಪ್ರಸ್ತಾಪಿಸಿದರು. ಆಗ, ಪ್ರಭುಶಂಕರ್ ಅವರು 'ಗುಡ್ಡರದು ಇಲ್ಲಿಟರೇಟ್ ಮೌಢ್ಯ, ನಮ್ಮದು ಸೊಫಿಸ್ಟಿಕೇಟೆಡ್ ಮೌಢ್ಯವಲ್ಲವೇ' ಎಂದು ಕುವೆಂಪು ಅವರನ್ನು ಕೇಳಿದಾಗ ಅವರು ಸ್ವಲ್ಪ ಹೊತ್ತು ಸುಮ್ಮನಿದ್ದು ಅನಂತರ 'ನೀವು ಹೇಳುವುದು ಸರಿ' ಎಂದರಂತೆ. (**ರಸಋಷಿಗೆ ನಮನ**, ಇ. ಟಿವಿ. ಕಾರ್ಯಕ್ರಮ, ಜಯಂತ ಕಾಯ್ಕಿಣಿಯೊಡನೆ.)

ಈ ಬಗೆಯ ಸ್ವಸಂಸ್ಕೃತಿ-ಸ್ವಧರ್ಮಗಳ ಬಗ್ಗೆ ಅಭಿಮಾನ, ಪ್ರಾಯಃ ಎಲ್ಲಾ ವಿಭೂತಿ ಪುರುಷರಲ್ಲಿಯೂ ಇರುತ್ತದೆ. ಕೂಡಲೇ ನೆನಪಿಗೆ ಬರುವ ನಿದರ್ಶನವೆಂದರೆ ಜಾತಿಭೇದದ ವಿರುದ್ಧ ಮತ್ತು ಸರ್ವಸಮಾನತೆಗಾಗಿ ಬದುಕಿನುದ್ದಕ್ಕೂ ಹೋರಾಡಿದ ಬಸವೇಶ್ವರರ ಈ ವಚನ : "ಮಡಕೆ ದೈವ ಮೊರದೈವ ಬೀದಿಯ ಕಲ್ಲು ದೈವ/ ಹಣಿಗೆ ದೈವ ಬಿಲ್ಲನಾರಿ ದೈವ ಕಾಣಿರೋ/ದೈವನೊಬ್ಬನೆ ಕೂಡಲಸಂಗಮದೇವಾ."

ಈ ಸಂದರ್ಭದಲ್ಲಿ, ಕಳೆದ ದಶಕದಲ್ಲಿ ಕುವೆಂಪು ಅವರ ವೈಚಾರಿಕತೆಯನ್ನು ಕುರಿತು ದಲಿತ-ಬಂಡಾಯ ಚಿಂತಕರಿಂದ ಬಂದಿರುವ ವಿಮರ್ಶೆಯನ್ನು ಗಮನಿಸುವುದು ಪ್ರಸ್ತುತವೆಂದು ಕಾಣುತ್ತದೆ. ಈ ಬಗೆಯ ವಿಮರ್ಶೆಯ ಪ್ರಾತಿನಿಧಿಕ ಲೇಖನ ಬಿ. ಕೃಷ್ಣಪ್ಪನವರ "ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ." ಈ ಲೇಖನದಲ್ಲಿ ಕೃಷ್ಣಪ್ಪನವರು ಕುವೆಂಪು-ವೈಚಾರಿಕತೆಯ ಮೂರು ಸಂದಿಗ್ಧಗಳನ್ನು ಹೀಗೆ ಗುರುತಿಸುತ್ತಾರೆ :

(೧) 'ಮನುಜಮತ'ಕ್ಕೆ ಕರೆನೀಡುವ ಕುವೆಂಪು ಹಿಂದೂ ಧರ್ಮವನ್ನು ಒಪ್ಪಿಕೊಳ್ಳುತ್ತಾರೆ : (೨) ಸಮಾಜವಾದಿ ತತ್ವವನ್ನು ಒಪ್ಪಿಕೊಂಡೂ ಜಮೀನುದಾರಿ ಉಳಿಗಮಾನ್ಯ ವ್ಯವಸ್ಥೆಯನ್ನು ಬೆಂಬಲಿಸುತ್ತಾರೆ; ಮತ್ತು (೩) ಬ್ರಾಹ್ಮಣಶಾಹಿಯನ್ನು

ವಿರೋಧಿಸುತ್ತಲೇ ಶೂದ್ರ-ದಲಿತ ಶೋಷಣೆಯ ಬಗ್ಗೆ ಮೌನವಾಗಿರುತ್ತಾರೆ (ರಹಮತ್, ಪು. ೩೨೩).

ಈ ಮೂರು ಆಪಾದನೆಗಳಲ್ಲಿ ಮೊದಲಿನ ಎರಡೂ ನಿರಾಧಾರವೆಂಬುದು ಸ್ಪಷ್ಟ. ಈ ಲೇಖನದಲ್ಲಿ ಈಗಾಗಲೇ ವಿವರಿಸಿರುವಂತೆ, ಕುವೆಂಪು ಮತ ಮತ್ತು ಧರ್ಮಗಳನ್ನು ಬೇರೆಬೇರೆಯಾಗಿ ನೋಡುತ್ತಾರೆ; ಮತ್ತು ಸಾಂಸ್ಥೀಕರಣಗೊಂಡ ಎಲ್ಲಾ ಮತಗಳನ್ನು ಹಾಗೂ ಮತಾಚರಣೆಗಳನ್ನೂ ಅವರು ತಿರಸ್ಕರಿಸುತ್ತಾರೆ. ಆದರೆ, ಅವರ ದೃಷ್ಟಿಯಲ್ಲಿ, ಧರ್ಮವೆಂದರೆ ತಾತ್ವಿಕ ಚಿಂತನೆಯಾದ್ದರಿಂದ ಉಪನಿಷತ್ತುಗಳನ್ನು ಅವುಗಳ ಶ್ರೇಷ್ಠ ತಾತ್ವಿಕ ಚಿಂತನೆಗಾಗಿ ಗೌರವಿಸುತ್ತಾರೆ. ಇದೇ ಬಗೆಯ ನಿಲುವನ್ನು ನಾವು ವಿವೇಕಾನಂದರಲ್ಲಿಯೂ ಕಾಣುತ್ತೇವೆ. ಹಾಗೆಯೇ, ಊಳಿಗಮಾನ್ಯ ವ್ಯವಸ್ಥೆಯ ಆಳದಲ್ಲಿರುವ ಕ್ರೌರ್ಯ ಮತ್ತು ರಾಗದ್ವೇಷಗಳನ್ನು ವಸ್ತುನಿಷ್ಠವಾಗಿ ಕುವೆಂಪು ತಮ್ಮ ಕಾದಂಬರಿಗಳ ಪ್ರಮುಖ ಪಾತ್ರಗಳಾದ ಚಂದ್ರೇಗೌಡ, ಹೊನ್ನಾಳಿ ಹೊಡೆತದ ಕಲ್ಲಯ್ಯಗೌಡ ಮುಂತಾದವರ ಪಾತ್ರಗಳ ಮೂಲಕ ಅನಾವರಣ ಮಾಡುತ್ತಾರೆ. ಇನ್ನೂ ಮುಖ್ಯವಾಗಿ, ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ, ಕಾನೂರು ಹೆಗ್ಗಡಿತಿಯಲ್ಲಿ ಚಿತ್ರಿಸಿದ ಸಮಾಜ ಪರಿವರ್ತನೆಯ ಮಾದರಿಗೆ ವಿರುದ್ಧವಾಗಿ, ಒಂದು ಸಮಾಜ ತನ್ನದೇ ಆದ ಅನುಭವ ಹಾಗೂ ಜ್ಞಾನಗಳನ್ನು ಆಧರಿಸಿ, ಸಮಾನತೆ ಮತ್ತು ಸರ್ವೋದಯಗಳನ್ನು ಆಚರಣೆಯಲ್ಲಿ ತಂದು, ಶ್ರೀ ಅರವಿಂದರು ಪ್ರತಿಪಾದಿಸಿದ 'ಉತ್ಕ್ರಾಂತಿ'ಯತ್ತ ಸಾಗುವುದನ್ನು ದರ್ಶಿಸುತ್ತಾರೆ.

ಕೃಷ್ಣಪ್ಪನವರು ಪ್ರಸ್ತಾಪಿಸಿದ ಮೂರನೆಯ ಅಂಶವನ್ನು ಒಂದು ಮಟ್ಟದ ವರೆಗೆ ಒಪ್ಪಬಹುದೆಂದು ತೋರುತ್ತದೆ. ಅದೆಂದರೆ, ದಲಿತ ಪಾತ್ರಗಳ ಬಗ್ಗೆ ಅಲ್ಲ (ಐತ-ಪೀಂಚಲು ಅವರನ್ನು 'ಶಿವ-ಶಿವಾನಿ'ಯರಂತೆ ಕಾಣುವ ಕುವೆಂಪು ದಲಿತರನ್ನು ಅವಗಣಿಸುವ ಸಾಧ್ಯತೆಯೇ ಇಲ್ಲ), ಅ-ಹಿಂದೂ ಪಾತ್ರಗಳ ಬಗ್ಗೆ ಸ್ವಲ್ಪ ನಿರ್ಲಕ್ಷ್ಯವನ್ನು ತೋರಿದ್ದಾರೆನ್ನಬಹುದು. ಅವರ ಪ್ರಾರಂಭಿಕ ಘಟ್ಟದ "ಕ್ರಿಸ್ತನಲ್ಲ ಪಾದ್ರಿಯ ಮಗಳು" ಕಥೆಯನ್ನು ಒಂದು ಹಾಸ್ಯಕಥೆಯೆಂದೂ ಓದಬಹುದು; ಸಂಕೀರ್ಣ ಮತಾಂತರ ಪ್ರಕ್ರಿಯೆಯನ್ನು ವಿಡಂಬಿಸುವ ಕಥೆಯೆಂದೂ ಓದಬಹುದು. ಹಾಗೆಯೇ, ಇವರ ಕಾದಂಬರಿಗಳಲ್ಲಿ ಬರುವ ಮುಸ್ಲಿಂ ಪಾತ್ರಗಳು ಋಣಾತ್ಮಕವಾಗಿಯೇ ಚಿತ್ರಿಸಲ್ಪಟ್ಟಿವೆ. ಈ ಬಗೆಯ ಅ-ಹಿಂದೂ ಪಾತ್ರಗಳ ಋಣಾತ್ಮಕ ಚಿತ್ರಣಕ್ಕೆ, ಪ್ರಾಯಃ, ಅಂದಿನ ಕಾಲದಲ್ಲಿ, ವಿವೇಕಾನಂದರು 'ಮತ'ಕ್ಕೆ ವಿರುದ್ಧವಾಗಿ ಹಿಂದು ಧರ್ಮದ ಪುನರುತ್ಥಾನಕ್ಕಾಗಿ ವಿಶ್ವಾದ್ಯಂತ ಕೈಗೊಂಡಿದ್ದ ವ್ಯಾಪಕ ಕಾರ್ಯ ಮತ್ತು ಅರವಿಂದರು ಮಾಡಿದ ಉಪನಿಷತ್ತುಗಳ ಆಧುನಿಕ ವ್ಯಾಖ್ಯಾನ ಇವುಗಳ ಪ್ರಭಾವ, ಮತ್ತು ಕ್ರಿಶ್ಚಿಯನ್ ವಸಾಹತುಶಾಹಿಯ ವಿರುದ್ಧ ಧಾರ್ಮಿಕ ಆತ್ಮಾಭಿಮಾನವನ್ನು ಉಳಿಸಿಕೊಳ್ಳುವ ಒತ್ತಡ —ಇವೆರಡೂ ಕಾರಣವಾಗಿದ್ದುವೆಂದು ಕಾಣುತ್ತದೆ.

ವಸಾಹತುಶಾಹಿ ಯಾಜಮಾನ್ಯ ಹಾಗೂ ದೇಶೀ ಯಾಜಮಾನ್ಯ ಇವೆರಡನ್ನೂ ಒಟ್ಟಿಗೇ ಎದುರಿಸುತ್ತಾ, ಅಸ್ಮಿತೆ ಹಾಗೂ ವಿಶ್ವಾತ್ಮಕತೆ ಇವೆರಡನ್ನೂ ಬೆಸೆಯಲು ಸದಾ ಯತ್ನಿಸುತ್ತಾ, ಕೊನೆಗೆ ಎಲ್ಲಾ ಬಗೆಯ "ರೂಪು ರೂಪುಗಳನ್ನು ದಾಟಿ," ಅನಿಕೇತನವಾಗಲು

ಹಂಬಲಿಸಿದ ಕುವೆಂಪು ಅವರ ವೈಚಾರಿಕತೆ ಒಂದು ವಿಶಿಷ್ಟ ಕಾಲಘಟ್ಟದ ಪ್ರಭಾವ-ಒತ್ತಡಗಳಿಂದ ರೂಪುಗೊಂಡದ್ದೂ ಅಹುದು; ಆ ಕಾಲಘಟ್ಟದ ಎಲ್ಲೆಗಳನ್ನು ಮೀರಿ ಸಾರ್ವಕಾಲಿಕ ಪ್ರಸ್ತುತತೆಯನ್ನು ಪಡೆಯುವಂತಹುದೂ ಅಹುದು.

ಟಿಪ್ಪಣಿಗಳು

೧. ಬರಗೂರು ರಾಮಚಂದ್ರಪ್ಪ (೨೦೦೧), **ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ.** ಬೆಂಗಳೂರು : ಅಂಕಿತ ಪುಸ್ತಕ, ಪು. ೧೨; ೨. ಹೆಚ್ಚಿನ ವಿವರಗಳಿಗಾಗಿ ನೋಡಿ : ಕೆ. ಫಣಿರಾಜ್ (೨೦೦೩), **ಅಂಟೋನಿಯೋ ಗ್ರಾಮ್ಶಿ.** ಬೆಂಗಳೂರು : ಅಭಿನವಪ್ರಕಾಶನ; ೩. "ಬರೆಯಬಯಸು ವವರಿಗೆ ಒಂದು ಎಚ್ಚರಿಕೆ," **ವಿಚಾರ ಕ್ರಾಂತಿಗೆ ಆಹ್ವಾನ** (೧೯೭೮). ಮೈಸೂರು : ಉದಯರವಿ ಪ್ರಕಾಶನ, ಪು. ೧೬; ೪. "ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು," **ವಿಚಾರ ಕ್ರಾಂತಿಗೆ ಆಹ್ವಾನ**, ಪು. ೩೦; ೫. **ವಿಚಾರ ಕ್ರಾಂತಿಗೆ ಆಹ್ವಾನ**, ಪು. ೬; ೬. **ಶ್ರೀ ರಾಮಾಯಣ ದರ್ಶನಂ** (೨೦೦೦). ಕನ್ನಡ ಪುಸ್ತಕ ಪ್ರಾಧಿಕಾರ, ೧:೧೧ : ೫೯೪-೫೯೭, ಪು. ೨೧೧; ೭. 'ಎಕ್ಸಿಲಿಕ್ ಕ್ವಾಲಿಟಿ'ಯನ್ನು 'ಅ-ರಾಷ್ಟ್ರೀಯ ಪ್ರಜ್ಞೆ' ಎಂದು ಭಾಷಾಂತರಿಸಬಹುದು. ಇನ್ನೊಂದು ನೆಲೆಯಿಂದ ಇದನ್ನು 'ಲಿಮಿನಲ್ ಸ್ಪೇಸ್' ಅಥವಾ 'ಸ್ವತಂತ್ರ ಸ್ಥಳ' ಎಂದು ಹೋಮೀ ಭಾಭಾ ಕರೆಯುತ್ತಾರೆ. ಹೆಚ್ಚಿನ ವಿವರಗಳಿಗೆ ನೋಡಿ : ಸಿ. ಎನ್. ರಾಮಚಂದ್ರನ್ (೨೦೦೩), **ಎಡ್ವರ್ಡ್ ಸೈದ್.** ಕನ್ನಡ ಪುಸ್ತಕ ಪ್ರಾಧಿಕಾರ, ಪು. ೭೬-೭೯, ೯೬-೧೦೦; ೮. "ಹೊಸ ಸಾಹಿತ್ಯ ಹೊಸ ದೃಷ್ಟಿ," **ಕನ್ನಡ ಸಾಹಿತ್ಯ ಮೀಮಾಂಸೆ** (೨೦೦೧). ಕನ್ನಡ ವಿಶ್ವವಿದ್ಯಾನಿಲಯ, ಹಂಪಿ; ಪು. ೭೯, ಡಾ. ಸಿ. ಎನ್. ರಾಮಚಂದ್ರನ್

(ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ವಿಶ್ವವಿದ್ಯಾನಿಲಯ ಮಾರ್ಚ್ ೧-೨, ೨೦೦೪ ರಂದು ಆಯೋಜಿಸಿದ್ದ "ಕುವೆಂಪು ವಿಚಾರ ಸಂಕಿರಣ"ದಲ್ಲಿ ಮಾಡಿದ ಭಾಷಣದ ಲಿಖಿತ ರೂಪ.)

● ●

ಡಾ. ಸಿ. ಎನ್. ರಾಮಚಂದ್ರನ್ : ೫, ಪ್ರೇಮಸಾಗರ ಅಪಾರ್ಟ್‌ಮೆಂಟ್, ಮಣ್ಣಗುಡ್ಡ, ಮಂಗಳೂರು-೩

ಈ ಬೆಳಕು

ಡಿ. ಬಿ. ಢಂಗ

ಭೂಮಿ ಆಕಾಶದ ನಡುವೆ
ವಾತಾವರಣದೆದೆಯೊಳಗೆ
ಕಾಣುವುದೇ ಭಾವದ ಬೆಳಕು ?
ಅದರಿಂದಲೇ ನಾವು ನೋಡುವುದು
ಎಲ್ಲ ವಸ್ತುವಿನ ಹೊಳಪು.
ಹೊಟ್ಟೆಗೆ ಏಕ್ಕಿದ್ದು ಮಾತ್ರ
ಜೀರ್ಣವಾಗುವ ಹಾಗೆ
ವಸ್ತುವಿಗಿರುವ ಬಣ್ಣದ ಗುಣ
ಪ್ರತಿಫಲಿಸುವ ಕಿರಣ.
ಕಣ್ಮನ ಸೆಳೆತದಲಿ
ಅದರದೇ ನೇರ ಚಲನವಲನ.
ಗುರಿ ತಲುಪುವ ದಿಟ್ಟತನ.

ಒಮ್ಮೊಮ್ಮೆ ತನ್ನೊಳಗಡಗಿದ
ಬಣ್ಣಗಳ ವೈವಿಧ್ಯ-ವಿಭಜನೆಯ
ಕಾಮ-ನ ಬಿಲ್ಲು ಕಂಡಾಗ
ಮೈ-ಮನಕೆ ಬೆರಗು.
ಆಗಾಗ ಬಿರುಗಾಳಿ ಬಿಟ್ಟಾಗ
ಮೈತುಂಬ ಧೂಳಿ ಕಣ-ತೊಡಕು.
ಇರುವ ಬೆಳಕಿನೊಳಗೆ
ಕಂಡದ್ದು ಮಸಕು.
ನಿತ್ಯ ನಡೆಯುವ ಈ ಕ್ರಿಯೆ
ಇರಬಹುದೇ?
ನಮ್ಮೀ ಬದುಕಿನಂಗಳದಲಿ
ಚೆಲ್ಲುವರಿದಿಹ ಮಾಯೆ.

● ● ಡಿ. ಬಿ. ಢಂಗ : ಕಡೇಮನಿ ಕಂಪೌಂಡ್, ಇನೇ ಕ್ರಾಸ್, ಸಪ್ತಾಪುರ, ಧಾರವಾಡ-೫೮೦ ೦೦೧

ಮುಳ್ಳೂರು ನಾಗರಾಜ್ ಅವರ 'ನೆಲದ ಜೋಗುಳ'

ಬಸವರಾಜ ಸಬರದ

ಕನ್ನಡದಲ್ಲಿ ಮಹಾಕಾವ್ಯ ರಚನೆಗೆ ದೀರ್ಘವಾದ ಪರಂಪರೆಯಿದೆ. ಹತ್ತನೇ ಶತಮಾನದ ಆದಿಕವಿ ಪಂಪನಿಂದ ಪ್ರಾರಂಭವಾಗಿ, ಸಮಕಾಲೀನ ಸಂದರ್ಭದ ಮುಳ್ಳೂರು ನಾಗರಾಜ್ ಅವರ ವರೆಗೂ ಅದು ಮುಂದುವರಿದಿದೆ. 'ಮಹಾಕಾವ್ಯ' –'ಮಹಾಕೃತಿ' ಎಂಬಂತಹ ಪದಗಳಿಗೆ ಸಂಬಂಧಿಸಿದಂತೆ ಮಹತ್ವಪೂರ್ಣವಾದ ಚರ್ಚೆ ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ.

ಮಹಾಕಾವ್ಯ-ಮಹಾಕೃತಿ ಹಾಗೆಂದರೇನು? ಅದು ವಸ್ತುವಿನ ದೃಷ್ಟಿಯಿಂದ ಮಹಾ ಆಗಿರುವಂಥದ್ದೆ? ಆಶಯದ ದೃಷ್ಟಿಯಿಂದ ಮಹತ್ವವಾದದ್ದೆ? ಕಾವ್ಯದ ದೃಷ್ಟಿಯಿಂದ ಮುಖ್ಯವಾದದ್ದೆ? ಎಂಬಂತಹ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳೇ ಇಲ್ಲ. ಎಷ್ಟೋ ಮಹಾಕಾವ್ಯಗಳು ಗಾತ್ರ-ಪಾತ್ರದ ದೃಷ್ಟಿಯಿಂದ ಮಹಾ ಆಗಿರುತ್ತವೆ, ಆದರೆ ಅಲ್ಲಿ ಕಾವ್ಯವೇ ಗೈರುಹಾಜರಾಗಿರುತ್ತದೆ. ಧೀರೋದಾತ್ತ ನಾಯಕನನ್ನು ಸೃಷ್ಟಿಸಿ ಹದಿನೆಂಟು ವರ್ಣನೆಗಳನ್ನು ತಂದಾಕ್ಷಣ ಅದು ಮಹಾಕಾವ್ಯವಾಗಿ ಬಿಡುತ್ತದೆಯೆ? ದೀರ್ಘವಾದ ಕಥಾವಸ್ತುವನ್ನೊಳಗೊಂಡಾಕ್ಷಣ, ಅನೇಕ ಪಾತ್ರಗಳನ್ನು ಚಿತ್ರಿಸಿದಾಕ್ಷಣ, ಅಧಿಕ ಪುಟಗಳಲ್ಲಿ ಪ್ರಕಟಗೊಂಡಾಕ್ಷಣ ಅದು ಮಹಾಕಾವ್ಯವಾಗಿ ಬಿಡುತ್ತದೆಯೆ? ಇಂತಹ ಪ್ರಶ್ನೆಗಳನ್ನು ಕೇಳುತ್ತಾ ಹೋದಂತೆ ಇದೇ ಒಂದು ದೊಡ್ಡ ಚರ್ಚೆಯಾಗಿ ಬೆಳೆಯುತ್ತದೆ. ಬದುಕಿನಲ್ಲಿ ಮಹತ್ವದ ಕ್ಷಣಗಳಿರುವಂತೆ ಕಾವ್ಯದಲ್ಲಿಯೂ ಅನನ್ಯವಾದ ಅಭಿವ್ಯಕ್ತಿ ಇರುತ್ತದೆ. ಆದರೆ ಅದು ಮಹಾಕಾವ್ಯದಲ್ಲಿಯೇ ಇರುತ್ತದೆ, ಸಣ್ಣ ಕವಿತೆಗಳಲ್ಲಿ ಇರುವುದಿಲ್ಲವೆಂದರ್ಥವಲ್ಲ-ಅಲ್ಲಮಪ್ರಭುವಿನ ಯಾವುದೇ ಒಂದು ವಚನ, ಅಕ್ಕಮಹಾದೇವಿಯ ಯಾವುದೇ ಒಂದು ನುಡಿ ಯಾವುದೇ ಒಂದು ಮಹಾಕಾವ್ಯ ಉಂಟುಮಾಡುವ ಪರಿಣಾಮಕ್ಕಿಂತಲೂ ದೊಡ್ಡದು. ಈ ಅಂಶವನ್ನು ಗಮನಿಸಿದಾಗ ಮಹಾಕಾವ್ಯದ ಮಿತಿಗಳು ಪ್ರಕಟಗೊಳ್ಳಲು ಸಾಧ್ಯವಾಗುತ್ತದೆ.

ಸಮಾಜದಲ್ಲಿ ಮೇಲು-ಕೀಳು, ಶ್ರೀಮಂತ-ಬಡವ, ಉಚ್ಚ-ನೀಚ ಎಂಬಂತಹ ವಿಂಗಡನೆ ಇರುವ ವರೆಗೆ ಮಹಾಕಾವ್ಯ-ಸಣ್ಣಕಾವ್ಯವೆಂಬಂತಹ ಭೇದಗಳು ಇದ್ದೇ ಇರುತ್ತವೆ. ಎಲ್ಲ ಜಾತಿ-ಜನಾಂಗ-ಪ್ರದೇಶಗಳಲ್ಲಿರುವ ಮನುಷ್ಯರಲ್ಲಿ ಮಾನವೀಯತೆ ಮಾತ್ರ ಮುಖ್ಯವೆಂದು ತಿಳಿದುಕೊಂಡ ಮನಸ್ಸಿಗೆ, ಎಲ್ಲ ಬಗೆಯ ಕಾವ್ಯಕೃತಿಗಳಲ್ಲಿ ಕಾವ್ಯ ಮಾತ್ರ ಮುಖ್ಯವಾಗಿ ಕಾಣಿಸುತ್ತದೆ. ಆಗ ಇಂತಹ ಭೇದಗಳಿಗೆ ಅಲ್ಲಿ ಸ್ಥಾನವೇ ಇರುವುದಿಲ್ಲ. ಇಂತಹ ಆಶಯವನ್ನು ಹೊಂದಿದ್ದ ವಚನಕಾರರಾಗಲಿ-ಕೀರ್ತನಕಾರರಾಗಲಿ-ತತ್ತ್ವಪದಕಾರರಾಗಲಿ ಯಾವುದೇ ಮಹಾಕಾವ್ಯ ರಚನೆಗೆ ಕೈ ಹಾಕಲಿಲ್ಲ. ಆಧುನಿಕ ಸಂದರ್ಭದಲ್ಲಿಯೂ ಕೂಡ ಪ್ರಗತಿಶೀಲರು-ನವ್ಯರು ಹಾಗೂ ಬಂಡಾಯ ಕವಿಗಳು ಮಹಾಕವಿಗಳೆಂದು ಹೇಳಿಕೊಳ್ಳಲಿಲ್ಲ. ಬಂಡಾಯದವರಂತೂ ಮಹಾಕಾವ್ಯ ಪರಂಪರೆಯನ್ನು, ಮಹಾನಾಯಕ ಸಂಸ್ಕೃತಿಯನ್ನು ಧಿಕ್ಕರಿಸುತ್ತಲೇ ಹೊಸ ಕಾವ್ಯಮೀಮಾಂಸೆ ಹುಟ್ಟಿಕೊಳ್ಳಲು ಕಾರಣರಾದರು. ಆಸ್ಥಾನ ಪಂಡಿತರಲ್ಲಿ

ಮಾತ್ರ ಕಾವ್ಯವಿಲ್ಲ, ಬೀದಿಯಿಂದಲೂ ಕಾವ್ಯ ಹುಟ್ಟುವುದು ಸಾಧ್ಯವೆಂದು ತೋರಿಸಿಕೊಟ್ಟರು, ಪ್ರಣಾಳಿಕೆಯೂ ಹೇಗೆ ಕಾವ್ಯವಾಗಬಲ್ಲದೆಂಬುದನ್ನು ಸ್ಪಷ್ಟಪಡಿಸಿದರು. ಅರಮನೆ-ಗುರುಮನೆಗಳಿಂದ ಮಾತ್ರ ಕಾವ್ಯ ಹುಟ್ಟುವುದಿಲ್ಲ, ದಲಿತರ ಗುಡಿಸಲುಗಳಿಂದಲೂ ಕಾವ್ಯ ಅರಳುತ್ತದೆಂಬುದನ್ನು ಸಾಬೀತು ಪಡಿಸಿದರು.

ಇಂತಹ ಪ್ರಯತ್ನಗಳಲ್ಲಿ ಮುಳ್ಳೂರು ನಾಗರಾಜ್ ಅವರ 'ನೆಲದ ಜೋಗುಳ'ವೂ ಒಂದು. ಇದು ಮಹಾಕಾವ್ಯ ಹೌದೊ ಅಲ್ಲವೊ? ಆದರೆ ಮಹತ್ವದ ಕಾವ್ಯವಂತೂ ಹೌದು. ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಕೆಲವು ಮಹಾಕಾವ್ಯಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಅವುಗಳಲ್ಲಿ ಕಾವ್ಯದ ಅನನ್ಯತೆ ಕಾಣಿಸಿಕೊಳ್ಳುವುದು ತುಂಬಾ ಅಪರೂಪ. ಆದರೆ 'ನೆಲದ ಜೋಗುಳ' ಇದಕ್ಕೆ ಭಿನ್ನವಾಗಿದೆ. ಇಲ್ಲಿ ಕಾವ್ಯವೇ ಪ್ರಧಾನ, ಉಳಿದದ್ದೆಲ್ಲಾ ಗೌಣ.

ಹೀಗಾಗಿ ಈ ಆಧುನಿಕ ಮಹಾಕಾವ್ಯಗಳ ಸಾಲಿನಲ್ಲಿ 'ನೆಲದ ಜೋಗುಳ'ವನ್ನಿಟ್ಟು ನೋಡುವುದು ಈ ಕೃತಿಗೆ ಮಾಡುವ ಅಪಚಾರವಾಗುತ್ತದೆ. ಆದ್ದರಿಂದ 'ನೆಲದ ಜೋಗುಳ'ವನ್ನು ಇಲ್ಲಿ ಮಹತ್ವದ ಕಾವ್ಯವೆಂದು ಪರಿಗಣಿಸಿ ಚರ್ಚೆಗೆತ್ತಿಕೊಂಡಿದ್ದೇನೆ. ೧೯೯೩ ರಲ್ಲಿ ಪ್ರಕಟವಾದ ಈ ಕೃತಿಯನ್ನು ಕುರಿತಂತೆ ಈಗಾಗಲೇ ಕೆಲವು ವಿಮರ್ಶಾ ಲೇಖನಗಳು ಪ್ರಕಟವಾಗಿವೆ.

ಈ ಕೃತಿಯ ಪ್ರಾರಂಭದಲ್ಲಿ ತಮ್ಮ ಈ ಕಾವ್ಯದ ಉದ್ದೇಶವನ್ನು ಕುರಿತು ಮುಳ್ಳೂರು ನಾಗರಾಜ್ ಹೀಗೆ ಹೇಳಿದ್ದಾರೆ : "ಗತಕಾಲದ ಬದುಕಿನ ಜತೆಗೆ ಆಧುನಿಕ ಒಳನೋಟಗಳನ್ನು ಒಳಗೊಂಡ ಈ ಮಹಾಕಾವ್ಯದ ನೆಲೆ, ಕಾಲದೊಡನೆ ಸ್ಪರ್ಧಿಸುತ್ತಿರುವ ದಲಿತ ಬದುಕು. ಕೊಲೆಯಾದವನ ತಾಯಿ ಈ ನೆಲವು ಕೊಲೆಗಾರನಿಗೂ ಕೂಡಾ ತಾಯಿ. ಅದರಿಂದಾಗಿ ಇದು ನೆಲದ ಜೋಗುಳ. ಈ ಜೋಗುಳ ಕಾಲಾತೀತವಾದದ್ದು" (ಪುಟ i)

ಇಲ್ಲಿ ಕವಿ ಸ್ಪಷ್ಟಪಡಿಸಿರುವಂತೆ ಗತಕಾಲದ ಶಂಬೂಕನ ಕಥಾನಕವೇ ಪ್ರಧಾನವಾಗಿದೆ. ಆದಿಕವಿ ವಾಲ್ಮೀಕಿಯ ಕಾವ್ಯನಾಯಕನಾದ ರಾಮ, ಇಲ್ಲಿ ಖಳನಾಯಕನಾಗಿ ಪ್ರಕಟಗೊಂಡಿದ್ದಾನೆ. ಖಳನಾಯಕನಷ್ಟೇ ಅಲ್ಲ ದಲಿತರ ಕೊಲೆಗಳ ಉದ್ಘಾಟಕನಂತೆ ರಾಮ ಇಲ್ಲಿ ಕಾಣಿಸಿಕೊಂಡಿದ್ದಾನೆ. ಇದನ್ನು ಕವಿ ಕಾವ್ಯದಲ್ಲಿ ಹೀಗೆ ಹೇಳಿದ್ದಾರೆ :

"ರಾಮಸಂಘ ನರಹಂತಕರ ಮನುಚಿಂತಕರ ನೆತ್ತಿ ಮೇಲೆ
ಪ್ರತಿಭಟನೆಯ ಪಾದಧೂಳಿ ಕೂರಲೆಂದು ಬಂಡಾಯದ ಬದುಕು ಬಾಳಲೆಂದು
ಲೋಕದಾಕಾಶದಲ್ಲಿ ಹೊಸ ಬೆಳಕಿನ ಉದಯವಾಗಲೆಂದು
ಬರೆದೆ ನಾನು ಕಾವ್ಯವ..." (ಪುಟ ೧೦೭)

'ನೆಲದ ಜೋಗುಳ' ಕುರಿತಂತೆ ಕವಿ, ಪ್ರಸ್ತಾವನೆಯಲ್ಲಿ ಮತ್ತು ಕಾವ್ಯದಲ್ಲಿ ಈ ರೀತಿಯ ವಿಚಾರಗಳನ್ನು ಪ್ರಕಟಪಡಿಸಿದ್ದಾನೆ. ಆದರೆ ಉಳಿದ ಮಹಾಕಾವ್ಯಗಳ ಕೃತಿಯಲ್ಲಿರುವಂತೆ ಕಥಾವಸ್ತು ಇಲ್ಲಿ ಪ್ರಧಾನವಾಗಿಲ್ಲ. ಹೆಚ್ಚು ಪಾತ್ರಗಳು ಬರುವುದೇ ಇಲ್ಲ, ಪಾತ್ರಗಳ ಬೆಳವಣಿಗೆಯೂ ಇಲ್ಲ. ೨೨೦ ಪುಟಗಳ ಈ ಕೃತಿಯಲ್ಲಿ ಕಾವ್ಯದ ಲಯವೇ ಕೇಂದ್ರವಾಗಿದೆ, ನೋವಿನ ಅಭಿವ್ಯಕ್ತಿಯೇ ಪ್ರಧಾನವಾಗಿದೆ.

'ಶೂದ್ರ ತಪಸ್ವಿ' ನಾಟಕದಲ್ಲಿ ಶಂಬೂಕನನ್ನು ನಾಯಕನನ್ನಾಗಿ ಮಾಡಿಕೊಂಡು ಕುವೆಂಪು ಅವರು ದಲಿತರನ್ನು ಕುರಿತು ಮೊದಲ ಬಾರಿಗೆ ಬರೆದಿದ್ದಾರೆ. ಆದರೆ ಕುವೆಂಪು ಅವರ ಶಂಬೂಕನಿಗೂ, ಮುಳ್ಳೂರರ ಶಂಬೂಕನಿಗೂ ವ್ಯತ್ಯಾಸವಿದೆ. ದಲಿತ ಬದುಕನ್ನು ವಿವರವಾಗಿ ತಮ್ಮ ಕಾದಂಬರಿಗಳಲ್ಲಿ ಬಿಡಿಸಿಟ್ಟಂತೆ ಕುವೆಂಪು, ನಾಟಕಗಳಲ್ಲಿ ಆ ಕಾರ್ಯವನ್ನು ಮಾಡಿಲ್ಲ. ಕುವೆಂಪು ನಾಟಕಗಳ ದಲಿತ ನಾಯಕರೆಲ್ಲಾ ವೈದಿಕ ಸಂಸ್ಕೃತಿಯನ್ನು ಒಪ್ಪಿಕೊಂಡು ಚಾತುರ್ವರ್ಣ್ಯದ ಚೌಕಟ್ಟಿನಲ್ಲಿ ಸಿಕ್ಕು ನರಳುತ್ತಾರೆ. ಜಲಗಾರ ಹೊಸ ದೇವರನ್ನು ಕಾಣಲು ಕಾತರಿಸುವುದು, ಏಕಲವ್ಯ ಕರ್ಮಸಿದ್ಧಾಂತದಲ್ಲಿ ಸಿಕ್ಕು ನರಳುವುದು, ಶಂಬೂಕ ತಪಸ್ಸು ಮಾಡಲು ಹಟ ತೊಟ್ಟು ಹತನಾಗುವುದು ಇದನ್ನೆಲ್ಲಾ ಗಮನಿಸಿದಾಗ, ದಲಿತರ ಮೂಲಭೂತ ಬದಲಾವಣೆಗಾಗಿ ಕುವೆಂಪು ಪ್ರಯತ್ನಿಸಿಲ್ಲವೆನಿಸುತ್ತದೆ (ನೋಡಿ : 'ಕುವೆಂಪು ನಾಟಕಗಳಲ್ಲಿ ದಲಿತ ಪ್ರಜ್ಞೆ' –ಸಂಕ್ರಮಣ, ಅಕ್ಟೋಬರ್ ೧೯೮೪, ಲೇ. : ಡಾ. ಬಸವರಾಜ ಸಬರದ).

ಮುಳ್ಳೂರರ 'ಶಂಬೂಕ' ದಲಿತರ ಸಾಂಸ್ಕೃತಿಕ ವೀರನಂತೆ ಚಿತ್ರಿಸಲ್ಪಟ್ಟಿದ್ದಾನೆ. ಶಂಬೂಕನ ಮೂಲಕ ದಲಿತ ಲೋಕದ ನೋವು-ಸಂಕಟಗಳು ಇಲ್ಲಿ ಕಾವ್ಯದ ರೂಪ ಪಡೆದಿವೆ. ಮುಳ್ಳೂರರಿಗೆ ಶಂಬೂಕ ಕೇವಲ ಒಂದು ಪುರಾಣಕಾವ್ಯದ ಪಾತ್ರವಾಗಿ ಕಾಣದೆ, ದಲಿತ ಬದುಕಿನ ಮೊದಲ ಪರಂಪರೆಯಾಗಿ, ಹತಾಶೆಯ ಪ್ರತೀಕವಾಗಿ ಕಾಣಿಸಿಕೊಳ್ಳುತ್ತಾನೆ. ಆ ಮೂಲಕ ಆಧುನಿಕ ಸಂದರ್ಭಕ್ಕೂ ಸುತ್ತುವರಿದು ಹೋರಾಟದ ಆಶಯವಾಗಿ ನಿಲ್ಲುತ್ತಾನೆ.

ಮೂಲ ರಾಮಾಯಣವನ್ನು ಬರೆದ ಕವಿ ವಾಲ್ಮೀಕಿ ಕೂಡಾ ಶೂದ್ರ ಪರಂಪರೆಗೆ ಸೇರಿದವನು. ಆದರೆ ಆತನಿಗೆ ಶಂಬೂಕನ ಬಗೆಗೆ ಕನಿಕರವಿರಲಿಲ್ಲ. ನೆಲದ ನೋವಿಗೆ ಆತ ಮರುಗಲಿಲ್ಲ. ಇದನ್ನು ಕವಿ ಹೀಗೆ ಹೇಳಿದ್ದಾನೆ :

"ಕೊಂದವರ ಕತೆಯನ್ನು ಹಿರಿದಾಗಿ ಬರೆದಿಹನು
ಸತ್ತವರ ನೋವನ್ನು ದನಿಸಲಿಲ್ಲ
ನೆಲದೊಡೆಯರ ಕುಲದ ಹಿರಿಮೆಯನು
ಘನವೆಂದು ಹಾಡಿದನು ಬೇಡನು
ಜನರ ನೋವನ್ನು ಕುರಿತು ಬರೆಯಲಿಲ್ಲ!
ಯಾರು ಇತ್ತರವ್ವಾ ಹಿತ್ತಾಳೆ ಕಿವಿಗಳಿಗೆ ರಾಜತ್ವ
ಯಾರು ಇತ್ತರವ್ವಾ ಹೇಡಿಗಳಿಗೆ ರಣಧೀರರೆಂಬ ಬಿರುದು
ಯಾರು ಇತ್ತರವ್ವಾ ಕತ್ತಲೆಗೆ ಬೆಳಕಿನ ಹೆಸರು?"–(ನೆಲದ ಜೋಗುಳ, ಪು. ೨೪೩)

ನೆಲದೊಡೆಯರ ಕುಲದ ಹಿರಿಮೆಯನು ಘನವೆಂದು ಹಾಡಿದ ವಾಲ್ಮೀಕಿ ಕವಿಯ ಬಗೆಗೆ ಮುಳ್ಳೂರ ಅವರಿಗೆ ಬೇಸರವಿದೆ. ದಲಿತರ ನೋವು-ಸಂಕಟಗಳನ್ನು ಉಳಿತ ದಲಿತೇತರರು ಸರಿಯಾಗಿ ಅರ್ಥ ಮಾಡಿಕೊಳ್ಳಲಾರರೆಂಬ ವಿಷಾದವಿದೆ.

ಪ್ರಾರಂಭದಲ್ಲಿಯೇ ಮುಳ್ಳೂರವರು ತಮ್ಮ ಕಾವ್ಯದ ಧೋರಣೆಯನ್ನು ಸ್ಪಷ್ಟಪಡಿಸಿಕೊಂಡಿದ್ದಾರೆ. ಕಡತಂದ ಕನಸುಗಳು ಬೇಡ, ಬಾಡಿಗೆಯ ಹಾಡುಗಳು ಬೇಡವೆಂದು ಸ್ಪಷ್ಟಪಡಿಸಿದ್ದಾರೆ. ರಾಜ-ರಾಜರ ಕುರಿತು ಹಾಡಲಾರೆ, ದೇವಕನ್ನಿಕೆಯರ ಚೆಲುವ ಪಾಡಲಾರೆ ಎಂದು ಖಚಿತಪಡಿಸಿದ್ದಾರೆ.

"ಯಾವ ಮಾಂತ್ರಿಕನ ಮನೆಯ ಗಿಳಿಯಲ್ಲ ನಾನು
ನೆಲದ ಸೂಳೆಯರ ಯೋನಿರಾಜ್ಯದ ಗೀಜಗನಲ್ಲ ನಾನು
ಮುಗಿಲ ಮಲ್ಲಿಗೆಯ ಸುಕುಮಾರ ಲೋಕದ ಯಕ್ಷನಲ್ಲ
ತೇಲಲಾರೆ ಮುಗಿಲುಗಳ ಮೇಲೆ ದಿಗಿಲು ತುಂಬಿ
ನೆಲದ ಜೋಗುಳದಲ್ಲಿ ಕರುಳ ಹಾಡುಗಳ ಹಾಡುವೆ..."–(ನೆ. ಜೋ., ಪು. ೯)

ಕಾವ್ಯದ ಪ್ರಾರಂಭದ ನಾಂದಿಯಲ್ಲಿಯೇ ತಮ್ಮ ಕಾವ್ಯಧೋರಣೆಗಳನ್ನು ಈ ಕವಿ ಸ್ಪಷ್ಟಪಡಿಸಿದ್ದಾರೆ. ನೆಲದ ಜೋಗುಳದ ಮಹತ್ವವನ್ನು ಪ್ರಕಟಪಡಿಸಿದ್ದಾರೆ. ಮುಳ್ಳೂರ ದಾರಿಯಲ್ಲಿ ಕಲ್ಲುಸಕ್ಕರೆ ಹಾಡಿದು –ಎಂದು ತಮ್ಮ ಕಾವ್ಯಕೃತಿಯ ಆಶಯವನ್ನು ವಿವರಿಸಿದ್ದಾರೆ. ನಿನ್ನೆ ಮತ್ತು ನಾಳೆಗಳ ಮೂಲಕ ಇಂದಿನ ವಾಸ್ತವವನ್ನು ಕಂಡುಕೊಳ್ಳುವುದು ಇಲ್ಲಿಯ ಆಶಯವಾಗಿದೆ. ಆದ್ದರಿಂದ ಈ ಕಾವ್ಯದ ನಾಯಕ ಶಂಬೂಕ, ಕೇವಲ ಒಂದು ಪಾತ್ರವಾಗಿ ಬಾರದೆ ದಲಿತ ಸಂಸ್ಕೃತಿಯ ಸ್ಮೃತಿಯಾಗಿ, ಆಧುನಿಕ ಸಂದರ್ಭದ ಎಚ್ಚರವಾಗಿ ಪ್ರಕಟಗೊಂಡಿದ್ದಾನೆ.

'ನೆಲದ ಜೋಗುಳ' ಹತ್ತೊಂಬತ್ತು ಗರಿಗಳಲ್ಲಿ (ಅಧ್ಯಾಯಗಳಲ್ಲಿ) ಹರಡಿಕೊಂಡಿದೆ. ಕೊನೆಗೆ ಉಪಸಂಹಾರವಿದೆ. ಉಳಿದ ಮಹಾಕಾವ್ಯಗಳಲ್ಲಿಯಂತೆ ಇಲ್ಲಿ ಕಥೆ ಅಧ್ಯಾಯದಿಂದ ಅಧ್ಯಾಯಕ್ಕೆ ಬೆಳೆದು ನಿಲ್ಲುವದಿಲ್ಲ. ಕಥಾವಿವರಗಳಾವುವೂ ಇಲ್ಲಿ ಸ್ಪಷ್ಟವಾಗುವುದಿಲ್ಲ. ಅಸಮಾನತೆಯ ವ್ಯವಸ್ಥೆಯೊಂದಿಗೆ ನೊಂದ ದಲಿತ ಮನಸ್ಸಿನ ಸಂಘರ್ಷ ಕಾವ್ಯಮುದ್ದಕ್ಕೂ ಪ್ರಕಟವಾಗಿದೆ. ಆದುದರಿಂದಲೆ ಇದು ಕೇವಲ ಶಂಬೂಕನ ಕಥೆಯಾಗಿ ಮಾತ್ರ ಉಳಿಯುವುದಿಲ್ಲ, ಸಮಕಾಲೀನ ಸಂದರ್ಭದ ಹೋರಾಟದ ನೆಲೆಯೂ ಆಗಿದೆ.

ಮುಕ್ತ ಛಂದಸ್ಸಿನ ಈ ಕಾವ್ಯಕೃತಿಯಲ್ಲಿ ಒಂದು ಏಕಸೂತ್ರತೆ ಇಲ್ಲ. ಆರು-ಎಂಟು-ಹತ್ತು ಸಾಲುಗಳುಳ್ಳ ಹನಿಗವಿತೆಗಳೇ ಇಲ್ಲಿ ಪ್ರಧಾನವಾಗಿವೆ. ಇವುಗಳನ್ನು ಜೋಡಿಸಿಕೊಂಡು ಓದಬಹುದು, ಬಿಡಿ-ಬಿಡಿಯಾಗಿಯೂ ಓದಬಹುದು. ವಚನಗಳಂತೆ, ಈ ಹನಿಗವಿತೆಗಳು ಹೃದ್ಯವಾಗಿವೆ. ಇಲ್ಲಿಯ ಕಾವ್ಯದ ಮೇಲೆ ವಚನಗಳ ಪ್ರಭಾವ ದಟ್ಟವಾಗಿರುವುದನ್ನು ಕಾಣಬಹುದಾಗಿದೆ. ಅಕ್ಕಮಹಾದೇವಿಯ ವಚನಗಳ ಛಾಯೆ ಅನೇಕ ನುಡಿಗಳಲ್ಲಿ ಎದ್ದು ಕಾಣುತ್ತದೆ. ಕಾವ್ಯದ ಅನನ್ಯತೆಯನ್ನು ಬಿಟ್ಟುಕೊಡದೆ, ಎದೆಯೊಳಗಿನ ಸಂಕಟವನ್ನು ಬಿಚ್ಚಿಟ್ಟ ಕಾವ್ಯ ಇದಾಗಿದೆ. ಹೀಗಾಗಿ 'ನೆಲದ ಜೋಗುಳ' ಕೃತಿಗೆ ತನ್ನದೇ ಆದ ವಿಶಿಷ್ಟತೆಯಿದೆ.

"ಮಂದಹಾಸದ ಬೀದಿಗಳಲಿ
ಅಲೆಯುತಿದೆ ಪ್ರೇಮ ಹಸುಗೂಸಿನಂತೆ"
"ಬೆಂಕಿ ನೀಡವ್ವ ಹೂವುಗಳ ಸೆರಗಿಗೆ
ಮತ್ತೆ ತಾರವ್ವ ಕತ್ತಲೆಗೆ ಮುತ್ತುಗಳ"
"ಗಲ್ಲಿಗೇರಿದ ಸೂರ್ಯನಿಲ್ಲಿ ನಿಂತಿಹನು
ರಕ್ತದಾಹದ ಕಣಿವೆಯಲ್ಲಿ ದಾರಿತಪ್ಪಿಹನು"

ಇಂತಹ ಸಾಲುಗಳನ್ನು ಓದುತ್ತಾ ಹೋದಂತೆಲ್ಲ ಶಂಬೂಕನ ಕಥೆ ಕಣ್ಮರೆಯಾಗಿ ಬದುಕಿನ ವ್ಯಥೆ ಬಿಚ್ಚಿಕೊಳ್ಳತೊಡಗುತ್ತದೆ. ಪ್ರತಿಪುಟವೂ ಕರುಳಿನ ಕರೆಯಾಗಿ ಕಣ್ಮುಂದೆ ನಿಲ್ಲುತ್ತದೆ.

ಹೊಲೆತನ ಯಾವುದೆಂದು ಕವಿ ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಸೆರಗಿನಲಿ ಕಟ್ಟಿಕೊಂಡ ಕೋಪ, ದಾರದಲ್ಲಿ ನೇಣುಗೊಂಡ ಜಾತಿ, ಹುಸಿಯನಾಡುವ ನಾಲಗೆ, ಕ್ರೋಧ ತುಂಬಿದ ಮನಸು ಹೊಲೆಯಲ್ಲವೆ? ಎಂದು ಕೇಳುವ ಪ್ರಶ್ನೆ ಶತಮಾನಗಳ ಶೋಷಣೆಗೆ ಮಹತ್ವದ ಪ್ರತಿಕ್ರಿಯೆ ಆಗಿದೆ. ಹಿಂದೆ ಶಿವಶರಣರು, ಹರಿದಾಸರು-ತತ್ತ್ವಪದಕಾರರು ಇಂತಹ ಪ್ರಶ್ನೆಗಳನ್ನು ಕೇಳಿದ್ದಾರೆ, ರಾಘವಾಂಕನ ಹರಿಶ್ಚಂದ್ರ ಕಾವ್ಯದ ಹೊಲತಿಯರೂ ಇಂತಹ ಪ್ರಶ್ನೆ ಕೇಳಿದ್ದಾರೆ. ಆದರೆ ಇಂದಿನ ವರೆಗೂ ಇಂತಹ ಪ್ರಶ್ನೆಗಳಿಗೆ ಉತ್ತರಗಳೇ ದೊರೆತಿಲ್ಲವೆಂಬ ವಿಷಾದ ಈ ಕೃತಿಯಲ್ಲಿ ಪ್ರಕಟಿತವಾಗಿದೆ. "ಹೊಲೆಯನಾದ ನಿನಗೆ ಸ್ವರ್ಗದ ಸಿಂಹಾಸನ ಬೇಕೆ? ಹುಂಬ ತಪಸಿನ ಬೆಂಕಿಯನೇಕೆ ನುಂಗಿದೆ ಶಂಬೂಕಾ?" ಎಂಬಂತಹ ಪ್ರಶ್ನೆಗೆ ಮುಳ್ಳೂರರ ಶಂಬೂಕ ಹೀಗೆ ಉತ್ತರಿಸುತ್ತಾನೆ :

"ಹುಟ್ಟು ಕೊಟ್ಟ ಕುಲವ ನಾನು ತೊಟ್ಟುಕೊಳ್ಳಲಾರೆ ಪ್ರಭುವೆ
ಕಾಯಕಕ್ಕೆ ಕುಲದ ಮಸಿಯನೇಕೆ ನೀನು ಹಚ್ಚುವೆ?
ತನುವ ಸೀಳಲು ಬಲ್ಲೆ ಮನವ ಸೀಳಲು ಬಲ್ಲೆ ನೀನು
ಜನವ ಸೀಳಲು ಬಲ್ಲೆ ದಿನವ ಸೀಳಲು ಬಲ್ಲೆ ನೀನು
ಕುರೂಪದೊಳಗೊಂದು ಸುರೂಪವಿದೆ ಅದ ನೀನು ಬಲ್ಲೆಯಾ?
ಸುರೂಪದೊಳಗೊಂದು ಕುರೂಪವಿದೆ ಅದ ನೀನು ಬಲ್ಲೆಯಾ?..."–(ಪು. ೧೬೨)

ಮುಳ್ಳೂರರ ಈ ಶಂಬೂಕನಿಗೂ, ವಾಲ್ಮೀಕಿಯ ಶಂಬೂಕನಿಗೂ ವ್ಯತ್ಯಾಸವಿರುವದು ಇಂತಹ ಅನೇಕ ನುಡಿಗಳಲ್ಲಿ ವ್ಯಕ್ತವಾಗಿದೆ. ಶಂಬೂಕನನ್ನು ಕೊಲ್ಲಲು ರಾಮನು ಕೊಡುವ ಕಾರಣಗಳು ಹೀಗಿವೆ :

"ಕಾರಣವಿಲ್ಲದೆ ಕೊಲ್ಲಲಾರೆ ನಾನು ಯಾರನ್ನಾದರೂ
ನಿನ್ನ ತಪಸ್ಸಿನ ಹದ್ದು ಲೋಕ ಮಾರಕ ಮಾರಿ
ಒಂದು ಕೂಸಿನ ಜೀವವ ನುಂಗಿ ನೀರು ಕುಡಿದಿದೆ
ಮುಟ್ಟದೆಯೆ ಕೈಗಳಿಂದ ಕೊಂದ ಜಗದ ಮೊದಲಿಗ ನೀನಯ್ಯ
ನಿನ್ನ ಲೋಕಭೀಕರ ತಪಸಿಗಂಜಿದ ದೇವಾನುದೇವತೆಗಳು
ಹಾವಿನ ರೂಪವನು ತಾಳಿ ಬಂದು ಹಾರುವರ ಕೂಸಿಗೆ
ಅಕಾಲ ಮರಣದುಡುಗೊರೆ ನೀಡಿದರು.." –(ಪು. ೧೬೬)

ರಾಜಾರಾಮ ಕೊಡುವ ಈ ಕಾರಣಗಳಿಗೆ ಅರ್ಥವಿಲ್ಲ. ಇವೆಲ್ಲಾ ಹುರುಳಿಲ್ಲದ ಪ್ರಶ್ನೆಗಳಾಗಿ, ಕರಾಳ ಪ್ರಭುತ್ವದ ಬೇರುಗಳಾಗಿ ಶಂಬೂಕನಿಗೆ ಕಾಣಸುತ್ತವೆ. ಅದನ್ನು ಕವಿ ಸೊಗಸಾಗಿ ನಿರೂಪಿಸಿದ್ದಾರೆ. ಕೊನೆಗೂ ರಾಮ ಶಂಬೂಕನನ್ನು ಕೊಲ್ಲಲು ಸಿದ್ಧನಾದಾಗ ಶಂಬೂಕ ಹೀಗೆ ಹೇಳುತ್ತಾನೆ :

"ಕತ್ತಿ ನಿನ್ನದು ಚಿತ್ತ ನಿನ್ನದಲ್ಲ
ಕಲ್ಲು ನಿನ್ನದು ಕವಣೆ ನಿನ್ನದಲ್ಲ
ಕೊಲ್ಲುವವನು ನೀನಯ್ಯ
ಕೊಲ್ಲಿಸುವರು ಯಾರಯ್ಯ? –(ಪು. ೧೬೬)

ಇಲ್ಲಿ ಕವಿ ಮುಳ್ಳೂರ ಅವರು ಈ ವ್ಯವಸ್ಥೆಯ ಮೂಲ ಶೋಷಣೆಯ ಕೇಂದ್ರವನ್ನು ಶೋಧಿಸಿದ್ದಾರೆ. ಶಂಬೂಕ ದಲಿತ, ರಾಮ ಕ್ಷತ್ರಿಯ ಈ ಎರಡು ವರ್ಣಗಳ ಮೇಲೆ ಮತ್ತೊಂದು ವರ್ಣವಿದೆ. ಆ ವರ್ಣದಲ್ಲಿ ಹುಟ್ಟಿದ ಕೆಲವು ಕುಹಕ ಮನಸ್ಸುಗಳು ಈ ಕೊಲೆಗೆ ಕಾರಣವಾಗಿವೆಯೆಂಬುದನ್ನು ಶಂಬೂಕನ ಮೂಲಕ ಮುಳ್ಳೂರ ಪ್ರಕಟಿಸಿದ್ದಾರೆ.

ಕೃತಿಯ ಕೊನೆಗೆ ಬರುವ "ಗೋಡ್ಸೆಯೂ ಗಾಂಧಿಯೂ ಕೂತು ಮಾತಾಡುತ್ತಾ ಟೀ ಕುಡಿಯುತ್ತಿಹರು ಒಟ್ಟಿಗೆ" ಎಂಬಂತಹ ನುಡಿಗಳು ಈ ಕಾವ್ಯಕ್ಕೆ ಮತ್ತೊಂದು ತಿರುವನ್ನು ಕಟ್ಟಿಕೊಡುತ್ತವೆ. ಹೀಗಾಗಿ 'ನೆಲದ ಜೋಗುಳ' ಪುರಾಣ ಕಾಲದಿಂದ ಆಧುನಿಕ ಕಾಲದವರೆಗೆ ತನ್ನ ಕೈ-ಕಾಲುಗಳನ್ನು ಚಾಚಿಕೊಂಡಿದೆ.

ಈ ಕೃತಿಗೆ ಅನೇಕ ಸಾಧ್ಯತೆಗಳಿರುವಂತೆ ಕೆಲವು ಮಿತಿಗಳೂ ಇವೆ. ಇದು ಉತ್ಸಾಹದ ಕಾವ್ಯವಲ್ಲ, ಹೀಗಾಗಿ ಇಲ್ಲಿ ನವರಸಗಳು ಕೂಡಿಕೊಳ್ಳುವುದಿಲ್ಲ. ಹದಿನೆಂಟು ವರ್ಣನೆಗಳು ಹತ್ತಿರ ಸುಳಿಯುವುದಿಲ್ಲ. ವೈವಿಧ್ಯತೆಯನ್ನು ಬಯಸುವವರಿಗೆ ಇಲ್ಲಿ ನಿರಾಶೆಯಾಗುತ್ತದೆ. ಶಂಬೂಕನ ಕೊಲೆಯ ಒಂದೇ ಪ್ರಸಂಗ ಇಡಿ ಕಾವ್ಯದುದ್ದಕ್ಕೂ ಪುನರಾವರ್ತನೆಯಾಗಿ ಏಕತಾನತೆಯ ಬೇಸರವನ್ನುಂಟುಮಾಡುತ್ತದೆ.

ಸಿದ್ದಲಿಂಗಯ್ಯ ಹಾಗೂ ಇತರ ಬಂಡಾಯ ಕವಿಗಳಂತೆ ಮುಳ್ಳೂರ ಅವರು ಪುರಾಣವನ್ನು ಭಂಜಿಸುವುದಿಲ್ಲ. ವಾಲ್ಮೀಕಿಯ ರಾಮಾಯಣವನ್ನು ಯಥಾವತ್ತಾಗಿ ಒಪ್ಪಿಕೊಂಡು ಬಿಡುತ್ತಾರೆ. ಹೀಗೆ ಒಪ್ಪಿಕೊಂಡ ಮನಸ್ಸು ಶಂಬೂಕನ ಕೊಲೆಯನ್ನು ಕಂಡು ಸಂಕಟಪಡುತ್ತಾ ಹೋಗುತ್ತದೆ. ಅಂತಹ ಸಂಕಟ-ನೋವಿನ ಅನುಭವಗಳು ಪ್ರಕಟಗೊಳ್ಳುತ್ತಾ ಹೋಗುತ್ತವೆ. ಈ ಏಕತಾನತೆಯಲ್ಲಿ ಕಾವ್ಯ ಹೆಚ್ಚಿನದೇನನ್ನೂ ಸಾಧಿಸಲಿಕ್ಕಾಗುವುದಿಲ್ಲ. ಸಿದ್ದಲಿಂಗಯ್ಯ ಪುರಾಣದ ಪರಿಕಲ್ಪನೆಯನ್ನು ಒಪ್ಪಿಕೊಳ್ಳುತ್ತಲೇ ಮೂಲ ಕಥೆಯನ್ನು ಮುರಿದು ಕಟ್ಟುತ್ತಾರೆ. ಆಗ ಅದು ಹೊಸತನದಿಂದ ಹೊಳೆಯತೊಡಗುತ್ತದೆ. ಅವರ ಏಕಲವ್ಯ ನಾಟಕದಲ್ಲಿ ಆಗುವುದು ಇದೇ ವ್ಯತ್ಯಾಸ. ಕುವೆಂಪು ಅವರ ಏಕಲವ್ಯ ಕರ್ಮಸಿದ್ಧಾಂತವನ್ನು ಒಪ್ಪಿಕೊಂಡಂತೆ, ಮುಳ್ಳೂರರ ಶಂಬೂಕ ರಾಮನ ಕೊಲೆಯನ್ನು ಒಪ್ಪಿಕೊಂಡಂತೆ, ಸಿದ್ದಲಿಂಗಯ್ಯನವರ ಏಕಲವ್ಯ ಸಾಂಪ್ರದಾಯಿಕ ಕಥೆಯನ್ನು ಒಪ್ಪಲಾರ. ಆತ ಆಧುನಿಕ ವಿದ್ಯಾರ್ಥಿಯಂತೆ ಪ್ರತಿಭಟಿಸುತ್ತಾನೆ. ಪುರಾಣಭಂಜಕನಾದ ಈ ಏಕಲವ್ಯ ಹೊಸ ಪರಂಪರೆಯೊಂದನ್ನು ಕಟ್ಟಿ ನಿಲ್ಲಿಸುತ್ತಾನೆ. ಆದರೆ ಕುವೆಂಪು ಅವರಲ್ಲಿ ಮುಳ್ಳೂರ ಅವರಲ್ಲಿ ಇಂತಹ ಆಮೂಲಾಗ್ರ ಬದಲಾವಣೆಗಳು ಕಾಣಸಿಕೊಳ್ಳುವುದಿಲ್ಲ. ಆದರೆ ಕಾವ್ಯಶಕ್ತಿಯಲ್ಲಿ ಮುಳ್ಳೂರ ಅವರು ಇವರೆಲ್ಲರಿಗಿಂತಲೂ ಮುಂದಿದ್ದಾರೆ. ಮತ್ತು ಘೋಷಿಸಿದಂತೆ ಕಾಣುವ ಮುಳ್ಳೂರರ ಕಾವ್ಯದಲ್ಲಿ ಪುಟಿದೇಳುವ ತಲ್ಲಣಗಳು ಭಯಾನಕವಾಗಿವೆ. ಈ ಕಾರಣದಿಂದ ಈ ಕೃತಿ ವಿಶಿಷ್ಟವಾಗಿ ಕಾಣಿಸುತ್ತದೆ.

ಈ ಕಾವ್ಯದಲ್ಲಿ ಬರುವ ಹಕ್ಕಿಗಳು ಕೋಗಿಲೆಗಳು ಗಾಢ ಪರಿಣಾಮವನ್ನುಂಟು ಮಾಡುತ್ತವೆ. ಮುಳ್ಳೂರರ ಕೋಗಿಲೆ ಜೀವಲೋಕದ ಚೆಲುವೆಯಾಗಿದ್ದಾಳೆ. ಹಕ್ಕಿಲೋಕ ಹಾಡುಗಳ ಕಣಜವನ್ನೇ ಹೊತ್ತು ನಿಂತಿದೆ. ಕೃತಿಯುದ್ದಕ್ಕೂ ಕಟ್ಟಿ ನಿಲ್ಲಿಸಿದ ಪ್ರತಿಮೆಗಳು-ಪ್ರತೀಕಗಳು ಕುತೂಹಲಕಾರಿಯಾಗಿವೆ.

ತೆಲುಗಿನ ವಿಪ್ಲವ ಕವಿ ಸಿ. ವರವಲರಾವು ಅವರ 'ನರಬಲಿ' ಕಾವ್ಯ ಹಿಂದೆ 'ಸಂಕ್ರಮಣ'ದಲ್ಲಿ ಪ್ರಕಟವಾಗಿತ್ತು. ಅದನ್ನಾಧರಿಸಿ ಜಾನಪದ ಶೈಲಿಯ ನನ್ನ 'ನರಬಲಿ' ನಾಟಕ ೧೯೮೨ ರಲ್ಲಿ ಪ್ರಕಟವಾಗಿದೆ. ಈ ಕೃತಿಯಲ್ಲಿಯೂ ಕೂಡ ಅಂಗರಾಜ ವೇನ ಹಾಗೂ ಆರ್ಯಋಷಿ ಗೌತಮ ಇವರಿಬ್ಬರ ನಡುವೆ ಸಂಘರ್ಷ ನಡೆಯುತ್ತದೆ. ಅಲ್ಲೆಲ್ಲಾ ಶಂಬೂಕನ ಕತೆ, ಚಾತುರ್ವರ್ಣ್ಯದ ಭೀಕರತೆ, ವೈದಿಕ ಮುನಿಗಳ ಕುತಂತ್ರ, ಚಾರ್ವಾಕನಾದ ವೇನನ ಕೊಲೆ ಇವೆಲ್ಲಾ ಇವೆ. 'ನರಬಲಿ'ಯಲ್ಲಿ ವೈದಿಕ-ಕ್ಷತ್ರಿಯ ಸಂಘರ್ಷ ಮುಖ್ಯವಾಗಿದ್ದರೆ, 'ನೆಲದ ಜೋಗುಳ'ದಲ್ಲಿ, ಕ್ಷತ್ರಿಯ-ದಲಿತ ಸಂಘರ್ಷ ತೀವ್ರವಾಗಿದೆ. ಈ ಚಾತುರ್ವರ್ಣ್ಯ ಪದ್ಧತಿಯಲ್ಲಿ ಮೇಲಿನ ವರ್ಣಗಳೆಲ್ಲಾ ತಮ್ಮ ಕೆಳಗಿನ ವರ್ಣಗಳನ್ನು ಶೋಷಿಸುತ್ತಲೇ ಬಂದಿವೆ. ಬ್ರಾಹ್ಮಣ-ಕ್ಷತ್ರಿಯ ಸಂಘರ್ಷ, ಕ್ಷತ್ರಿಯ-ಶೂದ್ರ ಸಂಘರ್ಷಗಳಿಗಿಂತ ಪಂಚಮರ ಮೇಲೆ-ದಲಿತರ ಮೇಲೆ, ಎಲ್ಲ ಮೇಲಿನ ವರ್ಣಗಳು ಮಾಡಿರುವ ಶೋಷಣೆ ಭಯಾನಕವಾಗಿದೆ. ಇಂತಹ ಪ್ರಸಂಗಗಳನ್ನು ಸಾಮಾಜಿಕ-ಆರ್ಥಿಕ ನೆಲೆಯಲ್ಲಿ ಅರ್ಥೈಸಿ ಹೊಸ ವರ್ತಮಾನವನ್ನು ಕಟ್ಟಿಕೊಳ್ಳುವುದು ಅನಿವಾರ್ಯವಾಗಿದೆ.

ಆದರೆ ಹೀಗೆ ಪುರಾಣಕಾವ್ಯಗಳನ್ನು ನಂಬಿ ವರ್ಣ-ವರ್ಣಗಳಲ್ಲಿ, ಜಾತಿ-ಜನಾಂಗಗಳಲ್ಲಿ, ಸಮುದಾಯ-ಸಮುದಾಯಗಳಲ್ಲಿ ಒಡಕನ್ನು ಹುಟ್ಟುಹಾಕಿ ದ್ವೇಷದ ವಾತಾವರಣವನ್ನು ನಿರ್ಮಿಸುವುದು ಹೇಗೆ ಸೂಕ್ತ? ಈ ಪ್ರಶ್ನೆಯನ್ನು ಇಂದು ಗಂಭೀರವಾಗಿ ಚರ್ಚಿಸಬೇಕಾಗಿದೆ.

ವಾಲ್ಮೀಕಿ ರಾಮನನ್ನು ನಾಯಕನನ್ನಾಗಿ ಮಾಡಿಕೊಂಡು, ರಾವಣನನ್ನು ಖಳನಾಯಕನನ್ನಾಗಿ ರೂಪಿಸಿ ಕಾವ್ಯ ಬರೆದ. ಶಂಬೂಕನ ಕೊಲೆಯನ್ನು ರಾಮನಿಂದ ಮಾಡಿಸಿದ. ಜಾನಪದ ರಾಮಾಯಣದಲ್ಲಿ ರಾವಣ ನಾಯಕ, ರಾಮ ಖಳನಾಯಕ. ಕುವೆಂಪು ರಾಮಾಯಣದರ್ಶನದಲ್ಲಿ ರಾವಣ ಖಳನಾಯಕನಲ್ಲ. ಹೀಗೆ ರಾಮಾಯಣವೆಂಬುದು ಒಂದೇ ರೀತಿಯಾಗಿಲ್ಲ. ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ಉದ್ದೇಶಗಳನ್ನಿಟ್ಟುಕೊಂಡು ಅದು ಬೆಳೆದು ಬಂದಿದೆ.

ಮುಳ್ಳೂರರವರು ತಮ್ಮ 'ನೆಲದ ಜೋಗುಳ' ಕೃತಿಯಲ್ಲಿ ಮೂಲ ರಾಮಾಯಣದ ಕಥೆಯನ್ನೇ ಸ್ವೀಕರಿಸಿದ್ದಾರೆ. ಅದನ್ನವರು ಪ್ರಾರಂಭದ ಪುಟಗಳಲ್ಲಿ ಹೀಗೆ ಹೇಳಿದ್ದಾರೆ : "ನೆಲದ ಜೋಗುಳದ ರಾಮನು ಸರ್ವಾಧಿಕಾರಿಯ ಪ್ರತೀಕ. ಸರ್ವಾಧಿಕಾರಿಯಾದರೂ ಅವನು ಬ್ರಾಹ್ಮಣರ ಕೈಗೊಂಬೆ. ರಾಮ ಮತ್ತು ರಾಮರಾಜ್ಯಗಳು ಕೂಡಾ ಜನವಿರೋಧಿಗಳು, ಜಾತಿ ಕುಲಗಳ ಕೂಪಮಂಡೂಕಗಳು. ರಾಮರಾಜ್ಯದ ಪರಿಕಲ್ಪನೆಯೇ ಒಂದು ಹುಸಿ ಆದರ್ಶವೆಂದೂ, ಜನವಂಚಕ ರಾಜಕೀಯ ಸ್ಥಿತಿಯೆಂದೂ ನನ್ನ ಕಾವ್ಯ ಮಂಡಿಸುತ್ತದೆ." (ಪುಟ ii)

ಮುಳ್ಳೂರ ಅವರು ತಾಳಿರುವ ಈ ನಿಲುವುಗಳ ಬಗೆಗೆ ಯಾರ ಅಭ್ಯಂತರವೂ ಇಲ್ಲ. ಈ ಚರಿತ್ರೆ-ಪುರಾಣ ಇಲ್ಲಿಯ ಸಾಮಾಜಿಕ-ರಾಜಕೀಯ ವ್ಯವಸ್ಥೆಗಳು ದಲಿತರನ್ನು ಶತಮಾನಗಳಿಂದ ಶೋಷಣೆ ಮಾಡಿರುವುದರಿಂದ ಇವನ್ನೆಲ್ಲ ಧಿಕ್ಕರಿಸಬೇಕೆಂದು ದಲಿತರು ಭಾವಿಸುವುದು ಸಹಜ. ಆದರೆ ಇಂತಹ ಧಿಕ್ಕಾರ-ತಿರಸ್ಕಾರಗಳಿಂದ ಇಲ್ಲಿ ಸಮಾನತೆ ತರಲು ಸಾಧ್ಯವೆ? ಒಡೆದ ಮನಸ್ಸುಗಳನ್ನು ಒಂದುಗೂಡಿಸಲು ಸಾಧ್ಯವೆ? ಇಂತಹ ಪ್ರಶ್ನೆಗಳತ್ತಲೂ ಇಂದು ಗಮನ ಹರಿಸಬೇಕಾಗಿದೆ. ವೈದಿಕರನ್ನಾಗಲಿ-ಕ್ಷತ್ರಿಯರನ್ನಾಗಲಿ ಅಪರಾಧಿಯ ಕಟಕಟೆಯಲ್ಲಿ ನಿಲ್ಲಿಸಿ ಅವರನ್ನು ತೆಗಳುವುದರಿಂದ, ಅವರ ದುಷ್ಕೃತ್ಯಗಳನ್ನು ವರ್ಣಿಸಿ ಹೇಳುವುದರಿಂದ ಸಮಸ್ಯೆ ಪರಿಹಾರವಾಗುತ್ತದೆಯೆ? ದಲಿತ ಸಂಸ್ಕೃತಿಯ ಜೀವಸೆಲೆಗಳ ಮೂಲಕ ಪರ್ಯಾಯ ಸಂಸ್ಕೃತಿಯನ್ನು ಕಟ್ಟಿ ನಿಲ್ಲಿಸುವುದು ಹೆಚ್ಚು ಸೂಕ್ತವೆನಿಸುವುದಿಲ್ಲವೆ? ಜನಾಂಗವಾದಿ ಬಿಳಿಯರ ಸಂಸ್ಕೃತಿಯನ್ನು ಕಪ್ಪು ಲೇಖಕರು ಎದುರಿಸಿದ್ದು ಹೀಗೆಯೇ ಅಲ್ಲವೆ?

ನಮ್ಮ ಜಾನಪದ ಲೋಕದ ಕಡೆ ಕಣ್ಣು ಹಾಯಿಸಿದರೆ ಇದಕ್ಕೆ ಪರಿಹಾರ ದೊರೆಯಬಹುದೆನಿಸುತ್ತದೆ. ಮಲೆಮಾದೇಶ್ವರ-ಮಂಟೇಸ್ವಾಮಿಯಂತಹ ದಲಿತ ಮಹಾಕಾವ್ಯಗಳತ್ತ ಗಮನ ಹರಿಸಿದರೆ ಈ ಮಾತು ಇನ್ನೂ ಸ್ಪಷ್ಟವಾಗುತ್ತದೆ. ಈ ಎರಡೂ ಮಹಾಕಾವ್ಯಗಳು ಇಂದು ಜನಸಮುದಾಯದ ಮೇಲೆ ಮಾಡಿರುವ ಪರಿಣಾಮಗಳು ತುಂಬಾ ತೀವ್ರತರವಾದವುಗಳಾಗಿವೆ.

ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಮಹಾಕಾವ್ಯಗಳಲ್ಲಿ ದಲಿತ ಪುರಾಣ ಪರಂಪರೆ ಪ್ರಾರಂಭವಾಗಿ ಅಲ್ಲಿ ಆ ಜನಸಮುದಾಯದ ಜಾನಪದ ಲೋಕವೇ ಬಿಚ್ಚಿಕೊಳ್ಳುತ್ತದೆ. ಅಲ್ಲಿ ಬರುವ ಪವಾಡ ಕತೆಗಳು, ವರ್ಣನೆಗಳು ಅದ್ಭುತವಾಗಿವೆ. ಈ ರೀತಿಯ ಮಾದರಿಗಳನ್ನು ಇಂದಿನ ದಲಿತ ಕವಿಗಳು ಯಥಾವತ್ತಾಗಿ ಸ್ವೀಕರಿಸುವಂತಿಲ್ಲ. ಇನ್ನೊಬ್ಬ ದಲಿತ ಕವಿ ಕೆ. ಬಿ. ಸಿದ್ಧಯ್ಯನವರ 'ಬಕಾಲ' ಹಾಗೂ 'ಡಕ್ಲಮಹಾಕಾವ್ಯ'ದಲ್ಲಿ ಜಾನಪದ ಲೋಕದ ಅನಾವರಣವಿದೆ. ಆದರೆ ಅಮೂರ್ತತೆಯ ಸಮಸ್ಯೆಯಿಂದಾಗಿ 'ಬಕಾಲ' ಓದುಗರನ್ನು ಅಷ್ಟಾಗಿ ತಟ್ಟಲಿಲ್ಲ. ಆದರೆ ಸಿದ್ಧಯ್ಯನವರು ಅಂತಹ ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ.

'ನೆಲದ ಜೋಗುಳ' ಜನಪರವಾದ ಆಶಯಗಳನ್ನೊಳಗೊಂಡ ವೇದನೆಯ ಕಾವ್ಯವಾಗಿದೆ. ಹೀಗಾಗಿ ಇಲ್ಲಿ ಜನಪದರ ಪವಾಡಗಳಿಗೆ ಅವಕಾಶವಿಲ್ಲ. ಭಾವಗೀತಾತ್ಮಕತೆಯ ಶೈಲಿ ಹೃದ್ಯವೆನಿಸುತ್ತದೆ. ಆದರೆ ಕೆಲವು ಕಡೆ ಕಾವ್ಯ ಶಿಥಿಲಗೊಂಡು ವಾಚಾಳಿಯಾದದ್ದೂ ಇದೆ. ಭಾಷೆಯ ದೃಷ್ಟಿಯಿಂದ ಈ ಕವಿ ಗ್ರಾಂಥಿಕ ಶೈಲಿಯಲ್ಲಿಯೇ ಬರೆದಿದ್ದಾರೆ. ಈ ಶತಮಾನದಲ್ಲಿ ಬಂದ ಇತರ ಮಹಾಕಾವ್ಯಗಳಿಗೆ ಹೋಲಿಸಿದರೆ 'ನೆಲದ ಜೋಗುಳ' ತುಂಬಾ ಕಾವ್ಯಾತ್ಮಕವಾಗಿದೆ. ಮನುಷ್ಯನ ಅಂತಃಕರಣ, ಪ್ರೀತಿ, ಸಮಾನತೆಯಂತಹ ಮೌಲ್ಯಗಳನ್ನು ಎತ್ತಿಹಿಡಿದ ಕೃತಿಯಾಗಿದೆ.

ಇಂದು ಕಾವ್ಯ ರಚಿಸುವವರಿಗೆ ಪುರಾಣ ಮಹಾಕಾವ್ಯಗಳಾದ 'ರಾಮಾಯಣ'-'ಮಹಾಭಾರತ' ಕೃತಿಗಳೇ ಏಕೆ ಮುಖ್ಯವಾಗಬೇಕು? ಕವಿಗಳನ್ನು ಕಾಡಿದ ರಾಮ ರಾಜಕೀಯ ಮುಖಂಡರನ್ನೂ ಬಿಟ್ಟಿಲ್ಲ. ಇಂದು ನಮ್ಮ ಮಕ್ಕಳು ಹುಟ್ಟಿದ ಸ್ಥಳಗಳೇ ನಮಗೆ ಮರೆತು

ಹೋಗಿರುವಾಗ, ಸಾವಿರಾರು ವರ್ಷಗಳ ಹಿಂದೆ ವಾಲ್ಮೀಕಿಯ ಕಾವ್ಯದಲ್ಲಿ ಹುಟ್ಟಿದ ರಾಮ, ಇಲ್ಲಿಯೇ ಹುಟ್ಟಿದನೆಂದು ಬೆರಳಿಟ್ಟು ತೋರಿಸಿ ಸಾವಿರಾರು ಜನರ ಸಾವಿಗೆ ಕಾರಣವಾಗಿರುವ ಅಯೋಧ್ಯಾ ಜನ್ಮಭೂಮಿಯ ವಿವಾದ ಯಾರ ಹಿತಕ್ಕಾಗಿ? ಹೀಗೆ ಪುರಾಣದ ಕಾಲ್ಪನಿಕ ವ್ಯಕ್ತಿಗಳೊಂದಿಗೆ ಗುದ್ದಾಡುವದಕ್ಕಿಂತ, ನಮ್ಮ ಚರಿತ್ರೆಯ ನಾಯಕರಾದ ಬುದ್ಧ-ಬಸವ-ಅಂಬೇಡ್ಕರ್-ಗಾಂಧಿಯಂಥವರ ಬಗೆಗೆ ಕಾವ್ಯ ರಚಿಸುವುದು ಸೂಕ್ತವಲ್ಲವೆ? ನಮ್ಮ ನಾಡಿನ ಸಾಂಸ್ಕೃತಿಕ ವೀರರನ್ನು ಕುರಿತು ಏಕೆ ಬರೆಯಬಾರದು? 'ನೆಲದ ಜೋಗುಳ'ದ ಮೂಲಕ ಇಂತಹ ಪ್ರಶ್ನೆಗಳನ್ನು ನಾವೆಲ್ಲಾ ಕೂಡಿಯೇ ಎದುರಿಸಬೇಕಾಗಿದೆ.

● ●

ಡಾ. ಬಸವರಾಜ ಸಬರದ : ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ-೫

ನಾಲ್ಕು ಶಬ್ದಬಿಂಬಗಳು

ಕಿರಣ

೧. ಕುವೆಂಪು

ಕಾಡಿನ ಕೊಳಲಿದು ಕಾಡ ಕವಿಯು ನಾ
ನಾಡಿನ ಜನರೊಲಿದಾಲಿಪುದು. –**ಕುವೆಂಪು**

ಹಾರಿದ್ದು ಬೆಳ್ಳಕ್ಕಿಯ ಸಾಲು ಶುಭ್ರ ನೀಲಗಗನದಲ್ಲಿ:
ಮೂಡಿದ್ದು ದೇವರ ರುಜು ಕವಿಯ ಚಿತ್ತಭಿತ್ತಿಯಲ್ಲಿ!
ಸಾಕ್ಷಿಗೆ ಗಿಡಮರಗಳು ಹೂಹಣ್ಣು ಗಿರಿ ಝರಿ ಕಿರು ತೊರೆಗಳು
ಗಿಳಿ ಗೊರವಂಕ ಕೋಗಿಲೆ ತೇನೆ ಕಾಜಾಣದ ಕೊಳಲು.
ಹೊಟ್ಟೆಯ ಬೆಂಕಿಗೆ ಕಂಬನಿ ಸುರಿಸಿ, ಸ್ವಾಭಿಮಾನದ ಡಿಂಡಿಮ ಬಾರಿಸಿ,
ಕನ್ನಡ ಧ್ವಜವನ್ನೇರಿಸಿ ಹಾರಿಸಿ, ಕೀರ್ತಿಗೆ ಕೈಮುಗಿಯದ ಧೀರ;
ರಾಮಾಯಣದುದ್ಧಕ್ಕೂ ಪಾಪಿಯುದ್ಧಾರಕ್ಕೆ ಮುಕ್ತದ್ವಾರ.
ಕಂದಾಚಾರದ ದಂಡು ಕಂಗೆಡುವಂತೆ ಉದಾತ್ತ ದಿಟ್ಟ ನಡಿಗೆ;
ವಿಶ್ವೋತ್ತಮರ ನೆನೆಯುತ್ತ ವಿಶ್ವಪಥದ ಕಡೆಗೆ.
ಸುಟ್ಟರೆ ಬೆಳೆವ ಬಿಟ್ಟರೆ ಸುಡುವ ಮೌಢ್ಯದೊಡನೆ ಮುಖಾಮುಖಿ;
ಹರ್ಷಕ್ಕೆ, ಸಂಘರ್ಷಕ್ಕೆ ತೆರೆದ ಹಾದಿ;
ಸರ್ವೋದಯದ ಸರ್ವೋನ್ನತಿಯ ಸಮಪಾಲಿನ ಬಯಕೆ;
ಅಲಕ್ಷಿತ ಶ್ರೀಸಾಮಾನ್ಯನಿಗೆ ಸ್ವಾಭಿಮಾನದ ದೀಕ್ಷೆ;
ಪಂಪಕವಿಗೆ ಸಚಿವ ಪದವಿ; ಮನುಜಮತದಪೇಕ್ಷೆ.

೨. ಅಂಬಿಕಾತನಯದತ್ತ

ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ
–ಅಂಬಿಕಾತನಯದತ್ತ

ಹೊತ್ತ ಭೂಮಿಗೆ ಹೆತ್ತ ತಾಯಿಗೆ
ವಿಶ್ವಮಾತೆಗೆ ನಮಿಸಿದ,
ಭರತಮಾತೆಯ ದಾಸ್ಯಮುಕ್ತಿಗೆ
ಕಾವ್ಯಕಿಡಿಗಳ ಸಿಡಿಸಿದ,

ತಾಯಿ ಕನ್ನಡ ನಾಡ ಗುಡಿಯಲಿ
ಕಾವ್ಯದಾರತಿ ಬೆಳಗಿದ;
ಪಂಚಮಾತೆಯರೇಕ ಪುತ್ರನು
ಅಂಬಿಕಾತನಯದತ್ತನು.
ಬರಲಿ ಶ್ರಾವಣ; ಮರಣಕ್ಕಂಜದ
ನಿಜದ ಒಲವಿನುದಾತ್ತನು.
ಕೂಡಿ ದುಡಿದು ಒಡಗೂಡಿ ಅರಿತು
ಕೂಡಿ ಕಳೆಯುವುದೆಂದನು.
ಆ ಅದೂ ತುಂಬಿ ಈ ಇದೂ ತುಂಬಿ
ತುಂಬಿ ತುಂಬಿ ಬರಲೆಂದನು.

೩. ಗೋಪಾಲಕೃಷ್ಣ ಅಡಿಗ

ಕಲಿಸು ಬಾಗದೆ ಸೆಟೆವುದನ್ನು, ಬಾಗುವುದನ್ನು.
—ಗೋಪಾಲಕೃಷ್ಣ ಅಡಿಗ

ಕಣ್ಣು ತೆರೆಸಿದ ಕವಿ ಕಣ್ಮರೆಯಾದರು, ಕಣ್ಣೊರೆಸಿಕೊಂಡೆವು;
ಬಾಗುವುದನ್ನು, ಬಾಗದೆ ಸೆಟೆಯುವುದನ್ನು ಬಯಸಿದ ಕವಿಗೆ
ಬಾಗಿದೆವು; ಮರೆತುಬಿಡಬಹುದಿನ್ನು!

ಮರೆಯಬಾರದು ಶ್ರೇಷ್ಠತ್ವದ ಪೋಷಕನನ್ನು;
ಪ್ರವಾಹದೆದುರು ಈಜು; ನಿಜದೊಡನೆ ಜೂಜು
ಆಡುತ್ತಾಡುತ್ತ ಸೋತು ಗೆದ್ದವನನ್ನು
ನೆನಪಿಡಬೇಕು ಮುಲಾಜು ಬಿಟ್ಟೊರೆವ, ಕಷ್ಟಗಳ ಕರೆವ ಸಾಹಸಿಯನ್ನು;
ಸಾವಯವ ಕಾವ್ಯಶಿಲ್ಪದ ಶಿಲ್ಪಿಯನ್ನು.

ಪರಾಕು ಮೆಚ್ಚದ ಧೀರ; ವ್ಯವಸ್ಥೆಯಲಿ ಪರಕೀಯ;
ಭ್ರಷ್ಟರ ಬದುಕಿನ ಸಂತಸವಲ್ಲಿ ಬೆರೆಯಲೊಪ್ಪದ ಭಿನ್ನ;
ಮಾಡಲಾಗದ ರಾಜಿ: ಹಿತ್ತಾಳೆಯಾಗದು ಚಿನ್ನ!

ಹೊಟ್ಟು ಕುಟ್ಟುವ ಕಾಯಕಕ್ಕೆ ನಿತ್ಯ ತಿರಸ್ಕಾರ;
ಸ್ವಂತ ಬಲ, ಸ್ವಂತ ದನಿ, ಸ್ವಂತಿಕೆಯ ಹರಿಕಾರ
ಮರೆಯದಿರೋಣ ನಮ್ಮ ಕವಿಗಳ ಕವಿಯನ್ನು.

೪. ಶಿವರಾಮ ಕಾರಂತ

ಕಲಾವಿದ ನಿಸರ್ಗದಿಂದ ಕಲಿಯಬೇಕು; ಪುಸ್ತಕಗಳಿಂದಲ್ಲ.
—ಶಿವರಾಮ ಕಾರಂತ

ಹುಟ್ಟೂರ ಬಿಟ್ಟು ಹತ್ತೂರು ಅಲೆದು ಸೇರಿದ್ದು ಪುತ್ತೂರು.
ಕಂಡುಂಡ ಸುಖ ದುಃಖ ಚಿಂತನ ನೆನಪು ಪಡೆದದ್ದು ನುಡಿರೂಪು.
ಆನೆ ನಡೆದದ್ದೆ ದಾರಿ— ಮೊಲ ಜಿಂಕೆ ನರಿಗಳಿಗೆ ಸಲೀಸು ಸವಾರಿ—
ಅಳಿದ ಮೇಲೆ ಉಳಿದದ್ದು ಕಾರಂತ-ಛಾಪು.

ನುಡಿಯಲ್ಲಿ ಮಿಡಿದದ್ದು ಚೋಮನ ದುಡಿ.
ಮಡಿವವರ ಮಡಿಯ ಪಸಿ ಜನಪನಿಯಾಗಿ ಮತ್ತೆ ಪಾರ್ವನಿಯಾಗಿ,
ಜೀತ ಸೋತು, ಅಲ್ಲಲ್ಲಿ ಇಲ್ಲಯ್ಯ ಉಳ್ಳಯ್ಯನಾದ.
ಕಾಲದ ಸೀಲು ಸಮೇತ ರುಜು ಪಡೆಯಿತು ವಾಸ್ತವವಾದ.
ಮುಚ್ಚುಮರೆಯಿಲ್ಲ, ಬಿಚ್ಚುನುಡಿ ಬದುಕುಬರಹಗಳಲ್ಲಿ;
ನಿಜವನರಸುವ ದೃಷ್ಟಿ, ಅನುಭವವೆ ಒಡಹುಟ್ಟು,
ಕಂಡಲ್ಲದೆ ನಂಬದಿರುವ ದಿಟ್ಟ ಧೋರಣೆ ಜೊತೆಗೆ
ರಕ್ಕುತನಕ್ಕೆ ಥಿಕ್ಕಾಥಿಕ್ಕಿ ಹೊಡೆವ ಸಾತ್ವಿಕ ಸಿಟ್ಟು!
ಚಿಂತನದ ಮುದ್ರಣ, ಗಾನ, ವಿಜ್ಞಾನ, ಚಿತ್ರ, ನೃತ್ಯ- ಚಿತ್ತ ಇಳಿಯದಾಳವೆಲ್ಲಿ?
ಸಲಾಂ ಹೊಡೆಯುತ್ತಿದೆ ಶತಮಾನ: ಇಂಥವನು ಇನ್ನೊಬ್ಬನೆಲ್ಲಿ?

● ●

ಕುತ್ಯಾಳ ನಾಗಪ್ಪಗೌಡ (ಕಿರಣ) : ಕಿರಣ ಕುಟೀರ, ಸುಳ್ಯ(ದ.ಕ.)೫೭೪ ೨೩೯

ಗೀತೆಯು ಸಮಾಜಶಾಸ್ತ್ರ : ಶ್ರೀರಂಗ

ರಾ. ಕ. ನಾಯಕ

'ಚಾತುರ್ವರ್ಣ್ಯ' ಎಂಬ ಶಬ್ದ ಇಂದು ಎಷ್ಟು ಅವನತಿ ಪಡೆದಿದೆ ಎಂದರೆ ಅದರ ಬಗ್ಗೆ ಮಾತಾಡಲು ಯಾರೂ ಧೈರ್ಯ ಮಾಡಲಾರರು. ಈ 'ಚಾತುರ್ವರ್ಣ್ಯ'ವನ್ನು ತಾನೇ ಸೃಷ್ಟಿಸಿವೆನೆಂದು ಗೀತಾಚಾರ್ಯ 'ಕಬೂಲೀ ಜವಾಬ' 'ಕನ್ಫೇಶನ್' ಕೊಡುತ್ತಾನೆ. ಮತ್ತು ಇಂಥ ಗೀತೆಯ ಬಗ್ಗೆ ಶ್ರೀರಂಗರು ಎರಡು ಪುಸ್ತಕಗಳನ್ನು ಬರೆದು ಅದರಲ್ಲಿ 'ಮಧ್ಯಯುಗದಲ್ಲಿ ಅನೇಕ ದೇಶಗಳಲ್ಲಿ ಇದ್ದದ್ದು ಒಂದಿಲ್ಲೊಂದು ಬಗೆಯ ಚಾತುರ್ವರ್ಣ್ಯ ಪದ್ಧತಿಯೆ' ಎಂದು ಬರೆದಿರುವುದರಿಂದ ಅವರು ಇದನ್ನು 'ಡಿಫೆಂಡ್' ಮಾಡುತ್ತಾರೆ ಎಂದು ಅರ್ಥ ತೆಗೆದು ಶ್ರೀರಂಗರ ಪುರೋಗಾಮಿತ್ವವೆಲ್ಲ ಡೋಂಗಿ, ಅವರು ಅಂತರಂಗದಲ್ಲಿ ಪ್ರತಿಗಾಮಿ ವಿಚಾರಗಳನ್ನು ಇರಿಸಿಕೊಂಡಿರುವ 'ಛುಪಾರುಸ್ತುಂ' ಆಗಿದ್ದಾರೆ ಎಂದು ತೀರ್ಮಾನಿಸಬಹುದಾಗಿದೆ.

'ಚಾತುರ್ವರ್ಣ್ಯಂ ಮಯಾ ಸೃಷ್ಟಂ' ಎಂದು ಧೈರ್ಯವಾಗಿ ಕೃಷ್ಣ ಹೇಳತೊಡಗಿದ್ದ ಕಾಲವು ಬಹಳ ಹಿಂದಿನದು. ಆಗೆಲ್ಲ 'ವರ್ಣ'ಗಳದೇ ಸಾಮ್ರಾಜ್ಯ. ವರ್ಣವೆಂದರೆ ಹಕ್ಕುಬಾಧ್ಯತೆ, ಮೇಲು-ಕೀಳು, ಉಚ್ಚ-ನೀಚತೆಯನ್ನು ಒಪ್ಪಿಕೊಂಡ ಸಮಾಜ ವ್ಯವಸ್ಥೆ. ಅಂಥ ಸಮಾಜ ವ್ಯವಸ್ಥೆಯಲ್ಲಿ ಸಮಾನತೆಯ ಚಿಂತನೆಯೂ ಹಾಸ್ಯಾಸ್ಪದ. ಬೇಡಿಕೆಯಂತೂ ಪರಮಾಪರಾಧ. ಬಂಡಾಯವಂತೂ ಕಲ್ಪನೆಗೂ ನಿಲುಕದ ಅಸಂಭಾವ್ಯತೆ. ಇಂಥದನ್ನು ಶ್ರೀರಂಗರು ಸಮಾಜಶಾಸ್ತ್ರವೆಂದು ಹೇಳಿದ್ದರೆ ಅದು ಪ್ರಾಚೀನ ಕಾಲದ ಅವಿಕಸಿತ ಸಮಾಜದ ಸಮಾಜಶಾಸ್ತ್ರವೆಂದು ಅವರು ಹೇಳಿರಬೇಕು.

ಶ್ರೀರಂಗರೇ ಒಂದು ಕಡೆ 'ಯಾವದೋ ಕಾಲ್ಪನಿಕ ಕಥೆಯ, ಯಾವದೋ ಒಂದು ಘಟನೆಗೆ ಇಷ್ಟೊಂದು ಮಹತ್ವ ಕೊಟ್ಟು ಬರೆಯುವ ಶ್ರಮ ವಹಿಸುವದು ಯೋಗ್ಯವೆ ಎಂದು ಯಾರಾದರೂ ಪ್ರಶ್ನಿಸಬಹುದು.' ಎಂದು ಬರೆದಿದ್ದಾರೆ. ಆದರೆ ತಾನು ಕೆಲಸ ಯಾಕೆ

ಕೈಕೊಂಡೆನೆಂಬುದಕ್ಕೆ ಈ ರೀತಿ ಕಾರಣ ಕೊಟ್ಟಿರುವರು. ಮುಂದುವರಿದ ಪಾಶ್ಚಾತ್ಯ ದೇಶಗಳ ವಿದ್ವಾಂಸರೂ ಈ ಪುಟ್ಟ ಗ್ರಂಥವು ತುಂಬ ಮೌಲಿಕವೆಂದು ಹೇಳುತ್ತಿರುವದರಿಂದ ಈ ಕುರಿತು ಯೋಚಿಸಬೇಕಾಗಿದೆ. ಇದು ಅಷ್ಟೊಂದು ಕ್ಷುಲ್ಲಕವಿರಲಾರದು ಎಂದು ತನ್ನ ಮನಸ್ಸನ್ನು ಇದರತ್ತ ಸಕಾರಾತ್ಮಕವಾಗುವಂತೆ ತಿರುಗಿಸಿಕೊಂಡುದಾಗಿ ಸ್ಪಷ್ಟೀಕರಣ ನೀಡಿದ್ದಾರೆ.

ಅದು ಹಾಗಿರಲಿ. ಈ ಗೀತೆ ಒಳಗೊಂಡಿರುವದಾದರೂ ಏನು? ಅರ್ಜುನ ಯುದ್ಧ ಮಾಡುವದಿಲ್ಲವೆಂದ. ಕೃಷ್ಣ ಮಾಡೆಂದ. ಕೊನೆಗೆ ಅರ್ಜುನ ಯುದ್ಧಕ್ಕೆ ಒಪ್ಪಿಕೊಂಡ. ಯುದ್ಧ ನಿರಾತಂಕವಾಗಿ ಮುಂದುವರಿಯಿತು. ಅಂದರೆ ಯುದ್ಧ ಸುರುವಾಗುವ ಮೊದಲು ಅರ್ಜುನನ ಮನಸ್ಸಿನಲ್ಲಿ ಸ್ವಲ್ಪ ಸಂದೇಹ ಮೂಡಿದ್ದು, ಅದಕ್ಕೆ ಕೃಷ್ಣ ಬುದ್ಧಿವಾದ ಹೇಳಿದ. ಸಂದೇಹ ಪರಿಹಾರವಾಯ್ತು ಅನ್ನೋಣ. ಆದರೆ ಅಷ್ಟಕ್ಕೇ ಈ ಅರ್ಜುನನ ಸಂದೇಹಕ್ಕೂ ಕೃಷ್ಣನ ಬುದ್ಧಿವಾದಕ್ಕೂ ಇಷ್ಟು ಮಹತ್ವವೇಕೆ? ಇದೇನಾದರೂ ಪಕ್ಷಪಾತದ ಪ್ರಚಾರ ತಂತ್ರವೆನ್ನಿಸಲಾರದೆ? ಎಂಬ ಪ್ರಾಮಾಣಿಕ ಸಂದೇಹ ಯಾರಲ್ಲಾದರೂ ಮೂಡಬಹುದಾಗಿದೆ.

ಅರ್ಜುನನಿಗೆ ಮೂಡಿದಂತಹ ಸಂದೇಹ, ಸಾಮಾನ್ಯರಿಗೂ ಅವರವರ ಬದುಕಿನ ಪರಿಸ್ಥಿತಿಗನುಸರಿಸಿ ಬರಬಹುದು. ಇಂಥ ಕಡೆ ಆ ವ್ಯಕ್ತಿ ಯಾವ ರೀತಿ ಆ ಸಂದೇಹಕ್ಕೆ ಪರಿಹಾರ ಕಲ್ಪಿಸಿಕೊಳ್ಳಬಹುದೆಂಬುದನ್ನೂ ಗೀತೆ ಮಾರ್ಗದರ್ಶನ ಮಾಡುತ್ತದೆ. ಆ ಮಾರ್ಗದರ್ಶನ ವೆಂದರೆ 'ಫಲಾಪೇಕ್ಷೆ ಇಲ್ಲದೆ' ಕರ್ತವ್ಯವನ್ನು ಪಡೆಯಬೇಕು ಎಂಬುದಾಗಿದೆ ಎಂದು ನಾವೆಲ್ಲ 'ನಟ್‌ಶೆಲ್'ನಲ್ಲಿ ತಿಳಿದುಕೊಂಡಿದ್ದೇವೆ. ಅಲ್ಲಿಗೆ ಸಮಸ್ಯೆ ಮುಗಿದಿದೆ. ಹೀಗಿರಲು ಮತ್ತೆ ಅದನ್ನು ಕೆದಕಿ ಆ ಕುರಿತು ಎರಡು ಪುಸ್ತಕಗಳನ್ನು ಶ್ರೀರಂಗರು ಏಕೆ ಬರೆದರು?

ಏಕೆ ಬರೆದರೆಂದರೆ ಈ ಗೀತೆಯ ಕುರಿತು ಅವರಿಗೇನೋ ಹೊಸ ವಿಚಾರ ಮಂಡಿಸಬೇಕಾಗಿತ್ತು. ಏನು ಆ ವಿಚಾರ? ಆ ಹೊಸ ವಿಚಾರ ಬಲು ವಿಸ್ತಾರವಾದುದು. ಅದರಲ್ಲಿ ಭಗವದ್ಗೀತೆಯು ಸಮಾಜಶಾಸ್ತ್ರವಾಗಿದೆ ಎಂದು ಹೇಳುವದು ಒಂದು. ಸಾಂಖ್ಯವೆಂದರೆ ಪರಂಪರೆ, ಯೋಗವೆಂದರೆ ಪ್ರಗತಿ ಎಂಬುದು ಇನ್ನೊಂದು. ಪರಂಪರೆ ಮತ್ತು ಪ್ರಗತಿಗಳು ಪರಸ್ಪರ ವಿರುದ್ಧವಲ್ಲ; ಪ್ರಗತಿ ಎಂದರೆ ಹಳೆ ಮನೆಯನ್ನು 'ರಿಪೇರಿ' ಮಾಡುವದು ಎಂದು ಹೇಳುವದು ಮತ್ತೊಂದು. ಹೀಗೇ ಇನ್ನೂ ಅನೇಕ ವಿಚಾರಗಳನ್ನು ಈ ಮೂಲಕ ಅವರಿಗೆ ಮಂಡಿಸಬೇಕಾಗಿತ್ತು. ಅವೆಂದರೆ— ಅರ್ಜುನ ಸಾಮಾನ್ಯನಲ್ಲ. ಆತ ಜನನಾಯಕ. ಹಾಗೆಂದು ತಾನೇ ಆ ಹೊಣೆ ಹೊತ್ತವ. ಜನನಾಯಕನಾದವನು ಕರ್ತವ್ಯವನ್ನು ಬಿಟ್ಟು ಹೋಗಲಾಗದು. ಹೊಣೆಯನ್ನು ನಿರ್ವಹಿಸುವಾಗ ತನ್ನ ಮನಸ್ಸಿನ ವಿಚಾರ ಮಾಡಬಾರದು. ಈ ರೀತಿ ವಿಚಾರಗಳನ್ನು ನಿಯಂತ್ರಿಸುವ ಕಾರಣವೇನೆಂದರೆ ಮನುಷ್ಯನ ಸಂಘಜೀವನ, ಮತ್ತು ಈ ಸಂಘಜೀವನಕ್ಕೆ ಬೇಕಾಗುವ ನಾಯಕತ್ವ, ಅನುಯಾಯಿತ್ವ ಎಂಬ ಭೂಮಿಕೆಗಳು ಅನಿವಾರ್ಯವಾಗಿರುವದು. ಅಂದರೆ ಇಂದಿನ ಪ್ರಜಾಪ್ರಭುತ್ವದಲ್ಲಿಯೂ ಇವರ ಪ್ರಯೋಜನವಿದೆ. ಏಕೆಂದರೆ ಪ್ರಜಾಪ್ರಭುತ್ವವೂ ಪ್ರಜಾಪ್ರತಿನಿಧಿಗಳ ಪ್ರಭುತ್ವವಾಗಿದೆ. ಈ ಪ್ರಜಾಪ್ರತಿನಿಧಿಗಳು ತಾವು ಪ್ರತಿನಿಧಿಸುವ ಜನಸಮೂಹದ ನಾಯಕರಾಗಿರುತ್ತಾರೆ. ಈ ನಾಯಕರು ಎಂಥವರಿರಬೇಕು, ಜನಸಮೂಹದವರು ಎಂಥ ನಾಯಕರನ್ನು ಆಯ್ಕೆ ಮಾಡಬೇಕು ಎಂಬ ವಿಚಾರಗಳಿಗೆ ಗೀತೆಯ ಚರ್ಚೆಯು ಮಾರ್ಗದರ್ಶಿಯಾಗಿದೆ. ಈ ರೀತಿಯಲ್ಲಿ ಈ

ವರೆಗೆ ಅಧ್ಯಾತ್ಮವನ್ನು ವಿವೇಚಿಸುವ ಧಾರ್ಮಿಕ ಗ್ರಂಥವೆಂದು ಭಾವಿಕರು ಭಕ್ತಿಭಾವದಿಂದ ಗೌರವಿಸುತ್ತಿದ್ದ 'ಗೀತೆ' ಮಾನವನ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ್ದಾಗಿದ್ದು ಅದರಲ್ಲಿಯ ಚರ್ಚೆಯೆಲ್ಲ ಮಾನವ ಜೀವನದ ವಿಕಾಸದ ಹಿನ್ನೆಲೆಯಿದ್ದು ಮಾನವ ಜೀವನವು ಸುಸೂತ್ರವಾಗಿ ಮುನ್ನಡೆಯಬೇಕಾದರೆ ಏನೇನು ಆಗಬೇಕು ಎಂಬ ಬಗೆಗಿನ ಮುನ್ನೋಟವು ಅಡಕವಾಗಿದೆ ಎಂಬುದು ಶ್ರೀರಂಗರ ದರ್ಶನವಾಗಿದೆ.

ಈ ಭೂಮಿಕೆಯನ್ನು ನಾವು ತಿಳಿದುಕೊಂಡರೆ 'ಚಾತುರ್ವರ್ಣ್ಯ'ದ ಬಗೆಗಾಗಲಿ, ಅದನ್ನು ತಾನೇ ಸೃಷ್ಟಿಸಿದೆನೆಂದು ಹೇಳುವ ಕೃಷ್ಣನ ಹೇಳಿಕೆಗಾಗಲಿ, ಅಥವಾ ಅಂಥದನ್ನು ಒಳಗೊಂಡ ಗ್ರಂಥದ ಬಗ್ಗೆ ಶ್ರೀರಂಗರು ಆಸಕ್ತಿ ತೋರಿಸಿದ್ದುದು ತಪ್ಪೆಂದಾಗಲಿ ತಿಳಿದು ಭಯಪಡಬೇಕಾಗಿಲ್ಲ. ಶ್ರೀರಂಗರು ಪ್ರತಿಗಾಮಿಗಳೇ ಎಂದು ಸಂದೇಹ ತಾಳಬೇಕಾಗಿಯೂ ಇಲ್ಲ, ಎಂದು 'ಗೀತಾಗಾಂಭೀರ್ಯ' ಮತ್ತು 'ಗೀತಾದರ್ಪಣ' ಈ ಎರಡು ಗ್ರಂಥಗಳನ್ನು ಓದಿದರೆ ನಮಗೆ ಗೊತ್ತಾಗುವದು.

ಬಂಡಾಯ, ಕ್ರಾಂತಿ, ಏನನ್ನೂ ಪರೀಕ್ಷಿಸದೆ ನಂಬಬಾರದು. ಅಪ್ಪ ಹಚ್ಚಿದ ಆಲದ ಮರವೆಂದು ಅದಕ್ಕೆ ನೇಣು ಹಾಕಿಕೊಳ್ಳಬಾರದು. ವೈಜ್ಞಾನಿಕ ವಿಚಾರ ಬೆಳೆಸಿಕೊಳ್ಳಬೇಕು, ಮೂಢನಂಬಿಕೆಗಳನ್ನು ತ್ಯಜಿಸಬೇಕು. ಸಮಾಜದಲ್ಲಿ ಸಮಾನತೆಯ ಭಾವನೆ ಹಾಗೂ ಪರಿಸ್ಥಿತಿ ಬರಬೇಕಾದರೆ ಪ್ರಗತಿಗೆ ತೊಡಕಾಗಿರುವ ಪರಂಪರೆಯನ್ನು ಮುರಿಯಬೇಕು, ವಿರೋಧಿಸಬೇಕು. ಅದನ್ನು ತ್ಯಜಿಸಿ ಹೊಸ ಕಾಲದ ಹೊಸ ಆಹ್ವಾನಗಳನ್ನು ಸ್ವೀಕರಿಸಲು ನಮ್ಮ ಅರ್ಹತೆಯನ್ನು ವರ್ಧಿಸಿಕೊಳ್ಳಬೇಕು. ಅದೆಲ್ಲ ಪ್ರಗತಿಪರ ವಿಚಾರ-ಧೋರಣೆ. ಹಳೆಯದನ್ನೇ ನಂಬಿ, ಅದನ್ನೇ ಪ್ರೀತಿಸುತ್ತ ಉಳಿದರೆ ನಾವು ಲೋಕದಲ್ಲಿ ಎಂದೂ ಉಳಿದವರೊಂದಿಗೆ ಸೇರಿ ಹೆಜ್ಜೆ ಇಡಲಾರೆವು. ಎಂದೆಂದೂ ನಾವು ಹಿಂದೇ ಬಿದ್ದಿರಬೇಕಾಗುವದು. ಆಗ ನಮಗೆ ಸಮೃದ್ಧಿ ಇರಲಾರದು, ಸೌಲಭ್ಯಗಳಿರಲಾರವು. ಸೌಖ್ಯವಿರಲಾರದು ಎಂಬುದು ಆಧುನಿಕ ಜಾಗೃತಿಯ ಭೂಮಿಕೆ. ಈ ಭೂಮಿಕೆಯ ಇಂದಿನ ಜಾಗ್ರತಿ ಎಳ್ಳಷ್ಟೂ ಇಲ್ಲದಾಗಲೇ ಶ್ರೀರಂಗರು ಧಾರ್ಮಿಕ ಮೌಢ್ಯವನ್ನು ವಿರೋಧಿಸುವ ಯುವಕರ ಮುಖಂಡರಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಅವರು ನಮ್ಮೆಲ್ಲ ಕ್ರಾಂತಿಕಾರರ, ಬಂಡಾಯಗಾರರ, ಪ್ರಗತಿಪರರ ಸಾಲಿಗೆ ಆದ್ಯರಾದವರು ಎಂದಾಗ ಅವರಲ್ಲಿ ಪ್ರತಿಗಾಮಿತ್ವ ಹೇಗೆ ಬಂದೀತು?

ಅವರ ಈ ಗ್ರಂಥಗಳಿಂದ ನಮಗೆ ಹೊಸ ದರ್ಶನವಾಗುವದಿಷ್ಟೇ ಅಲ್ಲ, ಒಂದಿಷ್ಟು ಮನಸ್ಸನ್ನು ಎತ್ತರಕ್ಕೆ ಒಯ್ಯುವ ಓದನ್ನು ಓದಿದ ತೃಪ್ತಿಯಾಗುತ್ತದೆ. ಅವರ ಬರವಣಿಗೆಯಿಂದ ಅನೇಕ ಚಿಂತನೆಗಳು ನಮ್ಮ ವಿಚಾರಕ್ಕೆ ಆಹಾರವಾಗಿ ಸಿಗುತ್ತವೆ.

ಕೆಲವನ್ನು ಉದಾಹರಣೆಗೆಂದು ಮಾತ್ರ ಇಲ್ಲಿ ಕೊಡುವೆ :

'ವಿರೋಧಾಭಾಸವು ಅಲಂಕಾರವೆನಿಸಿದರೆ ಪರಿಹಾರವಿಲ್ಲದ ವಿರೋಧವು ಅಂಧಕಾರವೆನಿಸುವದು. ....ಸ್ವಜನಹತ್ಯೆ ಪಾಪವೆಂದರೆ ಶತ್ರುಗಳನ್ನು ಕೊಲ್ಲಬೇಕು ಎಂದಷ್ಟೇ ನಂಬಿ ನಡೆದ ಸಮಾಜ ಮದಾಂಧವಾಗಿ, ಸಾಮ್ರಾಜ್ಯಲಾಲಸೆಯದಾಗಿ, ಪರಮತ ಅಸಹಿಷ್ಣುತೆ, ಸರ್ವಾಧಿಕಾರತ್ವವನ್ನು ಪೋಷಿಸುವದು... ಮನಸ್ಸನ್ನು ತಡೆಹಿಡಿದರೂ ದೇಹವನ್ನು ತಡೆಯಲಾಗದು. (ಮನಸ್ಸಿನ ಭಾವಗಳು ದೇಹದ ಮೇಲೆ ಮೂಡದಿರಲಾರವು) ...ಬುದ್ಧಿಯು

ಮಾನವನ ಪ್ರಗತಿಗೆ ಕಾರಣವಾಗುವಂತೆ ವಿನಾಶಕ್ಕೂ ಕಾರಣವಾಗುವದು. ...ಧರ್ಮಶಾಸ್ತ್ರವನ್ನು ಬದಲಿಸುವ ಅಧಿಕಾರ ಕೃಷ್ಣನಂಥವರಿಗಿರುವದೇ ವಿನಃ ಅರ್ಜುನನಂಥವರಿಗಲ್ಲ. ...ನಾನು ಮಾಡುವದಿಲ್ಲ ಎಂಬುದೂ ನಾನು ಮಾಡುತ್ತೇನೆ ಎಂಬಂತೆಯೆ ಅಹಂಕಾರದ ಮಾತು... ದೇಹದ ಬೆಳವಣಿಗೆಗೆ ಸ್ವಚ್ಛತೆ ಆವಶ್ಯಕ, ಮನಸ್ಸಿನ ಬೆಳವಣಿಗೆಗೆ ಸ್ವಾತಂತ್ರ್ಯವು ಆವಶ್ಯಕ. ತಮ್ಮಷ್ಟಕ್ಕೆ ತಾವೇ ಶ್ರೇಷ್ಠರೆಂದು ಹೇಳಿಕೊಂಡ ಬ್ರಾಹ್ಮಣರಂತೆ ...ಆಹಾರ, ಆಧಾರಗಳ ಭರವಸೆ ತಪ್ಪಿದ್ದರಿಂದ ಮಾನವನಿಗೆ ನಿಸರ್ಗದ ರಕ್ಷಣೆ ಇಲ್ಲವಾಯಿತು... ಮೊದಲು ವಿಚಾರ ಆಮೇಲೆ ಭಾಷೆ ಎಂಬುದು ತಪ್ಪು. ಏಕೆಂದರೆ ವಿಚಾರ ಭಾಷೆಯನ್ನವಲಂಬಿಸಿದೆ. ಭಾಷೆ ಇಲ್ಲವೆ ವಿಚಾರವಿಲ್ಲ... ಭಾಷೆಯ ಉಗಮ ಹಸಿವಿನ ಉದರದಲ್ಲಿ... ಭಾಷೆಯು ಹುಟ್ಟು ಮಾನವನ ಶರೀರ ರಚನೆಯನ್ನೂ ಅದರಿಂದುದ್ಭವಿಸಿದ ಅನನುಕೂಲ ಪರಿಣಾಮವನ್ನೂ ಅವಲಂಬಿಸಿದೆ... ಸೋರುವ ರಕ್ತ ನೆಕ್ಕುವದರಿಂದ ಪ್ರಾಣಿಗೆ ಏನು ಅನುಭವವೋ ಅವೇ ಮನುಷ್ಯನಿಗೆ ನರಳುವದರಿಂದ ಆಗುವದು. ಬಾಯಿಂದ ಉಸಿರಾಡುವ ಶಕ್ತಿ ಮಾನವನಿಗೇ ವಿಶೇಷವಾದುದು. –ಕಾಮಭೋಗ ಮಾನವನಲ್ಲಿ ಮಾತ್ರ ಉಂಟು. ಉಳಿದ ಪ್ರಾಣಿಗಳಲ್ಲಿ ಅದು ಸಂತಾನ ನಿರ್ಮಿಸುವ ಕ್ರಿಯೆ ಮಾತ್ರ. ...ನಿಸರ್ಗದ ನಿಯಮಗಳನ್ನು ಬದಲಿಸಿಕೊಳ್ಳುವುದು ಇಲ್ಲವೆ ಮುರಿಯುವುದು ಮಾನವ ಪ್ರಾಣಿಯ ಬೆಳವಣಿಗೆಯ ಇತಿಹಾಸದ ವೈಶಿಷ್ಟ್ಯವಾಗಿದೆ. ...ಅನುಭವವೊಂದು ಚಿರಂತನ ಸಂತತಪ್ರವಾಹ ...ಗೌತಮಬುದ್ಧನ ಅನುಭವದಿಂದ ಲೋಕವೆಲ್ಲ ಕರುಣಾಮಯವಾಗಲಿಲ್ಲ. ...ಬಸವ, ಕ್ರೈಸ್ತರಂಥ ಮಹಾಚೇತನಗಳು ಹುಟ್ಟಿದರೂ ಮಾನವ ಜೀವನದೊಳಗಿನ ಪಾಪ ಹೋಗಿಲ್ಲ... ಗೆದ್ದರೆ ಕ್ರಾಂತಿ, ಸೋತರೆ ಬಂಡಾಯ. ...ಗೆದ್ದವನಿಗೆ ಹಯಾತಿನಲ್ಲಿ ನಾಯಕ ಪಟ್ಟ; ಸೋತು ಸತ್ತ ಪ್ರತಿಭಟನಕಾರನಿಗೆ ಸತ್ತ ಮೇಲೆ ನಾಯಕ ಪಟ್ಟ. ...ಅತಿಯಾದ ಲೋಭ ಪಾಪ ಎಂದು ಎಲ್ಲ ಧರ್ಮಗಳದೂ ನಿಲುವು. ಆದರೆ ಲೋಭವೇ ಪಾಪ ಎಂದು ಹೇಳುವ ಧರ್ಮ ಯಾವುದಾದರೂ ಇದ್ದರೆ ಅದು ಮನುಷ್ಯಧರ್ಮವನ್ನರಿಯದ ಕುರುಡು ಧರ್ಮವೆನ್ನಬೇಕು. ...ಸದ್ಯಕ್ಕಂತೂ ರಾಷ್ಟ್ರವೇ ಸತ್ಯ. ವ್ಯಕ್ತಿ ಎಂಬುದು ಮಿಥ್ಯ. ...ಯುನೋದಂಥ ಸಂಘಟನೆಯಾದ ಮೇಲೂ ವ್ಯವಹಾರಗಳೆಲ್ಲ ರಾಷ್ಟ್ರಹಿತ ಪ್ರೇರಿತವಾಗಿಯೆ ನಡೆದಿವೆ. ...ಲೋಭದ ಸಿದ್ಧಿಗಾಗಿ ಮಾನವ ಧರ್ಮಕಲ್ಪನೆ ಹುಡುಕಿದ. ...ನಾನು ಮತ್ತು ಅನ್ಯ ಸಂಬಂಧಗಳಿಂದ ಹುಟ್ಟುವದೇ ವ್ಯಕ್ತಿತ್ವ... (ಬಾಲ್ಯ ವಿವಾಹ ಪದ್ಧತಿಯ ದಿನಗಳು ಇದ್ದಾಗ ಆ ವಿರುದ್ಧ ಕಾನೂನು ಬಂತು. ಆ ಕಾಲದಲ್ಲಿ) ಮೈನೆರೆಯುವ ಮುಂಚೆ ಮಗಳ ಲಗ್ನ ಮಾಡದಿದ್ದರೆ ಅವಳಿಗೂ ತಮಗೂ ಸತ್ತ ಮೇಲೆ ಶಿಕ್ಷೆ. ಆದರೆ ಹದಿನಾಲ್ಕು ವರ್ಷದೊಳಗೆ ಅವಳ ಲಗ್ನ ಮಾಡಿದರೆ ಸಾಯುವ ವರೆಗೆ ಶಿಕ್ಷೆ... ವ್ಯಕ್ತಿ ಮತ್ತು ಸಮಾಜಗಳು ಒಂದನ್ನೊಂದು ನಿಕಟವಾಗಿ ಅವಲಂಬಿಸಿವೆ ಎಂದರೆ ಇತಿಹಾಸ ಅದನ್ನು ಅಲ್ಲಗಳೆಯುವದು. ಅವೆರಡೂ ಒಂದನ್ನೊಂದು ಅವಲಂಬಿಸಿಲ್ಲವೆಂದೇ ಮೇಲು ಕೀಳೆಂಬ ಭೇದ ಹುಟ್ಟಿವೆ. ...ಜ್ಞಾನವೆಂದರೆ ಆಚರಣೆ. ..ಬುದ್ಧಿ, ಮನಸ್ಸು, ಇಂದ್ರಿಯಗಳನ್ನು ಮೀರಿದ ಶಕ್ತಿ ಶ್ರದ್ಧೆ. ಶ್ರದ್ಧೆ ಜೀವನದ ಆದಿಶಕ್ತಿ... ಮನುಷ್ಯನಿಗೆ ವಿವೇಕಜ್ಞಾನವಿದ್ದರೂ ಸಮ್ಯಗ್ಜ್ಞಾನವಿಲ್ಲ. ...ಸಮಾಜದ ಸಂಘಟನೆಗಾಗಿ ಹಾಕಿಕೊಂಡ ಆಚರಣೆಯ ಧರ್ಮ...' ಇಂಥ ಅಸಂಖ್ಯ ಹೇಳಿಕೆಗಳಿವೆ. ಎಷ್ಟು ಯೋಚಿಸುವಿರೋ ಯೋಚಿಸಿ.

● ● **ರಾ. ಕ. ನಾಯಕ** : ಕಾಕತಿ (ಬೆಳಗಾವಿ) - ೫೯೧ ೧೧೩

ಶ್ರೀಕೃಷ್ಣಪಾರಿಜಾತ *

ಎಂ. ಎಂ. ಕಲಬುರ್ಗಿ

೧. ಹೂವಿನ ಕಥೆ

ಪಾರಿಜಾತ- ಹೆಸರೇ ಒಂದು ರೋಮಾಂಚನ. ಈ ಹೂವಿನ ಸುತ್ತ ಬೆಳೆದ "ಶ್ರೀಕೃಷ್ಣಪಾರಿಜಾತ"ವನ್ನು ಪ್ರೇಕ್ಷಕನಾಗಿ ನೋಡಿದವ, ಶ್ರಾವಕನಾಗಿ ಕೇಳಿದವ, ವಾಚಕನಾಗಿ ಓದಿದವ, ನಾನು. ಇದರ ಶ್ರವ್ಯಪಠ್ಯ-ದೃಶ್ಯಪಠ್ಯಗಳನ್ನು ಅಭ್ಯಾಸ ಮಾಡಿದ, ಅಭ್ಯಾಸ ಮಾಡಿಸಿದ ತೃಪ್ತಿ ನನ್ನದಾಗಿದೆ. ಅಪರಾಳ ತಮ್ಮಣ್ಣನ ಪಾರಿಜಾತದ ಪ್ರಾಚೀನತಮ (೧೮೦೭) ಹಸ್ತಪ್ರತಿಯನ್ನು ಹುಡುಕಿದ ನನ್ನ ಆಕರಶೋಧ, ಇದರ ಉತ್ತರಾರ್ಧದ ಕರ್ತೃ ಸಿರಗುಪ್ಪಿ ಸದಾಶಿವಯ್ಯನೆಂದು ಹೇಳಿದ ನನ್ನ ಸಂಗತಿಶೋಧ, ಮಹತ್ವದವುಗಳೆಂದು ವಿದ್ವಾಂಸರು ಗುರುತಿಸಿದ್ದಾರೆ. ಶ್ರೀಕೃಷ್ಣಪಾರಿಜಾತದ ಪಿಎಚ್.ಡಿ. ಅಭ್ಯಾಸಕ್ಕಾಗಿ ನಾನು ಶ್ರೀ ಇಟ್ಟಣ್ಣವರ ಅವರಿಗೆ ನೀಡಿದ ಮಾರ್ಗದರ್ಶನ ಇನ್ನೂ ಮಹತ್ವದ್ದೆಂದು ಜಾನಪದ ಅಭ್ಯಾಸಿಗಳು ಭಾವಿಸಿದ್ದಾರೆ.

ಹೀಗೆ ನಾನು ಪ್ರೀತಿಯಿಂದ ಅನುಸಂಧಾನ ಮಾಡುತ್ತ ಬಂದ, ನನ್ನನ್ನು ಪ್ರೀತಿಯಿಂದ ಕಾಡುತ್ತ ಬಂದ, ಶ್ರೀಕೃಷ್ಣಪಾರಿಜಾತದ ವ್ಯಕ್ತಿರೂಪ ಕೌಜಲಗಿ ನಿಂಗವ್ವ ಅಥವಾ ಮಹಾಲಿಂಗಪುರ ನಿಂಗವ್ವ. ಈಕೆ ಕೌಜಲಗಿಯಿಂದ ಮಹಾಲಿಂಗಪುರಕ್ಕೆ ಬಂದು ಇಂದಿಗೆ ನೂರು ವರ್ಷ ತುಂಬಿದವು. ಆದುದರಿಂದ ಈ ಕಲಾವಿದೆಯ ಕರ್ಮಭೂಮಿಯಲ್ಲಿ ಜರುಗುತ್ತಲಿರುವ ಈ ಸಮ್ಮೇಲನ, ಈಕೆ ಮಹಾಲಿಂಗಪುರ ಪ್ರವೇಶಿಸಿದ ಶತಮಾನೋತ್ಸವವೂ ಆಗಿದೆ. ಹೀಗೆ ಕಾಲ-ದೇಶಗಳ ದೃಷ್ಟಿಯಿಂದ ಈ ಸಮ್ಮೇಲನ ಮಹತ್ವದ್ದಾಗಿದೆ.

ಶ್ರೀಕೃಷ್ಣಪಾರಿಜಾತ ಮೂಲತಃ ಪುರಾಣದ ಒಂದು ಉಪಕಥೆ. ಆಮೇಲೆ ಅಪರಾಳ ಗ್ರಾಮದಲ್ಲಿ ಹುಟ್ಟಿದ ಒಂದು ಸ್ವತಂತ್ರ ಕಾವ್ಯಕಥೆ. ಬಳಿಕ ೧೨೫ ವರ್ಷಗಳಲ್ಲಿ ಒಂದು ರಂಗಕೃತಿಯಾಗಿ, ಆಮೇಲೆ ಒಂದು ರಂಗಪ್ರಕಾರವಾಗಿ, ಕೊನೆಗೆ ಒಂದು ಕಂಪನಿಯೇ ಆಗಿ, ೫೦ ರಷ್ಟು ಕಂಪನಿಗಳಿಗೆ ತಾಯಿಯೂ ಆಗಿ ಬೆಳೆದ ಏಕೈಕ ವೈಶಿಷ್ಟ್ಯ ಇದಕ್ಕೆ ಪ್ರಾಪ್ತವಾಗಿದೆ. ಈ ರಂಗಕೃತಿಯ ಮೊದಲ ಘಟ್ಟ ರೂಪಿಸಿದ ಯಾದವಾಡ ಮಲಕಪ್ಪ ಮುಂತಾದವರಿಗೆ, ಎರಡನೆಯ ಘಟ್ಟ ರೂಪಿಸಿ, ಇದಕ್ಕೆ ದೊಡ್ಡ ಪ್ರಸಾರ-ಪ್ರತಿಷ್ಠೆಗಳನ್ನು ತಂದುಕೊಟ್ಟ ಕೌಜಲಗಿ ನಿಂಗವ್ವನಿಗೆ, ಜಮುಖಂಡಿ ಅಪ್ಪಾಲಾಲ ಮೊದಲಾದವರ ಕಂಪನಿಗಳಿಗೆ, ಪಾತ್ರಧಾರಿಗಳಿಗೆ, ರಂಗಕರ್ಮಿಗಳಿಗೆ, ಅನನ್ಯ ಪ್ರೀತಿ ತೋರುತ್ತ ಬಂದ ಪ್ರೇಕ್ಷಕರಿಗೆ, ನಾವೆಲ್ಲ ಋಣಿಗಳೆಂದೇ ಹೇಳಬೇಕು.

ಯಾವುದೇ ರಂಗಕೃತಿ, ಅದರಲ್ಲಿಯೂ ಜಾನಪದ ರಂಗಕೃತಿ, ಚಲನಚಿತ್ರದಂತೆ ಬದಲಾಗದ "ಪ್ರದರ್ಶನ"ವಲ್ಲ; ಪ್ರತಿಸಲವೂ ಬದಲಾಗುತ್ತಲೇ ಬರುವ "ಪ್ರಯೋಗ".

---

* ಮಹಾಲಿಂಗಪುರದ ಕೌಜಲಗಿ ನಿಂಗವ್ವ ರಂಗಶಿಕ್ಷಣ ಕೇಂದ್ರದಲ್ಲಿ ೨೦೦೪ ಫೆಬ್ರುವರಿ ೨೮, ೨೯ ರಂದು ಜರುಗಿದ ಅಖಿಲ ಕರ್ನಾಟಕ ಒಂದನೆಯ ಶ್ರೀಕೃಷ್ಣಪಾರಿಜಾತ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣ.

ಕಳೆದ ೧೨೫ ವರ್ಷಗಳಿಂದ ಹೀಗೆ ಪ್ರಯೋಗ ಪಾತಳಿಯಲ್ಲಿ ಪಲ್ಲಟವಾಗುತ್ತ ಬಂದಿರುವ ಶ್ರೀಕೃಷ್ಣಪಾರಿಜಾತ ರಂಗಕೃತಿಯ ಮೂಲಸ್ವರೂಪವನ್ನು, ಅದರ ಅವಸ್ಥಾಂತರಗಳನ್ನು ಕುರಿತು ಚಾರಿತ್ರಿಕವಾಗಿ ಗೆರೆ ಕೊರೆದಂತೆ ಮಾತನಾಡುವುದು ಕಷ್ಟದ ಕೆಲಸ. ಏಕೆಂದರೆ ಯಾವುದೇ ಚರಿತ್ರೆ ಎಷ್ಟೇ ಸುಸಂಗತವಾಗಿ ಬೆಳೆದಿದ್ದರೂ, ಕೆಲವೊಮ್ಮೆ ಅಸಂಗತಗಳು ಅದನ್ನು ನಿಯಂತ್ರಿಸಿರುತ್ತವೆ. ಹೀಗಾಗಿ ನಾವು ಕಾರ್ಯ-ಕಾರಣ ತರ್ಕದಿಂದ ಬರೆಯುವ ಅದರ ಚರಿತ್ರೆಯಲ್ಲಿ ಕೆಲವೊಮ್ಮೆ ದೋಷಗಳು ಸೇರಿಕೊಂಡು ಬಿಡುತ್ತವೆ. ಶ್ರೀಕೃಷ್ಣಪಾರಿಜಾತದ ವಿಭಿನ್ನ ರೂಪಗಳಾದ ಪುರಾಣಕೃತಿ, ಕಾವ್ಯಕೃತಿ, ರಂಗಕೃತಿಗಳನ್ನು ಕುರಿತು ಬೆಟಗೇರಿ ಕೃಷ್ಣಶರ್ಮ, ಸುಂಕಾಪುರ, ಮಲಶೆಟ್ಟಿ, ಇಟ್ಟಣ್ಣವರ, ಧೂಪದ, ಕುರ್ತಕೋಟಿ, ಬಸಲಿಂಗಯ್ಯ ಹಿರೇಮಠ, ರಾಮಚಂದ್ರ ಕಿತ್ತೂರ, ಬಾಳೇಶ ಲಕ್ಷೆಟ್ಟಿ, ಜಯತೀರ್ಥ ಜೋಶಿ, ಸಂಗಮೇಶ ಬಿರಾದಾರ, ಅಶೋಕ ನರೋಡೆ –ಮೊದಲಾದವರು ಮಾಡಿದ ಸಂಶೋಧನ-ವಿಮರ್ಶನ-ಪ್ರದರ್ಶನಗಳು ಎಷ್ಟೇ ಮಹತ್ವದವುಗಳಾದರೂ ಅಲ್ಲಿ ಕೆಲವೊಮ್ಮೆ ಇಂಥ ದೋಷಗಳು ಸೇರಿಕೊಂಡಿವೆ. ಒಂದಿಷ್ಟು ಸಮಸ್ಯೆಗಳೂ ಉಳಿದುಕೊಂಡಿವೆ.

ಪುರಾಣಮೂಲದ ಈ ಕಥೆ, ಕೃತಿರೂಪ ಪಡೆದುದು ಮೊದಲು ತೆಲುಗಿನಲ್ಲಿ. ಆಮೇಲೆ, ಕನ್ನಡ ಕೀರ್ತನಕಾವ್ಯವಾಗಿ ಅವತರಿಸಿದುದು, ತೆಲುಗುನಾಡಿಗೆ ಹೊಂದಿಕೊಂಡಿರುವ ಮತ್ತು ಹರಿದಾಸಸಾಹಿತ್ಯದ ಎರಡನೆಯ ಘಟ್ಟವೆನಿಸಿರುವ ರಾಯಚೂರು ಜಿಲ್ಲೆಯ ಅಪರಾಳ ಗ್ರಾಮದ ತಮ್ಮಣ್ಣನ ಕೈಯಲ್ಲಿ. ಇಂದು ಉಭಯಭಾಷಾ ಬಲ್ಲಿದರು ಈ ತೆಲುಗು-ಕನ್ನಡ ಕೃತಿಗಳ ಸಮಗ್ರ ತೌಲನಿಕ ಅಭ್ಯಾಸ ನಡೆಸುವುದು ಅವಶ್ಯವಿದೆ. ಈ ಕನ್ನಡ ಕೀರ್ತನಕಾವ್ಯ ಇತ್ತೀಚಿನ ೧೨೫ ವರ್ಷಗಳಲ್ಲಿ 'ರಂಗಕಲೆ'ಯಲ್ಲಿ ಹುಟ್ಟು, 'ಸಂಗೀತಕಲೆ'ಯಲ್ಲಿ ಮರುಹುಟ್ಟು – ಎಂಬ ಎರಡು ಘಟ್ಟಗಳಲ್ಲಿ ಹೀಗೆ ಬೆಳೆದು ನಿಂತಿದೆ.

೨. ರಂಗಕಲೆಯಲ್ಲಿ ಹುಟ್ಟು

ಅಪರಾಳ ತಮ್ಮಣ್ಣನ ಪಾರಿಜಾತಕಾವ್ಯವನ್ನು ಮೊದಲಿನಿಂದಲೂ ಕೀರ್ತನಕಾರರು ಭಕ್ತಿಪ್ರಧಾನವಾಗಿ ಕೀರ್ತನ ಮಾಡುವ ಮೂಲಕ, ಪಾತರದ ಸ್ತ್ರೀಯರು ಹಾಡುತ್ತ ಅಭಿನಯಿಸುವ ಮೂಲಕ, ಬ್ರಾಹ್ಮಣ ಮಹಿಳೆಯರು ವಿರಾಮಕಾಲದಲ್ಲಿ ಶ್ರದ್ಧಾಪ್ರಧಾನವಾಗಿ ಹಾಡುವ ಮೂಲಕ, ತುಂಬ ಪ್ರಚುರಪಡಿಸುತ್ತಿದ್ದರು. ಧಾರವಾಡದ ಜೀಜಾಬಾಯಿಯಂಥ ಸುಶಿಕ್ಷಿತ ಮಹಿಳೆಯರು ಲಿಪಿಸುತ್ತ ಮಧ್ಯಮಧ್ಯ ಸುಂದರ ಚಿತ್ರ ಬಿಡಿಸುತ್ತಿದ್ದರು; ಚುರಮರಿ ಶಾಕುಂತಲದಂಥ ಕನ್ನಡ ಕೃತಿ ಮತ್ತು ಕಿರ್ಲೋಸ್ಕರ ಪಾರಿಜಾತದಂಥ ಮರಾಠೀ ಕೃತಿಗಳಲ್ಲಿ ಅದರ ಧಾಟಿಗಳನ್ನು ಬಳಸುತ್ತಿದ್ದರು. ತಮ್ಮದು ಹೂವಿನ ಕಥೆಯಾಗಿರದಿದ್ದರೂ ಶಿವಪಾರಿಜಾತ, ವೀರಭದ್ರಪಾರಿಜಾತ, ರಾಮಪಾರಿಜಾತವೆಂದು ತಮ್ಮನ್ನು ಕರೆದುಕೊಳ್ಳುವ ಮೂಲಕ ಕೆಲವು ಕೃತಿಗಳು ಈ ಹೆಸರನ್ನು ಒಂದು ಸಾಹಿತ್ಯಪ್ರಕಾರವಾಗಿಯೂ ಬೆಳೆಸಿದ್ದವು. ಹೀಗೆ ದಟ್ಟ ಪ್ರಭಾವ ಬೀರಿದ್ದ ಕೀರ್ತನ ಪಾರಿಜಾತದ ಒಡಲಿನಿಂದ ೧೯ ನೆಯ ಶತಮಾನದ ಉತ್ತರಾರ್ಧದ ಹೊತ್ತಿಗೆ ಗೋಕಾಕ ತಾಲೂಕಿನಲ್ಲಿ ರಂಗಪಾರಿಜಾತ ಉದ್ಭವಿಸಿತು. ಕರ್ನಾಟಕದ ಇತರ ಪ್ರದೇಶ ಬಿಟ್ಟು,

ಈ ದ್ವಿಭಾಷಿಕ ಪ್ರದೇಶದಲ್ಲಿಯೇ ಇದು ಏಕೆ ಉದ್ಭವಿಸಿತು? ಅದರ ಹಿಂದಿರುವ ಸಾಮಾಜಿಕ, ಸಾಂದರ್ಭಿಕ ಕಾರಣಗಳೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವುದು ಅವಶ್ಯವಿದೆ.

ಇದನ್ನು ಬಿಟ್ಟರೂ ಈ ರಂಗಕೃತಿಯನ್ನು ರಚಿಸಿದವನು ಕುಲಗೋಡ ಗ್ರಾಮದ ಬ್ರಾಹ್ಮಣ ತಮ್ಮಣ್ಣನೋ? ನೆರೆಯ ಯಾದವಾಡ ಗ್ರಾಮದ ಹೂಗಾರ ಮಲಕಪ್ಪನೋ? ಎಂಬ ಸಂದೇಹವನ್ನು ಡಾ. ಶಿವರಾಮ ಇಟ್ಟಣ್ಣವರ ಎತ್ತಿದ್ದಾರೆ. ಅಪರಾಳ ಪಾರಿಜಾತವನ್ನು ಧಾರವಾಡದ ಬ್ರಾಹ್ಮಣ ಮಹಿಳೆ ಜೀಜಾಬಾಯಿ ದೇವನಾಗರಿ ಲಿಪಿಯಲ್ಲಿ ನಕಲು ಮಾಡಿ ಮಡಿವಂತಿಕೆ(?) ಮೆರೆದುದನ್ನು ನೋಡಿದರೆ, ಆ ಕಾಲದಲ್ಲಿ ಬ್ರಾಹ್ಮಣನಾದ, ಅದರಲ್ಲಿಯೂ ಮಾಧ್ವಬ್ರಾಹ್ಮಣನಾದ ಕುಲಗೋಡ ತಮ್ಮಣ್ಣ ಪದ್ಯಕೃತಿಯನ್ನು ಮುರಿದು ಕೆಳವರ್ಗದವರ ಜಾನಪದ ಆಟವನ್ನಾಗಿ ರೂಪಿಸಿದನೇ? ಡೊಂಬರ ನಿಂಗವ್ವ, ಬಾರಕೇರ ನೀಲವ್ವನಂಥ ಕೆಳಜಾತಿಯ ಹೆಂಗಸರನ್ನು ಕರೆದುಕೊಂಡು ಕಂಪನಿಯನ್ನೂ ಕಟ್ಟಿದನೇ? ಸೇವಕನಂಥ ಭಾಗವತನಾಗಿಯೂ ಅಭಿನಯಿಸುತ್ತಿದ್ದನೇ? ಎಂಬ ಸಂದೇಹಗಳು ಹುಟ್ಟುತ್ತವೆ. ಬಹಳೆಂದರೆ ಈತ ಅಪರಾಳ ಪಾರಿಜಾತದ ಪ್ರಸಿದ್ಧ ಕೀರ್ತನಕಾರನಾಗಿರಬಹುದೆನಿಸುತ್ತದೆ. ಕುಲಗೋಡ ಗ್ರಾಮದ ಮಾರುತಿ ದೇವಾಲಯದಲ್ಲಿ ಲಭಿಸಿದ ಇವನ ವಿಗ್ರಹದ ಭಂಗಿ, ಎಡಭಾಗದ ತಂಬೂರಿಗಳನ್ನು ನೋಡಿದರೆ ಇವನೊಬ್ಬ ಭಕ್ತ, ಅದರಲ್ಲಿಯೂ ಕೀರ್ತನಕಾರ ಭಕ್ತನೆಂಬ ಭಾವನೆ ಮೂಡುತ್ತದೆ. ಕೀರ್ತನ ವೃತ್ತಿಯ ಈತ 'ಕುಲಗೋಡ ಭೀಮ' ಮುದ್ರಿಕೆಯ ಕೆಲವು ಹಾಡುಗಳನ್ನು ರಚಿಸಿದ್ದನೆಂದು, ಬಹಳೆಂದರೆ ಕೆಲವರಿಗೆ ತಂಬೂರಿ ಪದ ಕಲಿಸಿದ್ದನೆಂದು ಹೇಳಬಹುದು.

ಯಾದವಾಡ ಮಲಕಪ್ಪನಾದರೋ ಜಾತಿಯಿಂದ ಹೂಗಾರ. ವಾದ್ಯ-ಸಂಗೀತ ಇತ್ಯಾದಿ ಈತನ ಕುಲಕಸಬು. ಇದು ಆಟ ನಿರ್ಮಾಣಕ್ಕೆ ಸೂಕ್ತ ವಾತಾವರಣ. ಮೇಲಾಗಿ ಆ ಕಾಲಘಟ್ಟದ ಪಾರಿಜಾತ ಕಲಾವಿದರಾದ ಯಾದವಾಡ ಮಲಕಪ್ಪ, ಹುಕ್ಕೇರಿ ಸಿದ್ರಾಮಪ್ಪ, ಬಡಕುಂದ್ರಿ ಬಸಪ್ಪ, ಬರಗಿ ಅಪ್ಪಾಲಾಲ, ಕೌಜಲಗಿ ನಿಂಗವ್ವ, ಬಾರ್ಕಿ ನೀಲವ್ವ, ಸಿದ್ಧಯ್ಯ ಚಟ್ಟಿಮಠ ಮೊದಲಾದವರೆಲ್ಲ ಬ್ರಾಹ್ಮಣೇತರರೇ ಆಗಿದ್ದಾರೆ. ಎರಡನೆಯ ಘಟ್ಟದ ಅಚ್ಯುತಾಚಾರ್ಯ ಶೂರ್ಪಾಲಿ, ಮೂರನೆಯ ಘಟ್ಟದ ಲೋಕಾಪುರ ದೇಶಪಾಂಡೆ ಅವರನ್ನು ಬಿಟ್ಟರೆ, ಈ ಕ್ಷೇತ್ರದಲ್ಲಿ ೧೨೫ ವರ್ಷ ನೇರವಾಗಿ ತೊಡಗಿಕೊಂಡವರೆಲ್ಲ ಬ್ರಾಹ್ಮಣೇತರರೇ ಆಗಿದ್ದಾರೆಂಬುದನ್ನು ನೆನೆದರೆ, ಬಹುಶಃ ಹೂಗಾರ ಮಲಕಪ್ಪನೋ, ಮಲಕಪ್ಪನ ರಂಗ ಸಮುದಾಯದವರೋ ಸೇರಿ ಈ ರಂಗಕೃತಿಯನ್ನು ರೂಪಿಸಿದ್ದು, ಕೀರ್ತನಕಾರ ಕುಲಗೋಡ ತಮ್ಮಣ್ಣನ ಒಂದೆರಡು ಹಾಡುಗಳನ್ನು ಅವನೋ ಮುಂದಿನವರೋ ಆಟದಲ್ಲಿ ತೆಗೆದುಕೊಂಡಿರಬಹುದೆನಿಸುತ್ತದೆ.

ಈ ಯಾದವಾಡ ಮಲಕಪ್ಪನ ಶಿಷ್ಯೆ ಕೌಜಲಗಿ ನಿಂಗವ್ವ. ಪಾರಿಜಾತ ಆಟದ ನಡುವೆಯೇ ರಂಗಭೂಮಿಯ ಮೇಲೆ ಈಕೆ, ಗುರು ಯಾದವಾಡ ಮಲಕಪ್ಪನನ್ನು ಭಕ್ತಿಯಿಂದ ಸತ್ಕರಿಸುತ್ತಿದ್ದ ಬಗ್ಗೆ ಪ್ರತ್ಯಕ್ಷದರ್ಶಿಗಳ ಹೇಳಿಕೆಗಳಿವೆ. ಕುಲಗೋಡ ತಮ್ಮಣ್ಣನನ್ನು ಸತ್ಕರಿಸುತ್ತಿದ್ದ ಬಗ್ಗೆ ಇಂಥ ಯಾವ ಮಾತೂ ಕೇಳಿಬರುವುದಿಲ್ಲ. ಈ ಹಿನ್ನೆಲೆಯಲ್ಲಿ

ಹೇಳುವುದಾದರೆ ಯಾದವಾಡ ಮಲಕಪ್ಪನ ಒಂದು ಕೈಯಲ್ಲಿ ಪಾರಿಜಾತ ರಂಗಕೃತಿ ಹುಟ್ಟಿತು, ಇನ್ನೊಂದು ಕೈಯಲ್ಲಿ ಕೌಜಲಗಿ ನಿಂಗವ್ವ ಹುಟ್ಟಿದಳೆನಿಸುತ್ತದೆ. ಅಪರಾಳ ತಮ್ಮಣ್ಣನ ಪಾರಿಜಾತ ಎಷ್ಟೇ ಶ್ರೇಷ್ಠವಾಗಿದ್ದರೂ ದಾಸರ ಕೀರ್ತನೆಯಂತೆ ಅವನ ಕಾವ್ಯಭಾಷೆಯಲ್ಲಿ ಹದ ಕಡಿಮೆ. ಆ ಕೃತಿ ಮಧ್ಯಮ ವರ್ಗದ ಮಲಕಪ್ಪನ ಕೈಯಲ್ಲಿ ರಂಗಕೃತಿಯಾಗಿ ಹುಟ್ಟಿ, ಕೆಳವರ್ಗದ ನಿಂಗವ್ವನ ಕೈಯಲ್ಲಿ ಬೆಳೆಯುವಲ್ಲಿ, ಅಂದರೆ "ಅಪ್ಪ ಸೆರಗ ಬಿಡೋ...." ಎಂಬಂಥ ಗ್ರಾಮೀಣ ಪ್ರತಿಭೆಯ ಹಾಡು-ಮಾತುಗಳನ್ನು ಬಳಸಿಕೊಳ್ಳುವಲ್ಲಿ, ಅದರ ಭಾಷೆಗೆ ಒಂದು ದೇಶೀಯ ಧೋರಣೆ ಪ್ರಾಪ್ತವಾಯಿತು. ಮಧ್ಯಮ ವರ್ಗದ, ಕೆಳವರ್ಗದ ಈ ಗಂಡು-ಹೆಣ್ಣು ಕಲಾವಿದರು ಎತ್ತುಗಳಾಗಿ, ಬಂಡಿಗಳಾಗಿ ಈ ಆಟವನ್ನು ಹಳ್ಳಿ-ಪಳ್ಳಿಯ ಮೂಲೆಮೂಲೆಗೂ ಎಳೆದುಕೊಂಡು ಹೋದರು. ಪಾರಿಜಾತದ ಗಂಧಗಾಳಿ ಮನೆಮನೆಗಳಲ್ಲಿ ಘಮಘಮಿಸುವಂತೆ ಮಾಡಿದರು.

ಯಾದವಾಡ ಮಲಕಪ್ಪ ಕಟ್ಟಿಕೊಟ್ಟ ರಂಗಕೃತಿಯ ಮೂಲ ರೂಪ ಇಂದು ನಮ್ಮ ಕೈಗೆ ಇಳಿದು ಬಂದಿಲ್ಲ. ಮೌಖಿಕ ಸಂಪ್ರದಾಯದಲ್ಲಿ ಇದು ಸಾಧ್ಯವೂ ಇಲ್ಲ. ಹೀಗಿದ್ದೂ ಇದರ ಮೂಲ ರೂಪವನ್ನು ಈ ರೀತಿ ಊಹಿಸಬಹುದು. ಆರಂಭದ ಸ್ತುತಿ, ಆಮೇಲಿನ ಕೆಲವು ಹಾಡುಗಳು ಹೊಸದಾಗಿ ಕಟ್ಟಿ ಸೇರಿಸಿದುವು; ಮಿಕ್ಕ ಹಾಡುಗಳೆಲ್ಲ ಅಪರಾಳ ಪಾರಿಜಾತಕ್ಕೆ ಸಂಬಂಧಿಸಿದುವು. ಇವುಗಳಿಗೆ ಕರ್ನಾಟಕ ಸಂಗೀತ ಶೈಲಿಯನ್ನು ನಿರ್ದಿಷ್ಟಪಡಿಸಲಾಗಿದ್ದಿತು.

ದೃಶ್ಯಗಳನ್ನು ಕುರಿತು ಹೇಳುವುದಾದರೆ, ಆರಂಭದಲ್ಲಿ ಗೊಲ್ಲತಿ-ಗೋಪಾಲ ಸನ್ನಿವೇಶ ಸೇರಿಸಿದ್ದು, ಅಂತ್ಯದಲ್ಲಿ ನರಕಾಸುರಯುದ್ಧ ಬಿಟ್ಟಿದ್ದು, ಮಾಡಿಕೊಂಡ ಬದಲಾವಣೆಗಳು. ಗೊಲ್ಲತಿ-ಬಾಲಗೋಪಾಲ ಸನ್ನಿವೇಶದ ಸೇರ್ಪಡೆಗೆ ದೂರದ ಯಕ್ಷಗಾನಕ್ಕಿಂತ, ನೆರೆಯ ಮಹಾರಾಷ್ಟ್ರದ ತಮಾಶಾ, ಅದಕ್ಕಿಂತ ಸ್ಥಳೀಯ ದಾಸರಾಟ, ರಾಧಾನಾಟ ಪ್ರೇರಣೆ ನೀಡಿರಬಹುದು. ಅದೇನೇ ಇರಲಿ, ಮನರಂಜನೆಯ ಉದ್ದೇಶದ ಇದು ತೇಪೆಯಂತೆ ಅಂಟಿಕೊಂಡಿದೆ. ಯುದ್ಧ ಮೊದಲಾದ ವೀರರಸ ಪ್ರಧಾನ ಉತ್ತರಾರ್ಧ ಭಾಗವನ್ನು ಕೈಬಿಟ್ಟು, ಶೃಂಗಾರ ಹಾಸ್ಯ ರಸಪ್ರಧಾನ ಘಟನೆಗಳನ್ನು ಉಳಿಸಿಕೊಂಡ ಕಾರಣ, ಈ ಕೃತಿಗೆ ಸ್ತ್ರೀಲಕ್ಷಣ (Female Feature) ಪ್ರಾಪ್ತವಾಗಿದೆಯಲ್ಲದೆ, ಕಥೆ ಕವಲೊಡೆಯದೆ ಅದಕ್ಕೆ "ವಿಯೋಗದಿಂದ ಸಂಯೋಗಕ್ಕೆ" ಎಂಬಂಥ ವರ್ತುಲವೂ ಸಿದ್ಧಿಸಿದೆ.

ಶ್ರೀಕೃಷ್ಣ ಪಾರಿಜಾತದಲ್ಲಿ ಮುತ್ತಿನ ಹಾರದ ಸನ್ನಿವೇಶ ತುಂಬ ಪ್ರಸಿದ್ಧವಾದುದು. ಈ ನಾಟಕೀಯ ಪ್ರಸಂಗವನ್ನು ಕೌಜಲಗಿ ನಿಂಗವ್ವನ ಕಂಪನಿಯಲ್ಲಿರುವಾಗ ನಣದಿ ರಾಮಣ್ಣ ಜೋಡಿಸಿದನೆಂದು ಶ್ರೀರಾಮ ಇಟ್ಟಣ್ಣವರ ದಾಖಲಿಸಿರುವ ಸಂದರ್ಶನ ಮಾಹಿತಿ ತಿಳಿಸುತ್ತದೆ. ಆದುದರಿಂದ ಮಲಕಪ್ಪನ ಮೂಲ ರಚನೆಯಲ್ಲಿ ಈ ದೃಶ್ಯವಿರಲಿಲ್ಲವೆಂದೇ ಹೇಳಬೇಕು.

ಇವುಗಳಿಗಿಂತ ಮುಖ್ಯ ಸಂಗತಿಯೆಂದರೆ ಪಾತ್ರಗಳ ನಡುವೆ, ಪಾತ್ರ ಮತ್ತು ಪ್ರೇಕ್ಷಕರ ನಡುವೆ ಸಂಬಂಧ ಕಲ್ಪಿಸುವ ಭಾಗವತನೊಬ್ಬ ದೂತಿಯೂ ಆಗಿ ಆಟದ ಮೈತುಂಬ ಸೇರಿಕೊಂಡುದು. ಇವೆಲ್ಲ ಪಾರಿಜಾತ ಕೃತಿಯ ಮೂಲ ಸ್ವರೂಪ.

೩. ಸಂಗೀತಕಲೆಯಲ್ಲಿ ಮರುಹುಟ್ಟು

ದೃಶ್ಯಗಳ ಜೋಡಣೆ, ಜಾನಪದ ಸಂವೇದನೆ, ವ್ಯಾಪಕ ಪ್ರಸಾರಗಳಿಗೆ ಗುರಿಯಾಗುತ್ತ ಬಂದರೂ ಈ ರಂಗಪ್ರಕಾರದಲ್ಲಿ ಹೊಸ ಘಟ್ಟ ಕಾಣಿಸಿಕೊಂಡದ್ದು "ಕರ್ನಾಟಕ ಸಂಗೀತ ಪದ್ಧತಿ"ಯ ಬದಲು "ಹಿಂದುಸ್ತಾನಿ ಸಂಗೀತ ಪದ್ಧತಿ" ಅಳವಡುವ ಮೂಲಕ.

ಕರ್ನಾಟಕ ಸಂಗೀತ ತುಂಬ ಸಂಪ್ರದಾಯಬದ್ಧ. ಅಲ್ಲಿ ಹೊಸಹೊಸ ರಾಗಾಲಾಪ ಆವಿಷ್ಕಾರಗಳಿಗೆ ಅವಕಾಶವಿಲ್ಲ. ಹಿಂದುಸ್ತಾನಿ ಸಂಗೀತ ಇದಕ್ಕೆ ತುಂಬ ವಿರುದ್ಧವಾದುದು. ಸೃಜನಶೀಲತೆಯೇ ಇದರ ಕೇಂದ್ರಗುಣ. ಇಂಥ ಸಂಗೀತದಿಂದಾಗಿ ಶ್ರೀಕೃಷ್ಣಪಾರಿಜಾತ ಹೊಸ ಜನ್ಮ ತಳೆಯಿತು. ಶ್ರೀಕೃಷ್ಣಪಾರಿಜಾತವೆಂದರೆ ಸಂಗೀತವೆಂಬಷ್ಟರ ಮಟ್ಟಿಗೆ ಅದಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿತು.

೧೯-೨೦ ನೆಯ ಶತಮಾನದ ಮಧ್ಯಕಾಲ ಕರ್ನಾಟಕ-ಮಹಾರಾಷ್ಟ್ರಗಳ ಸ್ನೇಹ-ಸಂಪರ್ಕ ವರ್ಧಿಸಿದ ಸಂದರ್ಭ. ಆಗ ಮುಧೋಳ, ರಾಮದುರ್ಗ, ಜಮಖಂಡಿ, ಜತ್ತ, ನಿಪ್ಪಾಣಿ, ಸಾಂಗಲಿ ಮತ್ತು ಕೊಲ್ಹಾಪುರ ಸಂಸ್ಥಾನಗಳು ಮರಾಠಾ ಸಂಸ್ಥಾನಿಕರ ವಶದಲ್ಲಿದ್ದವು. ಅಂದು ಮಹಾರಾಷ್ಟ್ರದ ಮೂಲಕ ಹಿಂದುಸ್ತಾನಿ ಸಂಗೀತ ಈ ಭಾಗದಲ್ಲಿ ಕ್ರಮೇಣ ತಳವೂರುತ್ತಲೇ, ಜನರ ಅಭಿರುಚಿಯಲ್ಲಿ ದೊಡ್ಡ ಬದಲಾವಣೆ ಕಾಣಿಸಿಕೊಂಡಿತು. ಈ ಸಂದರ್ಭದ ಸದುಪಯೋಗ ಮಾಡಿಕೊಂಡವಳು, ಕೌಜಲಗಿ ನಿಂಗವ್ವ. ಗುರು ಯಾದವಾಡ ಮಲಕಪ್ಪ ಮೊದಲಾದವರ ಕಂಪನಿಗಳು ಪ್ರಚಲಿತ ಕರ್ನಾಟಕ ಪದ್ಧತಿಯಲ್ಲಿಯೇ ಶ್ರೀಕೃಷ್ಣಪಾರಿಜಾತವನ್ನು ಅಂದು ಪ್ರದರ್ಶಿಸುತ್ತಿದ್ದವು. ನಿಂಗವ್ವನೂ ಈ ಸಂಪ್ರದಾಯದವಳಾಗಿದ್ದರಿಂದ ಕರ್ನಾಟಕ ಸಂಗೀತದಲ್ಲಿಯೇ ತನ್ನ ಕಂಪನಿಯನ್ನು ಮುಂದುವರಿಸಿದ್ದಳು. ಸುದೈವಕ್ಕೆ ಈ ಕಂಪನಿ ಸೇರಿದ ನಣದಿ ರಾಮಣ್ಣ ಮೊದಲಾದ ಪ್ರಸಿದ್ಧ ಹಿಂದುಸ್ತಾನಿ ಗಾಯಕರಿಂದಾಗಿ ಇವಳ ರಂಗಭೂಮಿ ಪರಿವರ್ತನೆ ಕಂಡಿತು. ಇದೇ ಪದ್ಧತಿ ವ್ಯಾಪಕಗೊಂಡು ಕೃಷ್ಣಪಾರಿಜಾತದಲ್ಲಿ ಹಿಂದುಸ್ತಾನಿ ಸಂಗೀತಪ್ರಧಾನವೆಂಬ ಎರಡನೆಯ ಘಟ್ಟ ತೆರೆದುಕೊಂಡಿತು. ಹೆಚ್ಚು ಕಡಿಮೆ ಈ ಸಂಗೀತಶೈಲಿಯಲ್ಲಿಯೇ ಇಂದು ಎಲ್ಲ ಕಂಪನಿಗಳು ಮುಂದುವರಿಯುತ್ತಲಿವೆ.

* * *

ಯಾರು ಏನೇ ಪರಿಷ್ಕರಣ ಮಾಡಿದರೂ ಒಟ್ಟು ಕೃತಿ, ಗೊಲ್ಲತಿ-ಗೋಪಾಲ ಸನ್ನಿವೇಶದಲ್ಲಿ ಹಾಸ್ಯವನ್ನು ಹುಟ್ಟಿಸುತ್ತ, ಕೃಷ್ಣ-ರುಕ್ಮಿಣಿ, ಕೃಷ್ಣ-ಸತ್ಯಭಾಮೆ ಸನ್ನಿವೇಶಗಳಲ್ಲಿ ಶೃಂಗಾರಕ್ಕೆ ತಿರುಗಿ, ಕೊನೆಗೆ ಭಕ್ತಿಯಲ್ಲಿ ವಿರಮಿಸುತ್ತದೆ. ಅಂದರೆ ಹಾಸ್ಯ ಶೃಂಗಾರ ಭಕ್ತಿಯೆಂಬ ಮಿಶ್ರರಸಗಳಿಂದಾಗಿ ಇದಕ್ಕೆ ಹೃದಯಪೇಯದ ಮಾಧುರ್ಯ ಪ್ರಾಪ್ತವಾಗಿದೆ.

ಶ್ರೀಕೃಷ್ಣಪಾರಿಜಾತ ಸ್ವಯಂಭೂ ಕೃತಿಯಲ್ಲ. ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಪರಂಪರೆಯ ಭಾಗವಾಗಿರುವ ಇದು, ಅದರ ಯಾವ "ಆಶಯ" ಪರಂಪರೆಗೆ? ಯಾವ "ಆಕೃತಿ" ಪರಂಪರೆಗೆ? ಯಾವ "ಅಭಿವ್ಯಕ್ತಿ" ಪರಂಪರೆಗೆ? ಸಂಬಂಧಿಸಿದೆ ಎಂದು ಕೇಳಬೇಕಾಗುತ್ತದೆ. ಆದಿಕವಿ ಪಂಪ ಕಾವ್ಯವನ್ನು ಲೌಕಿಕ ಆಗಮಿಕವೆಂದು ವರ್ಗೀಕರಿಸಿದ್ದಾನೆ.

ಎಂಟು ರಸಗಳನ್ನೋ ಇವುಗಳಲ್ಲಿ ಕೆಲವು ರಸಗಳನ್ನೋ ಒಳಗೊಂಡುದು ಲೌಕಿಕ, ಹೆಚ್ಚಿನದಾ ಒಂಭತ್ತನೆಯದಾದ ಶಾಂತ(ಭಕ್ತಿ)ರಸವನ್ನೂ ಒಳಗೊಂಡುದು ಆಗಮಿಕವೆಂದು ನನ್ನ ಅನಿಸಿಕೆ

ಭಾವನೆಗಳ ಉದ್ರೇಕವೇ ರಸ. ಇವುಗಳಲ್ಲಿ ಉದ್ರೇಕದಲ್ಲಿ ಆನಂದವುಂಟು; ಇದೇ ರೀತಿ ಇವುಗಳ ಉಪಶಮನದಲ್ಲಿಯೂ ಆನಂದವುಂಟು. ಕೃಷ್ಣಪಾರಿಜಾತವು ಪ್ರೇಕ್ಷಕರಲ್ಲಿ ಹಾಸ್ಯ ಶೃಂಗಾರಗಳ ಉದ್ರೇಕಾತ್ಮಕ ಲೌಕಿಕ ಆನಂದವನ್ನು ಸೃಷ್ಟಿಸಿ, ಕೊನೆಯಲ್ಲಿ ಶಾಂತರಸದಿಂ ಉಪಶಮನಾತ್ಮಕ ಆಗಮಿಕ ಆನಂದವನ್ನು ತುಂಬುತ್ತದೆ. ಆದುದರಿಂದ ಈ ರಂಗಕೃತಿಯು ಕೇವಲ ಉದ್ರೇಕ ಆನಂದವನ್ನುಂಟುಮಾಡುವ ಪಂಪಭಾರತ ಪರಂಪರೆಯದಲ್ಲ. ಉದ್ರೇಕ ಆನಂದದೊಂದಿಗೆ ಉಪಶಮನ ಆನಂದವನ್ನೂ ಉಂಟುಮಾಡುವ ಆದಿಪುರಾಣ ಪರಂಪರೆಯದೆನಿಸುತ್ತದೆ.

ಆಗಮಿಕ ಆಶಯವು ಪಂಪನ ಆದಿಪುರಾಣದಲ್ಲಿ 'ಮಾರ್ಗೀಯ ಶೈಲಿ'ಯಲ್ಲಿ ನಡೆದರೆ, ಹರಿಹರನ ರಗಳೆಯಲ್ಲಿ ಅದು 'ದೇಶೀ ಶೈಲಿ'ಗೆ ಹೊರಳಿ, ಹರಿದಾಸರ ಕೀರ್ತನೆಯಲ್ಲಿ 'ಗೇಯ ಶೈಲಿ'ಗೆ ವಾಲಿತು. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಆಗಮಿಕ ಆಶಯ, ದೇಶೀ ಆಕೃತಿ, ಗೇಯತೆಯ ಅಭಿವ್ಯಕ್ತಿ –ಈ ಮೂರನ್ನೂ ಒಳಗೊಂಡ ಶ್ರೀಕೃಷ್ಣಪಾರಿಜಾತವನ್ನು ಆಸ್ವಾದಿಸುವುದಾದರೆ ಏಕಕಾಲಕ್ಕೆ ಪಂಪನ ಆದಿಪುರಾಣ, ಹರಿಹರನ ರಗಳೆ, ದಾಸರ ಕೀರ್ತನೆ ಆಸ್ವಾದಿಸಿದ ಅನುಭವವಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇಲ್ಲಿ ಶೃಂಗಾರದ ಅತಿರೇಕವೂ ಇದೆ, ಭಕ್ತಿಯ ಅತಿರೇಕವೂ ಇದೆ. ಇವೆರಡರ ಸಮನ್ವಯದಿಂದಾಗಿ ಈ ಕೃತಿಗೆ ಭರತೇಶವೈಭವದ ಭೋಗ-ಯೋಗಗಳ ಸಮನ್ವಯ ಸ್ವರೂಪ ಪ್ರಾಪ್ತವಾಗಿದೆ.

ಒಟ್ಟಾರೆ, ಆಶಯದಲ್ಲಿ ಆಗಮಿಕ, ಆಕೃತಿಯಲ್ಲಿ ದೇಶಿ, ಅಭಿವ್ಯಕ್ತಿಯಲ್ಲಿ ಗೇಯತೆ ಪ್ರಧಾನವಾಗಿರುವ ಅಪರಾಳ ತಮ್ಮಣ್ಣನ ಶ್ರವ್ಯಕಾವ್ಯ ಇನ್ನೂ ಮುಂದುವರಿದು, ಯಾದವಾಡ ಮಲಕಪ್ಪನಲ್ಲಿ ದೃಶ್ಯಕಾವ್ಯವೆಂಬ ಬೇರೊಂದು ಪ್ರಕಾರಕ್ಕೆ ಹೊರಳುವ ಮೂಲಕ, ಕೇಳಿದರೆ 'ಕರ್ಣಸುಖ'ವೆಂಬ ಪ್ರಸಿದ್ಧಿಯ ಜೊತೆಗೆ ನೋಡಿದರೆ 'ನೇತ್ರಸುಖ'ವೆಂಬ ಪ್ರಸಿದ್ಧಿ ಪಡೆಯಿತು.

ತನ್ನ ಶಿಷ್ಟತೆಯಿಂದಾಗಿ ಕೀರ್ತನಪಾರಿಜಾತ ನಿರ್ದಿಷ್ಟ ಪಠ್ಯವಾದರೆ, ತನ್ನ ಜಾನಪದೀಯತೆಯಿಂದಾಗಿ ರಂಗಪಾರಿಜಾತ ಅನಿರ್ದಿಷ್ಟ ಪಠ್ಯವಾಗಿದೆ. ಇಂಥ ಬದಲಾವಣೆಯಿಂದಾಗಿ ಈ ರಂಗಕೃತಿ 'ವ್ಯಕ್ತಿಪಠ್ಯ'ವೆನಿಸದೆ 'ಸಮುದಾಯಪಠ್ಯ'ವೆನಿಸಿತು. ವ್ಯಕ್ತಿಪಠ್ಯವೇ 'ಶೈಲಿ', ಸಮುದಾಯ ಪಠ್ಯವೇ 'ರೀತಿ'. ಹೀಗಾಗಿ ಆ ಕೀರ್ತನಕೃತಿ ಮತ್ತು ಈ ರಂಗಕೃತಿಗಳೆಂದರೆ ಶೈಲಿಯಿಂದ ರೀತಿಗೆ ಸಾಗಿ ಬಂದ ಪ್ರಯೋಗವೆಂದೇ ಹೇಳಬೇಕು.

ಒಟ್ಟಾರೆ, ಯಾದವಾಡ ಮಲಕಪ್ಪನ ಕೈಯಲ್ಲಿ ನಿರ್ದಿಷ್ಟ ಪಠ್ಯದಿಂದ ಅನಿರ್ದಿಷ್ಟ ಪಠ್ಯಕ್ಕೆ, ನಣದಿ ರಾಮಣ್ಣ ಮೊದಲಾದವರ ಕೈಯಲ್ಲಿ ನಿರ್ದಿಷ್ಟ ಸಂಗೀತದಿಂದ ಅನಿರ್ದಿಷ್ಟ ಸಂಗೀತಕ್ಕೆ ಹೊರಳಿದ್ದ ಕಾರಣ, ರಂಗಪಾರಿಜಾತ ಏಕಕಾಲಕ್ಕೆ 'ನೋಡುವ-ಕೇಳುವ ಅನಿರ್ದಿಷ್ಟ ಪಠ್ಯ'ವೆಂಬ ಸೃಜನಶೀಲಕೃತಿಯಾಗಿದೆ. ಇದರಿಂದಾಗಿ ಸಂಗೀತಜ್ಞರ ನಡುವೆ ಸಂಗೀತವಾಗಿ ಹಿಗ್ಗುವ, ಆಧ್ಯಾತ್ಮಿಗಳ ನಡುವೆ ಅಧ್ಯಾತ್ಮವಾಗಿ ಹಿಗ್ಗುವ. ರಸಿಕರ ನಡುವೆ ಶೃಂಗಾರ-ಹಾಸ್ಯವಾಗಿ ಹಿಗ್ಗುವ ಅನಿರ್ದಿಷ್ಟ ಗುಣ ಪಡೆದಿದೆ.

ಕೇಳುವ ಕಾವ್ಯಪಾರಿಜಾತ, ನೋಡುವ ರಂಗಪಾರಿಜಾತಗಳನ್ನು ಕ್ರಮವಾಗಿ ಕೇಳಿ, ನೋಡಿ ಆಸ್ವಾದಿಸಬೇಕು. ಆದರೆ ಇತ್ತೀಚೆ ಸಾಕ್ಷರತೆ ವರ್ಧಿಸಿದಂತೆ ಎಲ್ಲ ಸಾಹಿತ್ಯವನ್ನೂ ಮುದ್ರಿಸಿ ವಾಚಿಸುವ ಮತ್ತು ವಿಮರ್ಶಿಸುವ ತಪ್ಪು ಪದ್ಧತಿ ನಮ್ಮಲ್ಲಿ ಬೆಳೆದು ಬಂದಿದೆ. ಅಭಿವ್ಯಕ್ತಿಯ ಈ ಪಾತಳಿಪಲ್ಲಟದಿಂದಾಗಿ ಆಯಾ ಪ್ರಕಾರಗಳ ಪರಿಣಾಮದಲ್ಲಿಯೂ ಪಲ್ಲಟ ತಲೆದೋರುವ ಕಾರಣ, ಅವುಗಳ ಮೌಲ್ಯನಿರ್ಣಯದಲ್ಲಿ ಅನ್ಯಾಯವಾಗುತ್ತಲಿದೆ. ಆದುದರಿಂದ ಕಾವ್ಯಪಾರಿಜಾತವನ್ನು ಶ್ರೋತೃಗಳಾಗಿ ಕೇಳಿ ಆನಂದಿಸುವುದು-ಕೇಳಿ ವಿಮರ್ಶಿಸುವುದು, ರಂಗಪಾರಿಜಾತವನ್ನು ಪ್ರೇಕ್ಷಕರಾಗಿ ನೋಡಿ ಆನಂದಿಸುವುದು-ನೋಡಿ ವಿಮರ್ಶಿಸುವುದು ಸರಿಯಾದ ಕ್ರಮವಾಗಿದ್ದು, ಅಂಥ ಆಸ್ವಾದನ ಪದ್ಧತಿ ಮತ್ತು ವಿಮರ್ಶಾ ಪದ್ಧತಿಗಳು ಕನ್ನಡದಲ್ಲಿ ಬೆಳೆದು ಬರಬೇಕಾಗಿದೆ.

ಇಂದು ಎಷ್ಟೇ ವ್ಯತ್ಯಾಸವಾಗಿದ್ದರೂ ಯಾದವಾಡ ಮಲಕಪ್ಪನ ರಂಗಪಠ್ಯ ನಮ್ಮ ಕಣ್ಣಮುಂದಿದೆ. ದುರ್ದೈವದ ಸಂಗತಿಯೆಂದರೆ ಅಪರಾಳ ತಮ್ಮಣ್ಣನ ಕರ್ನಾಟಕ ಸಂಗೀತನಿಷ್ಠ ಕೀರ್ತನಪಠ್ಯ ಬಹುಮಟ್ಟಿಗೆ ಮಾಯವಾಗಿದೆ. ಕುಲಗೋಡ ತಮ್ಮಣ್ಣನ ಕಾಲದ ವರೆಗೂ 'ಕೀರ್ತನಪಠ್ಯ'ವಾಗಿ ಸಂವಹನಗೊಳ್ಳುತ್ತಿದ್ದ ಅದು, ಮುಂದಿನ ತಲೆಮಾರುಗಳಲ್ಲಿ ಹಾಡುವ ಬ್ರಾಹ್ಮಣ ಮಹಿಳೆಯರ 'ಪಾರಾಯಣಪಠ್ಯ'ವಾಯಿತು. ಇನ್ನೂ ಮುಂದೆ ಈ ಪ್ರದೇಶದಲ್ಲಿ 'ರಂಗಪಠ್ಯ'ವಾಗುವ ಮೂಲಕ ಕೌಜಲಗಿ ನಿಂಗವ್ವನಂಥ ಶೂದ್ರರ ಕೈಸೇರಿ ಮಡಿವಂತಿಕೆ ಕಳೆದುಕೊಂಡ ಕಾರಣ, ಅದನ್ನು ನೈಷ್ಠಿಕ ಬ್ರಾಹ್ಮಣರು ಮನೆಯಿಂದ ಹೊರಗೆ ತಳ್ಳಿ, ತಮ್ಮ ಸಮೀಪದ ಗೋಕಾವಿಯ ಅನಂತಾದ್ರೀಶನ 'ವೆಂಕಟೇಶಪಾರಿಜಾತ'ವನ್ನು ಬರಮಾಡಿಕೊಂಡರು. ಹೀಗಿದ್ದೂ ಅಪರಾಳ ಪಾರಿಜಾತದ ಹಾಡುಗಾರಿಕೆಯನ್ನು ಬ್ರಾಹ್ಮಣ ಮಹಿಳೆಯರು ಇನ್ನೂ ಉಳಿಸಿಕೊಂಡಿರುವರೆಂದೂ, ಅದನ್ನು ಬಳಸಿಕೊಂಡು ತಾವು 'ಗೀತ-ಪಾರಿಜಾತ' ರಚಿಸಿರುವುದಾಗಿಯೂ ಹೇಳುವ ಶ್ರೀ ರಾಮಚಂದ್ರ ಕಿತ್ತೂರ ಅವರ ಮಾತುಗಳು ಮನನೀಯವಾಗಿವೆ.

ಈ ಕೃತಿಗೆ ಸಾಹಿತ್ಯ, ಅಧ್ಯಾತ್ಮ ಎಂಬ ಎರಡು ಮುಖಗಳಿವೆ. ಈ ವರೆಗೆ ವಿವೇಚಿಸಿದುದು ಸಾಹಿತ್ಯಮುಖ. ಇದರಾಚೆ ಇರುವುದೇ ನಿಜವಾದ ಮುಖ, ಆಧ್ಯಾತ್ಮಿಕ ಮುಖ. ಇಲ್ಲಿ ರುಕ್ಮಿಣಿ ಲಕ್ಷ್ಮೀತತ್ವ, ಸತ್ಯಭಾಮೆ ಭಕ್ತತತ್ವ. ಯಾವಾಗಲೂ ಎದೆಯಲ್ಲಿರುವ ಲಕ್ಷ್ಮಿ ದೇವನಿಂದ ಅಗಲದ ಅವಿನಾಭಾವಿ. ಭಕ್ತ ಅಹಂಕಾರದಿಂದ ಅಗಲಿ ಪಶ್ಚಾತ್ತಾಪ ಪಟ್ಟರೆ, ದೇವನೇ 'ಇದು ಏನು ಸೋಜಿಗವೋ ಎನ್ನ ಜೀವ ಮರುಗುತಿದೆ' ಎಂದು ಕರುಣೆ ತೋರಿ, ತನ್ನತ್ತ ಮಾಡಿಕೊಳ್ಳುವ ದಯಾಮಯಿ. ಈ ತತ್ವದ ಸುತ್ತ ಈ ಕಥೆ ಬೆಳೆದಿದೆ, ಪ್ರತಿಮಾ ವಿಧಾನದಲ್ಲಿ ಮೈತಳೆದಿದೆ.

೪. ಭವಿಷ್ಯದಲ್ಲಿ ಇನ್ನೊಂದು ಪಠ್ಯ

೧೨೫ ವರ್ಷಗಳ ಅವಧಿಯಲ್ಲಿ ಪ್ರತಿಯೊಂದು ಕಂಪನಿ, ಪ್ರತಿಯೊಂದು ಪ್ರಯೋಗ ಶ್ರೀಕೃಷ್ಣ ಪಾರಿಜಾತಕ್ಕೆ ಮರುಹುಟ್ಟು ನೀಡುತ್ತ ಬಂದಿವೆ. ಇವೆಲ್ಲ ಸಾಂದರ್ಭಿಕ. ಆದರೆ ಈ

ರಂಗಕಲೆಯನ್ನು ಮುರಿದು ಕಟ್ಟುವ ಅವಶ್ಯಕತೆಯನ್ನು ಮನಗಂಡು, ಕಿತ್ತೂರಿನಲ್ಲಿ ಶ್ರೀ ಬಸಲಿಂಗಯ್ಯ ಹಿರೇಮಠ ಮೊದಲಾದವರು ಪ್ರಜ್ಞಾಪೂರ್ವಕ ಮಾಡಿದ ಕಾಯಕಲ್ಪ ತುಂಬ ಮಹತ್ವದ್ದಾಗಿದೆ. ಶ್ರೀಕೃಷ್ಣಪಾರಿಜಾತದ ಆರಂಭದಲ್ಲಿ ಬರುವ ಗೊಲ್ಲತಿ-ಗೋಪಾಲ ಸನ್ನಿವೇಶವು ಮುಖ್ಯ ಕಥೆಗೆ ಸಂಬಂಧವಿಲ್ಲದ ತೇಪೆಯಂತೆ ಕಾಣುತ್ತಿದ್ದಿತು. ಈ ದೋಷವನ್ನು ಗಮನಿಸಿ, ಇದು ಗೃಹಸ್ಥಪೂರ್ವಜೀವನದಲ್ಲಿ ಕೃಷ್ಣನು ಗೊಲ್ಲತಿಯೊಂದಿಗೆ ನಡೆಸಿದ ಪ್ರಣಯ ಚೇಷ್ಟೆಯೆಂಬಂತೆ ಶ್ರೀ ಬಸಲಿಂಗಯ್ಯನವರು ರೂಪಿಸಿದುದು ತುಂಬ ಯೋಗ್ಯವೆನಿಸಿದೆ. ಇದಲ್ಲದೆ ಹಾಡಿನಲ್ಲಿ ಸಿಗುವ ಸೂಚನೆಯನ್ನವಲಂಬಿಸಿ ಗೊಲ್ಲತಿಯೊಂದಿಗೆ ಗೆಳತಿಯರನ್ನು ಸೃಷ್ಟಿಸುವ ಮೂಲಕ ರಂಗಭೂಮಿಗೆ ಬಣ್ಣ ತುಂಬಿದ್ದಾರೆ. ಇದೆಲ್ಲಕ್ಕಿಂತ ಎಲ್ಲ ಪಾತ್ರಗಳಿಗೆ ಕಡ್ಡಾಯವಾಗಿಸಿದ ಕುಣಿತದಿಂದಾಗಿ ಸ್ಥಗಿತ ರಂಗಭೂಮಿಗೆ ಒಂದು ಚಲನೆ ಪ್ರಾಪ್ತವಾಗಿದೆ. ಈ ಬದಲಾವಣೆಗಳಿಗಾಗಿ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ.

ಹೀಗಿದ್ದೂ, ಮಾಡಲೇಬೇಕಾದ ಇನ್ನೂ ಕೆಲವು ಬದಲಾವಣೆಗಳಲ್ಲಿ ಮುಖ್ಯವಾದುದು ದೂತಿಪಾತ್ರ. ಹೆಣ್ಣಿನ ನಡತೆ, ಗಂಡಿನ ವೇಷ ಕಾರಣವಾಗಿ ಇದು ತುಂಬ ಆಭಾಸ ಹುಟ್ಟಿಸುತ್ತದೆ. ಕಾವ್ಯಪಠ್ಯವನ್ನು ರಂಗಪಠ್ಯವನ್ನಾಗಿ ರೂಪಿಸುವಲ್ಲಿ ಸೃಷ್ಟಿಯಾದ ಆಭಾಸವಿದು. ಕಾವ್ಯದಲ್ಲಿ ಸಂಪರ್ಕವ್ಯಕ್ತಿಯಾಗಿ ದೂತಿ ಇದ್ದಾಳೆ. ಆಟದಲ್ಲಿ ಭಾಗವತ ಇರಬೇಕಾಗುತ್ತದೆ. ಕಾವ್ಯವನ್ನು ಆಟವಾಗಿ ಪರಿವರ್ತಿಸುವಲ್ಲಿ ಆ ದೂತಿ, ಈ ಭಾಗವತ ಇಬ್ಬರನ್ನೂ ಒಂದುಗೂಡಿಸಿಬಿಟ್ಟರು. ಇನ್ನು ಮೇಲೆ ಭಾಗವತನೆಂಬ ಪುರುಷಪಾತ್ರ, ದೂತಿಯೆಂಬ ಸ್ತ್ರೀಪಾತ್ರಗಳನ್ನು ಸ್ವತಂತ್ರವಾಗಿ ಸೃಷ್ಟಿಸಿ, ಅವರವರ ಪಾಲಿನ ಕರ್ತವ್ಯಗಳನ್ನು ಅವರವರಿಗೆ ವಹಿಸಿಕೊಡಬೇಕು. ಇದು ಪರಿಷ್ಕರಿಸಲೇಬೇಕಾದ ವಿಷಯ. ಆರಂಭದಲ್ಲಿ ಬರುವ ಗೊಲ್ಲತಿಯ ಹೆಸರು ರಾಧೆ ಎಂಬುದಕ್ಕೆ ಕಥೆಯಲ್ಲಿ ಸೂಚನೆಗಳಿರುವುದರಿಂದ, ಆಕೆ ಕೃಷ್ಣನ ಪ್ರಿಯಸಖಿಯಾಗಿರುವುದರಿಂದ ಇನ್ನು ಮೇಲೆ ನೇರವಾಗಿ ಆ ಹೆಸರನ್ನೇ ಬಳಸುವುದು ಸೂಕ್ತ. ಹೂವಿಗಾಗಿ ಕಾದಾಡಿದ ಸತ್ಯಭಾಮೆ ಸೋತು ಶರಣಾಗುತ್ತಾಳೆ. ಇಷ್ಟಾದ ಮೇಲೆಯೂ ಹೂವು ರುಕ್ಮಿಣಿಯ ಹತ್ತಿರ ಉಳಿಯುವುದು ಸತ್ಯಭಾಮೆಗೆ ಅನ್ಯಾಯ. ಈಗ ರುಕ್ಮಿಣಿ ಪ್ರೀತಿ ತೋರಿಸುತ್ತ ತನ್ನ ತುರುಬಿನಿಂದ ತಂಗಿಯ ತುರುಬಿಗೆ ಹೂ ಮುಡಿಸುವ ದೃಶ್ಯ ಯೋಜಿಸಿದರೆ ಕಥಾವರ್ತುಲ ಪೂರ್ಣಗೊಳ್ಳುತ್ತದೆ.

ಇಂದು ರಂಗಭೂಮಿ ಹಲವು ರೀತಿಯಲ್ಲಿ ಬೆಳೆದಿದೆ. ಈ ಆದರ್ಶದಲ್ಲಿ ಸನ್ನಿವೇಶಗಳ ಕ್ರಮ-ಪ್ರಮಾಣ, ಹೊಸ ಸನ್ನಿವೇಶಗಳ ಸೃಷ್ಟಿ, ಅಗತ್ಯ ಹಾಡುಗಳ ಆಯ್ಕೆ, ತರ್ಕಬದ್ಧ ಮಾತುಗಾರಿಕೆ, ಹಾವ-ಭಾವ, ರಂಗಸಜ್ಜಿಕೆ ಇತ್ಯಾದಿಗಳಲ್ಲಿ ಪರಿಷ್ಕರಣ ಕಾರ್ಯ ನಡೆಯಬೇಕು. ಗಿಳಿಯ ದೌತ್ಯ, ಕೃಷ್ಣ-ರುಕ್ಮಿಣಿಯರ ಪಗಡೆಯಾಟಗಳಂಥ ಪ್ರಸಂಗಗಳನ್ನು ಬಳಸಿ, ಸರಸ ದಾಂಪತ್ಯವನ್ನು ಇನ್ನೂ ಜೀವಂತಗೊಳಿಸಬೇಕು.

ಈ ಆಟದ ಘಟನೆ ಜರುಗಿದುದು ಮಥುರಾ ನಗರದಲ್ಲಿ. ಅಲ್ಲಿಯ ಗೊಲ್ಲ-ಗೊಲ್ಲತಿಯರ ಪ್ರಾದೇಶಿಕ ದೃಶ್ಯ ಪದೇ ಪದೇ ಮರುಕಳಿಸುವಂತೆ ಮಾಡಬೇಕು. ಶ್ರೀಕೃಷ್ಣಪಾರಿಜಾತ ಒಂದು ಹೂವಿನ ಕಥೆಯಾಗಿರುವುದರಿಂದ ಅವರ ಪ್ರಸ್ತಾಪ-ಪ್ರವರ್ತನ

ಮತ್ತೆ ಮತ್ತೆ ಕಾಣಿಸಿಕೊಳ್ಳಬೇಕು. ಶ್ರೀಕೃಷ್ಣಪಾರಿಜಾತವು ನಾಟಕದಲ್ಲಿ ನಾಟಕವನ್ನೊಳಗೊಂಡಿದೆ. ಅಂದರೆ ಈ ನಾಟಕದಲ್ಲಿ ಕೃಷ್ಣನಾಗಿ ನಟಿಸುವವನೇ ಕೊರವಂಜಿಯಾಗಿಯೂ ನಟಿಸುತ್ತಾನೆ. ಈಗ ಸಂಸಾರ ನಾಟಕದಲ್ಲಿ ಸಾಮಾಜಿಕತೆ ಸೇರಿಕೊಳ್ಳುತ್ತದೆ. ಇದು, ಕೃಷ್ಣಪಾರಿಜಾತವೆಂದರೆ ಕೊರವಂಜಿ ದೃಶ್ಯವೆಂಬಂತೆ ಮಹತ್ವ ಪಡೆದಿದ್ದು, ಸುಧಾರಣಾ ಸಂದರ್ಭದಲ್ಲಿ ಇದನ್ನು ಇನ್ನೂ ಅದ್ಭುತವಾಗಿ ಬೆಳೆಸಬಹುದಾಗಿದೆ.

ರಂಗಪಾರಿಜಾತವು ಕೆಲವೊಮ್ಮೆ ಶೃಂಗಾರ ಹಾಸ್ಯ ಅಧ್ಯಾತ್ಮ ಸಂಗೀತಗಳನ್ನು ಹಿಗ್ಗಾಮುಗ್ಗಾ ಎಳೆದಾಡುವ ಸಂಭಾಷಣೆಯೆನಿಸಿ, ಕಲಾಪ್ರಮಾಣಬದ್ಧತೆಯನ್ನು ಕಳೆದುಕೊಳ್ಳುತ್ತಲಿದೆ. ಈ ಎಲ್ಲ ಗುಣ-ದೋಷಗಳ ಹಿನ್ನೆಲೆಯಲ್ಲಿ ಪಾರಿಜಾತ ಸುಸಂಬದ್ಧ ಕಲೆಯಾಗಿ ಆಕಾರ ಪಡೆಯಬೇಕಾಗಿದೆ. ಕಂಪನಿಗಳ ಮಾಲಿಕರು, ಆಧುನಿಕ ರಂಗತಜ್ಞರು ಸೇರಿ ಈ ಕೆಲಸವನ್ನು ಪೂರೈಸಿದರೆ. ಜನಪದ ಯಾವ ರಂಗಕೃತಿಗೂ ಕಡಿಮೆಯಿಲ್ಲದ ಘನತೆ-ಆಕರ್ಷಣೆ ಇದಕ್ಕೆ ಪ್ರಾಪ್ತವಾಗುತ್ತದೆ. ಹೀಗೆ ಮಾಡುವಾಗ ದ್ವೈತ ಸಿದ್ಧಾಂತದ ಕೇಂದ್ರ ತಪ್ಪದಂತೆ ನೋಡಿಕೊಳ್ಳುವುದು ಅವಶ್ಯವಿದೆ.

ಈ ಕೆಲಸಕ್ಕೆ ಒಬ್ಬ ಪ್ರಾಮಾಣಿಕ, ಆಧುನಿಕ ರಂಗತಜ್ಞ ಬೇಕು. ಕನಸುಗಾರನಾದ ಅವನು ತನ್ನ ಅಭ್ಯಾಸ-ಅನುಭವಗಳ ಬಲದಿಂದ ಈ ರಂಗಪಠ್ಯವನ್ನು ಕಲಾಕೃತಿಯಾಗಿ ರೂಪಿಸುವ, ರಂಗಪ್ರಯೋಗವನ್ನು ಅರ್ಥಪೂರ್ಣವಾಗಿ ಪ್ರದರ್ಶಿಸುವ, ಜನತೆ-ವಿದ್ವಜ್ಜನತೆಯ ಹತ್ತಿರ ಒಯ್ದು ಅವರ ಪ್ರತಿಕ್ರಿಯೆಗೆ ತಕ್ಕಂತೆ ಸರಿಯಾದ ದಿಕ್ಕಿನಲ್ಲಿ ಅದನ್ನು ಅಭಿವೃದ್ಧಿಪಡಿಸುವ, ಮಕ್ಕಳಿಗೆ-ಆಸಕ್ತರಿಗೆ ರಂಗಶಿಕ್ಷಣ ತರಬೇತಿ ನೀಡುವ ವ್ಯಕ್ತಿಸಂಪನ್ನತೆ ಅವನಿಗೆ ಬೇಕು. ‘ಶ್ರೀಕೃಷ್ಣಪಾರಿಜಾತ ಮಹಾಪರಿಷತ್ತು’ ಹೆಸರಿನಲ್ಲಿ ಎಲ್ಲ ಕಂಪನಿಗಳನ್ನು ಸಂಘಟಿಸಿ, ಅವು ಆರ್ಥಿಕವಾಗಿ ಕುಸಿಯದಂತೆ, ವೃದ್ಧಾಪ್ಯದಲ್ಲಿ ಕಲಾವಿದರು ಅನಾಥರಾಗದಂತೆ ನೋಡಿಕೊಳ್ಳಬೇಕು. ಕಲಾವಿದರು, ಕಂಪನಿ, ಸಮಾಜ ಮತ್ತು ಸರಕಾರಗಳ ಮಧ್ಯೆ ಸರಿಯಾದ ತಿಳಿವಳಿಕೆ ಬೆಳೆಯುವಂತೆ ವ್ಯವಸ್ಥೆ ಮಾಡಬೇಕು. ಇದಲ್ಲದೆ ಇಂದು ರಂಗಕಲೆಯೆನ್ನುವುದು ದುಡಿಯಲಾರದ ಸೋಮಾರಿಗಳ, ಲಹರಿವ್ಯಕ್ತಿಗಳ ಕ್ಷೇತ್ರವೆಂಬ ಅಪಖ್ಯಾತಿಗೆ ಗುರಿಯಾಗಿದೆ. ವಿದ್ಯಾವಂತರು, ಸರಕಾರಿ-ಸಾರ್ವಜನಿಕ ವೃತ್ತಿನಿರತರು, ಪ್ರತಿಷ್ಠಿತರು ನಿರ್ದೇಶಕರಾಗಿ, ರಂಗಕರ್ಮಿಗಳಾಗಿ, ಪಾತ್ರಧಾರಿಗಳಾಗಿ ಸೇರಿಕೊಂಡು, ಆ ಅಪಖ್ಯಾತಿಯನ್ನು ನಿವಾರಿಸಬೇಕಾಗಿದೆ. ಆಗ ಇದಕ್ಕೆ ರಾಷ್ಟ್ರೀಯ, ಅಂತರ್ರಾಷ್ಟ್ರೀಯ ಪ್ರಸಿದ್ಧಿ ಪ್ರಾಪ್ತವಾಗುತ್ತದೆ.

ಶ್ರೀಕೃಷ್ಣಪಾರಿಜಾತ ಮಹಾಲಿಂಗಪುರ ಪ್ರದೇಶದಲ್ಲಿ ಹುಟ್ಟಿದ ಕಲಾ ಶಿಶು. ಕಲಾ ಜಗತ್ತಿಗೆ ಇದು ನಿಮ್ಮ ಕಾಣಿಕೆ. ತನ್ನ ಗುಣಾತ್ಮಕ ಅಂಶದಿಂದ ಇದು ಬೆಳೆಯುತ್ತಲಿದ್ದರೂ ಪೂರಕವಾಗಿ ನಿಮ್ಮ ನೆರವು ಅಗತ್ಯ. ಮಹಾಲಿಂಗಪುರದ ಜನತೆ ಈ ದಿಕ್ಕಿನಲ್ಲಿ ದುಡಿಯುವರೆಂದು ಆಶಿಸುತ್ತೇನೆ.

ಡಾ. ಎಂ. ಎಂ. ಕಲಬುರ್ಗಿ : ೯ ನೇ ಕ್ರಾಸ್, ಕಲ್ಯಾಣನಗರ, ಧಾರವಾಡ - ೫೮೦ ೦೦೭

ಕವನಾ ಬರೀತ್ಯಾರಂತ ಕವನಾ, ಅವನವ್ವನ ಕವನಾ!

ಬಸವರಾಜ ಸಾದರ

ಇದು ಖರೇವಂದ್ರೂ ನಡದದ್ದಽ ಐತ್ಯೋ, ಇಲ್ಲಾ ಹುಟ್ಟಿಸ್ಗೊಂಡ್ ಹೇಳಿದ್ದೈತ್ಯೋ ಆ ಮಹಾಕವಿಗೇ ಗೊತ್ತು! ಆದ್ರ ಗುಲಬರ್ಗಾದಾಗ ಎಲ್ಲ್ಯರ ಒಂದ್ ಕವಿಗೋಷ್ಠಿ ನಡಿಯೂದೈತಿ ಅಂತ ಸುದ್ದಿ ಸುರೂವಾದ್ ಕೂಡ್ಲೆ, ಅದನ್ನ ಕೇಳಿದವ್ರು ಮಜಾ ಮಾಡ್ಕೊಂತ —'ಕವನಾ ಬರೀತ್ಯಾರಂತ ಕವನಾ, ಅವನವ್ವನ ಕವನಾ'— ಅಂತ ಒಂದ್ ನಮೂನಿ ಪ್ರಾಸದ ಮಾತು ಒಗದಽ ಬಿಡ್ತಾರು. ಇದು ಅಷ್ಟಕ್ಕಽ ಮುಗಿಯೂದುಲ್ಲ; ಹಂಗಽ ಇದರ ಹಿಂದಿಂದ ಆ ಕವನದ ಒಂದ್ ಸ್ಟಾಂಜಾನೂ ಹೇಳೇ ಬಿಡ್ತಾರ—

> ಕವನಾ ಬರೀತ್ಯಾರಂತ ಕವನಾ / ಅವನವ್ವನ ಕವನಾ—
> ರಾತ್ರಿಯೆಲ್ಲಾ ಮಾಡಬಾರದ್ದ ಮಾಡಿ
> ತಿನಬಾರದ್ದು ತಿಂದು / ಕುಡೀಬಾರದ್ದು ಕುಡದು
> ಮತ್ತ ಮುಂಜೇಲೆದ್ದು / ಛಂದನ ಕವನಾ ಬರೀತ್ಯಾರಂತ ಕವನಾ
> ಅವನವ್ವನ ಕವನಾ!!

—ಹಿಂಗ್ ಸುರೂವಾಗಿ, ಇದಽ ರೀತಿಯೊಳಗಽ ಸಾಗೂ ಈ ಕವನದ ಪ್ರತಿಯೊಂದ್ ಸ್ಟಾಂಜಾದಾಗೂ ಕೆಲವು ಕವಿಗೋಳು ಮಾಡೂ ದಗಲ್‌ಬಾಜಿ, ಅಡದಂದೆ, ಅಡ್ನಾಡಿ ಕೆಲಸಾನ ಬಿಡಿಬಿಡಿಸಿ ಹೇಳೂದರ ಕೂಡಽ, ಕಡೇ ಸಾಲಿನ್ಯಾಗ ತಪ್ಪದಽ 'ಕವನಾ ಬರೀತ್ಯಾರಂತ ಕವನಾ, ಅವನವ್ವನ ಕವನಾ'— ಅನ್ನೂ ಪಲ್ಲವಿ ಇರತೈತಿ. ಈ ಕವನಾ ಹೆಂಗರ ಇರ್ಲಿ, ಆದ್ರ ಕವನದ ಎಲ್ಲಾ ಸ್ಟಾಂಜಾದ ಕಡೇಕ ಬರೋ 'ಕವನಾ ಬರೀತ್ಯಾರಂತ ಕವನಾ, ಅವನವ್ವನ ಕವನಾ'— ಅನ್ನೂ ಮಾತೇನೈತೆಲ್ಲಾ, ಅದು ಕಿಪ್ಪಿಗೆ ಬಿದ್ದಕೂಡ್ಲೇ ಮನಸಿನ್ಯಾಗ ಒಂದ್ನಮೂನಿ ಕಟ್ಟಾಡ್ಸಿದೆಂಗ್ ಆಕ್ಕೈತಿ. ಹಂಗಽ ಒಂದೀಟು ವಿಚಾರಾ ಮಾಡ್ಕೊಂತ ಹೊಂಟಂಗ ಈ ಕವನದ ಕವಿ ಖರೇ ಏನಽ ಒಂದ್ ಸತ್ಯಾ ಹೇಳಾಕ್ಹತ್ಯಾನಲ್ಲ ಅನ್ನೂದು ಸಟಕ್ಕಽ ಹೊಳೀತೈತಿ.

ಈ ಕವನಾನ ಯಾರು? ಯಾವಾಗ? ಎಲ್ಲೆ? ಯಾರಿಗೆ? ಹೇಳಿದ್ರು ಅನ್ನೂದುನ್ನ ಹುಡುಕ್ಕೊಂತ ಹೊಂಟ್ರ ಅದರ ನೆಲೀ ತಿಳ್ಯಾಕಽ ಸಾಧ್ಯಿಲ್ಲ! ಒಂದ್ ಅಂದಾಜಿನ ಮ್ಯಾಲ ಎಲ್ಲಾರೂ ಹೇಳೂ ಕತೀ ಅಂದ್ರ, ಹತ್ತ-ಹನ್ನೆರ್ಡ ವರಸದ ಹಿಂದ ಗುಲಬರ್ಗಾದಾಗ ಒಂದ್ ಕವಿಗೋಷ್ಠಿ ಇಟಗೊಂಡಿದ್ರಂತ. ಮೂವತ್ತ-ನಲವತ್ತ ಮಂದಿ ಕವಿಗೋಳು ತಮ್ಮ ತಮ್ಮ ಕವನಾ ಓದಿ ಕುಂತಮ್ಯಾಲ, ಕಟ್ಟಕಡೇಕ ಎದ್ದ ಒಬ್ಬಾವ್ನ ಮಹಾಕವಿ ಈ ಕವನಾನ ಭಾಳ ಛಂದಾಗಿ ವಾಚನಾ ಮಾಡಿದ್ನಂತ. ಅವ್ನನ ಕವನಾ ಕೇಳಿದ ಅವತ್ತಿನ ಭಾಳಮಂದಿ ಕವಿಗೋಳು ಸಪ್ಪಳಾ ಮಾಡಲಾರ್ದಽ ಒಬ್ಬೊಬ್ರಽ,ಒಬ್ಬೊಬ್ರಽ ಹಗೂರ್ಕಽ ಎದ್ದು ಜಗಾ ಖಾಲಿ ಮಾಡಿದ್ರಂತ. ಇದು ಈ ಕವನದ ಊಹ್ಯೇತಿಹಾಸ. ಅಲ್ಲಿಂದ ಸುರೂವಾಗಿರೋ ಈ ಕವನದ ಕೀರ್ತಿ ಹಂಗಽ ಹರದಾಡ್ಕೊಂತನಽ ಬಂದೈತಿ: ಇವತ್ತಿಗೂ ಅದು ಅಷ್ಟಽ ಚಾಲ್ತಿಯೊಳ್ಗೂ ಐತಿ.

ಕವಿತಾದ ಇತಿಹಾಸ, ಮತ್ತ ಅದು ಖರೇವೋ-ಸುಳ್ಳೋ? ಅನ್ನೂ ಸಂಶೋಧನಾದ ಮಾತು ಏನರಽ ಇರ್ಲಿ, ಆದ್ರ ಕವನದ ಹಿಂದ್ ಇರೋ ಆ ಕವಿಯ ಕಾಳಜಿ ಏನೈತೆಲ್ಲಾ ಅದು

ಮಾತ್ರ ಮೆಚಗೊಳ್ಳುವಂತಾದ್ದು. ನಮ್ಮ ನಾಡಿನ ಸಾಹಿತ್ಯ ಪರಂಪರೆಯೊಳಗ (ಪರದೇಶದಾಗೂ ಸೈತ) ಭಾಳ ಹಿಂದಿನಿಂದನಽ ಒಂದ್ ಅಗದೀ ಮುಖ್ಯ ವಿಷಯ ಚರ್ಚಾದಾಗ ಐತಿ. ಅದು ಏನಪಾ ಅಂದ್ರ –ಕವಿತಾ ಚೊಲೋ ಇದ್ರ ಸಾಕೋ? ಇಲ್ಲಾ ಅದನ್ನ ಬರದಂತಾ ಕವೀನೂ ಚೊಲೋ ಇರಬೇಕೋ?– ಅನ್ನೂದು. ಒಂದಷ್ಟ ಮಂದಿ –'ಕವಿ ಆದಾವ್ನಾ ಹೆಂಗರಽ ಇರ್ಲಿ, ಅವನ ಕವನಾ ಚೊಲೋ ಇದ್ರ ಸಾಕು'– ಅನ್ನೊ ಥೇರಿಯವರು. ಇನ್ನೊಂದಿಷ್ಟ ಜನಾ,– 'ಕವನಷ್ಟಽ ಚೊಲೋ ಇದ್ರ ಹೆಂಗ್ರಿ? ಅದರ ಕವಿಯ ವ್ಯಕ್ತಿತ್ವಾನೂ ಚೊಲೋನಽ ಇರಬೇಕಕ್ಕೈತಿ'– ಅನ್ನೋ ವಾದದವ್ರು. ಕೆಟ್ಟ ನಡವಳಿಕಿ ಇರೂ ಕವಿ, ಚೊಲೋ ಕವನಾ ಬರದು, ತಾನು ಹೆಂಗಽ ಇದ್ರೂ, ಬ್ಯಾರೇದವ್ರಿಗೆ– 'ನೀವು ಮಾತ್ರ ಚೊಲೋ ಮನಸ್ಯಾ ರಾಗಿರ್ರೆಪಾ'– ಅಂತ ಉಪದೇಶಾ ಮಾಡಿದ್ರ ಹೆಂಗ್ರಿ? ಹಂಗ ಕವನದ ದ್ವಾರಾ ಉಪದೇಶಾ ಮಾಡೂ ಹಕ್ಕರಽ ಅವ್ನಗ ಎಲ್ಲಿಂದ ಬರತೈತ್ರಿ?'– ಅನ್ನೂದು ಈ ವಾದದ ಮಂದೀ ತರ್ಕ. ವಿಮರ್ಶಕರನ್ನವ್ರಿಗೆ ಈ ವಾದಾ ಏನರ ಒಪ್ಪಿಸಿ ಬಿಟ್ರ, ಅವರಂತೂ 'ಹಂಗ್ ಇದ್ರೂ ಓಕೆ, ಹಿಂಗ್ ಇದ್ರೂ ಓಕೆ'– ಅಂತ ಅಡ್ನಗ್ಯಾಡಿದೀಪನ್ಯಾಯದ ಪ್ರಾಯೋಗಿಕ ವಿಮರ್ಶೇನ ಜಡದಽ ಬಿಡ್ತಾರ. ಆದ್ರ ಒಂದ್ ಸವ್ನತೂಕದ ಮಾತು ಹೇಳೂವಾದ್ರ– ಮದ್ಲ ಕವಿ ಚೊಲೋ ಇರಬೇಕು, ಅವ್ನನ ವ್ಯಕ್ತಿತ್ವಾನೂ ಚೊಲೋ ಇರಬೇಕು. ಹಂಗಿದ್ರ ಮಾತ್ರ ಅವ್ನಾ ತನ್ನ ಕವನದಾಗ ಚೊಲೋದನ್ನ ಹೇಳಾಕ ಸಾದ್ಧಿರತೈತಿ. ಮತ್ತ ಹಂಗ್ ಹೇಳಾಕ ಅವ್ನಗ ನೈತಿಕ ಹಕ್ಕೂ ಬರತೈತಿ– ಅನ್ನೂದು ವಾಜಮಿ ಆಗಬೌದು. ಚೊಲೋತಾಗೇ ನಡದು, ಚೊಲೋ ಕವನಾ ಬರಿಯೋ ಕವಿಗಳಿಗೆ ಯಾವಾಗ್ಲೂ ದೊಡ್ಡ ಬೆಲೀ ಇರತೈತಿ ಅನ್ನೂದು ಸುಳ್ಳಲ್ಲ. ಗಾಂಧೀ ಮುತ್ತ್ಯಾನ 'ದಾರಿ ಮತ್ತ ಗುರಿ ಎರ್ಡೂ ಚೊಲೋನಽ ಇರಬೇಕು'– ಅನ್ನೋ ಮಾತು ಇಲ್ಲೆ ನೆನಪಕ್ಕೈತಿ. ಹಿಂತಾ ನಡತಿ ಮತ್ತ ಪೆನ್ನು ಎರ್ಡೂ ಇರೋ ಕವಿಗಳು ಬೇಕಾದಷ್ಟ ಮಂದಿ ಅದಾರನ್ನೂದು ಸುಳ್ಳಲ್ಲಾದ್ರೂ, ಅಡ್ನಾಡಿ, ಅಡದಂದೆ ಮಾಡೂ ಕವಿಗೋಳೂ ಅದಾರನ್ನೂದೂ ಸುಳ್ಳಲ್ಲ. ಹಿಂತವ್ರು ಬದುಕೂದಽ ಒಂದ್ ರೀತಿ, ಬರಿಯೂದಽ ಮತ್ತೊಂದ ರೀತಿ. ಇಂಥಾ ಜಾತಿ ಕವಿಗೋಳ್ನಽ ಭಾಳ ಮಂದೀನ್ನ ನೋಡಿದೆಂಗ ಕಾಣತೈತಿ ನಮ್ಮ ಗುಲಬರ್ಗಾದ ಆ ಮಹಾಕವಿ. ಹಿಂಗಾಗೇ ಅವ್ನಾ ಹಂತಾ ಕವಿಗೋಳ ಅಡ್ಡಬೇರ್ನಽ ಜಾಲಾಡಿ ಬಿಟ್ಟಾನ– 'ಕವನಾ ಬರೀತ್ಯಾರಂತ ಕವನಾ, ಅವನವ್ವನ ಕವನಾ'– ಅಂತ.

ಈ ಕವನಾ ಬರದು ಓದಿದ ಆ ಮಹಾಕವಿ, ಬರೇ ಕವಿ ಅಷ್ಟಽ ಅಲ್ಲ; ಕವಿಗಳ್ನ, ಅವರ ಕವನಗಳ್ನ ಡಿಸೆಕ್ಟ ಮಾಡೂ ಮಹಾವಿಮರ್ಶಕನೂ ಆಗ್ಯಾನ. ಇವನಿಂದ ನಮ್ಮ ಕನ್ನಡ ವಿಮರ್ಶಕರನ್ನಾವ್ರೂ ಕಲಿಯೂದು ಭಾಳ ಐತಿ ಅನಸ್ತೈತಿ.

ಲೆಕ್ಕ ಸಿಗಲಾರದಷ್ಟಿರೋ ನಮ್ಮ ಕನ್ನಡ್ದ ಕವಿಗಳೊಳಗ ಬೇಕಾದಷ್ಟ ಮಂದಿ ಚೊಲೋ ಕವಿಗಳು ಅದಾರ; ಚೊಲೋ ಕವನಾನೂ ಬರದಾರ. ಆದ್ರ ಚೊಲೋ ಚೊಲೋ ಕವನಾ ಬರೆದ ಅಡ್ನಾಡಿ ಕವಿಗೋಳೂ ಭಾಳ ಅದಾರ. ಹಿಂತವ್ರು, ನಮ್ಮ ಆ ಗುಲಬರ್ಗಾದ ಮಹಾಕವಿಯ—– 'ಕವನಾ ಬರೀತ್ಯಾರಂತ ಕವನಾ, ಅವನವ್ವನ ಕವನಾ' ಅನ್ನೊ ಮಾತ್ನ ಒಂದ್ ಸರ್ತೆ ಆದ್ರೂ ಮೆಲಕ ಹಾಕೂದು ಭಾಳ ಚೊಲೋ!

● ●

ಡಾ. ಬಸವರಾಜ ಸಾದರ : ಸಹಾಯಕ ಕೇಂದ್ರ ನಿರ್ದೇಶಕ, ಆಕಾಶವಾಣಿ, ಧಾರವಾಡ-೫೮೦ ೦೦೮

ಡೊಳ್ಳು ಹೋಗಿ ಬಾಲಾ ಬಂತು ಡುಂ...ಡುಂ...

ದಮಯಂತಿ ನರೇಗಲ್ಲ

ಮಕ್ಕಳ ನಾಟಕ

ಪಾತ್ರಗಳು : ಕೆಲವು ಮಂಗಗಳು –ಸಂಖ್ಯೆ ಹೆಚ್ಚಿದ್ದಷ್ಟೂ ಒಳ್ಳೆಯದು. ಕನಿಷ್ಠ ಐದಾದರೂ ಬೇಕು. ನಾಲ್ಕು ವ್ಯಕ್ತಿಗಳು, ಜನರ ದಂಡು.

ದೃಶ್ಯ : ೧

ರಂಗಮಂಚದ ಮಧ್ಯದಲ್ಲಿ ಒಂದು ದೇವಾಲಯದ ಪ್ರತೀಕವಿದೆ. ಅದರ ಮೇಲೆ ಅರ್ಧನಾರೀ ನಟೇಶ್ವರನಂತೆ ಅರ್ಧ ದೇವಾಲಯದ ಗೋಪುರ ಮತ್ತು ಉಳಿದರ್ಧ ಮಸೀದಿಯ ತರಹ ಗುಮ್ಮಟವಿದೆ. ಅದು ಒಂದು ಪ್ರತೀಕವಷ್ಟೇ. ಥರ್ಮೋಕೋಲ್ ಅಥವಾ ಬೇರೆಯಾವುದಾದರೂ ಸಾಧನದಿಂದ ಮಾಡಬಹುದು. ಅದರ ಸುತ್ತಲೂಅನೇಕ ಮಂಗಗಳು ಡೊಳ್ಳು ಬಾರಿಸುತ್ತ ಕುಣಿಯುತ್ತಿವೆ. ಯಾವ ಮಂಗಕ್ಕೂ ಬಾಲವಿಲ್ಲ.

ಮಂಗಗಳು : ಬಾಲಾ ಹೋಗಿ ಡೊಳ್ಳು ಬಂತು ಡುಂ... ಡುಂ... ಬಾಲಾ ಹೋಗಿ ಡೊಳ್ಳು ಬಂತು ಡುಂ... ಡುಂ...

ಹಿರಿಯ ಮಂಗ : ಏ ನಿಲ್ಲಿರ್‍ಯೋ... ಸ್ವಲ್ಪ ನಿಲ್ಲಿರ್‍ಯೋ... ನಾ ಹೇಳೂದರಽ ಕೇಳ್ರಿ... ಕುಣಿಯೋದು ನಿಲ್ಲಸರ್‍ಯೋ... ಕೇಳ್ರಿ ಇಲ್ಲೆ...

ಮಂಗಗಳು : (ಕಿವಿಗೊಡದೆ) ಬಾಲಾ ಹೋಗಿ ಡೊಳ್ಳು ಬಂತು ಡುಂ... ಡುಂ...

ಇನ್ನೊಂದು ಮಂಗ : ಪ್ರಭು ರಾಮಚಂದ್ರಾ, ನಿನ್ನ ಭಕ್ತರಾಗಿ ಏನು ಪಡಕೊಂಡಿವಿ ನೋಡು... ಮನೀ-ಮಾರು, ಗಿಡಾ-ಮರಾ ಎಲ್ಲಾ ಕಳಕೊಂಡು ಅನಾಥರಾದಿವಿ. ಈ ಮನಶ್ಯಾರು ನಮ್ಮ ಬಾಲಾ ಕತ್ತರಿಸಿ ಡೊಳ್ಳು ಕೊಟ್ಟು ಕೂಡಿಸಿದರು ನಮ್ಮ ಕೈಯಾಗ...

ಮತ್ತೊಂದು ಮಂಗ : ನೋಡು... ನೋಡು, ರಾಮಚಂದ್ರಾ, ನಮ್ಮ ಅವಸ್ಥೀ ನೋಡು. ಇಂಥಾ ಕಾಂಕ್ರೀಟು ಜಂಗಲ್ಲಿನ್ಯಾಗ ಇರೂ ಪಾಳಿ ಬಂದದ ನಮಗ... ಇಂಥಾ ಜಗತ್ತಿನ್ಯಾಗ ಬದಕಲಾರದಽ ಎಷ್ಟು ನಮ್ಮ ಬಂಧು ಬಳಗಾ ಎಲ್ಲಾ ನಾಶ ಆತು... ನಮ್ಮ ಸಣ್ಣ ಸಣ್ಣ ಮಕ್ಕಳು ವಿಲಿ-ವಿಲಿ ಒದ್ದಾಡಿ ಜೀವಾ ಬಿಟ್ಟವು.

ಒಂದು ಯುವಕ ಮಂಗ : ಏ ಹೋಗೋ ಅಜ್ಜಾ, ಎಷ್ಟು ಕೇಳಿಕೊಂಡರಽ ಏನು, ನಿನ್ನ ಪ್ರಭು ರಾಮಚಂದ್ರ ಏನು ಕೇಳತಾನ? ಅವ್ನಾ ನಮ್ಮ ಕಾಳಜೀ ಮಾಡತಿದ್ದರ ಹಿಂಗ್ಯಾಕ ಆಗತಿತ್ತು?

ಇನ್ನೊಂದು ಮಂಗ : ಹೌದು ಖರೇನಽ... ನೀ ಅನ್ನೂದೂ ಖರೇನಽ... ನಾವಽ ವಿಚಾರಾ ಮಾಡಬೇಕು... ಏನರಽ ಬದುಕೂ ಉಪಾಯಾ ಮಾಡಬೇಕು.

ಹಿರಿಯ ಮಂಗ : ಹೌದರ್‍ಯೋ ಮಕ್ಕಳಽ, ಆಗಿನಿಂದ ನಾನೂ ಅದನ್ನಽ ಹೇಳ್ಳಿಕ್ಕೆ ಹತ್ತೀನಿ... ಎಲ್ಲಾರೂ ಒಂದೊಂದು ಕಡೇ ತಲೀ ಹರಿಸಿದರ ಆಗೂದುಲ್ಲಾ... ಎಲ್ಲಾರೂ ಕೂಡೇ ವಿಚಾರಾ ಮಾಡಬೇಕು... ಬರ್ರಿ. ವಿಚಾರಾ ಮಾಡೂಣು...

ಎಲ್ಲರೂ ಅವನ್ನೇ ಅನ್ನುತ್ತ ಡೊಳ್ಳುಗಳನ್ನು ಕೆಳಗಿಟ್ಟು, ತಲೆ ಕೆರೆಯುತ್ತ ಕೂಡುವರು.

ಒಂದು ಮಂಗ : (ಜಿಗಿದಪ್ಪು) ಇವರ ಮನೀ-ತ್ವಾಟಾ, ಹೊಲಾ-ಗಿಲಾ ಎಲ್ಲಾ ಹಾಳು ಮಾಡಿದರ ಹ್ಯಾಂಗ?

ಹಿರಿಯ ಮಂಗ : ಏನು ತಲೀ ಇಲ್ಲದವನ ಹಾಂಗ ಮಾತಾಡತೀಯೋ? ಈಗ ಅವರು ಹಾಳು ಮಾಡಿದ್ದು ಸಾಲದೇನು? ನಾವೂ ಹಾಳು ಮಾಡಿದರಽ... ಅಲ್ಲಾ, ಎಲ್ಲಾ ಹಾಳ ಮಾಡಿದರ ನಾವ್ನರಽ ಉಳೀತೀವೇನು? ಏನು ತಿಂದು ಬದಕೂ ಅವರು ನೀವು?

ಇನ್ನೊಂದು ಮಂಗ : ಮತ್ತ ಮನಸ್ಯಾರ ಕಡೇ ಬಂದೂಕಾ-ಬಾಂಬು ಅವ... ಅವರು ನಮ್ಮನ್ನೆಲ್ಲಾ ಒಂದಽ ದಿನದಾಗ ಹೊಡದು ಹಾಕತಾರ... ಅಂಥಾವೆಲ್ಲಾ ನಡಿಯೂದುಲ್ಲಾ... ಬುದ್ಧೀ ಉಪಯೋಗಿಸಿ ಕೆಲಸಾ ಸಾಧಿಸಬೇಕು. ಹ್ನೂ... ವಿಚಾರಾ ಮಾಡ್ರಿ...

ಎಲ್ಲ ಮಂಗಗಳೂ "ಏನು ಮಾಡಬೇಕು... ವಿಚಾರಾ ಮಾಡ್ರಿ, ಏನು ಮಾಡಬೇಕು, ವಿಚಾರಾ ಮಾಡ್ರಿ" ಎಂದು ಅಂದುಕೊಳ್ಳುತ್ತ, ತಲೆ ಕೆರೆಯುತ್ತ, ಮೈ ಕೆರೆಯುತ್ತ, ಅತ್ತಿಂದ-ಇತ್ತ, ಇತ್ತಿಂದ-ಅತ್ತ ಓಡಾಡುತ್ತಿವೆ.

ಹಿರಿಯ ಮಂಗ : (ಒಮ್ಮಿಂದೊಮ್ಮೆಲೇ ಆನಂದದಿಂದ) ಹೊಳೀತು... ಉಪಾಯ ಹೊಳೀತು... (ಮೇಲೆದ್ದು ಜಿಗಿಯುವದು)

ಎಲ್ಲ ಮಂಗಗಳೂ 'ಹೊಳೀತು, ಉಪಾಯ ಹೊಳೀತು' ಎಂದು ಜಿಗಿಯುತ್ತ ರಂಗಮಂಚದ ಮೇಲೆ ಲಾಗ ಹಾಕುತ್ತ ಕುಣಿಯುತ್ತವೆ.

ಹಿರಿಯ ಮಂಗ : (ರೇಗಿ) ಏನು ಹೊಳೀತು...? ಏನು ಹೊಳೀತು, ಹೊಳೀತು ಅಂತ ಕುಣೀತೀರಿ? ಏನು ಉಪಾಯ ಹೊಳೀತು ನಿಮಗ? (ಒಂದು ಸಣ್ಣ ಮಂಗನಿಗ ತಲೆಗೆ ಪಟ್ಟನೆ ಹೊಡೆದು ನಿಲ್ಲಿಸಿ ಕೇಳುವದು.)

ಸಣ್ಣ ಮಂಗ: (ಅಳುದನಿಯಲ್ಲಿ) ಮತ್ತ ನೀನಽ ಹೇಳಿದೆಲ್ಲಾ ಅಜ್ಜಾ... ಉಪಾಯ ಹೊಳೀತು ಅಂತ...

ಹಿರಿಯ ಮಂಗ : ಮೂರ್ಖರ ತಂದು ...ನಾ ಹೇಳಿದೆ... ನೀವು ಕುಣೀಲಿಕ್ಕೆ ಹತ್ತಿದಿರಿ... ಅದು ಏನು ಅಂತ ತಿಳಕೊಳ್ಳೂ ಪುರಸತ್ತೂ ಇಲ್ಲಾ ನಿಮಗ... ಬರೇ ಮಂಗ್ಯಾನ ಹಾಂಗ ಕುಣದರಽ...? ಈಗ ಅದು ನಡಿಯೂದುಲ್ಲಾ... ಸ್ವಲ್ಪ ಮನಸ್ಯಾರ ಹಾಂಗ ವಿಚಾರಾ ಮಾಡಬೇಕಾಗತದ... ಅವರಿಗೆ ಬುದ್ಧೀ ಕಲಸಬೇಕು ಅಂದರಽ ಅವರ ಹಾಂಗಽ ವಿಚಾರಾ ಮಾಡಬೇಕಾಗತಽದ... ಕೂಡ್ರಿ ಎಲ್ಲಾರೂ...ನಾ ಹೇಳ್ತೀನಿ... ಏನು ಉಪಾಯಾ ಅಂತ... ಕೂಡ್ರಿ ಎಲ್ಲಾರೂ...

ಸಣ್ಣ ಮಂಗ: ಅಜ್ಜಾ, ಕೂತು ಯಾಕ ಕೇಳಬೇಕು? ಜಿಗದಾಡಕೋತ ಕೇಳಿದರ ನಡಿಯಂಗಿಲ್ಲಾ?

ಹಿರಿಯ ಮಂಗ : ಇಲ್ಲಾ, ಕೂತು ಲಕ್ಷ್ಯಗೊಟ್ಟು ಕೇಳಬೇಕು ನೀವೆಲ್ಲಾ... ಲಕ್ಷ್ಯಗೊಟ್ಟು ಕೇಳಿ ನಾ ಹೇಳಿಧಂಗಽ ಮಾಡಬೇಕು... ತಿಳೀತೇನು? ಒಂದೆಲ್ಲರಽ ತಪ್ಪ

ಮಾಡಿದಿರಿ ಅಂದರ ಕೆಲಸ ಕೆಟ್ಟ ಹೋಗತsದ... ...ಭಾರೀ ಚಾಲಾಕಿರ್ತಾರ ಈ ಮನಶ್ಯಾರು...

ಎಲ್ಲರೂ ಕೂಡಿ : ಏನಜ್ಜಾ, ಏನು ಮಾಡಬೇಕು? ಲಗೂನs ಹೇಳು. ನೀ ಹೇಳಿಧಂಗs ಮಾಡತೀವಿ... ಈ ಮನಶ್ಯಾರನs ಬಗ್ಗು ಬಡೀತೀವಿ.

ಹಿರಿಯ ಮಂಗ : ಹಗರಕ... ಹಗರಕ ಮಾತಾಡ್ರಿ... ಒದರಬ್ಯಾಡ್ರಿ ಹಂಗ...

ಒಂದು ಮಂಗ : ಏ ಅಜ್ಜಾ, ಅವರಿಗೆ ಕೇಳಿಸಿದರರs ಏನಾಗಬೇಕಾಗೇದ ಬಿಡು. ಅವರಿಗೆಲ್ಲ ನಮ್ಮ ಮಾತು ತಿಳೀತಾವ?

ಇನ್ನೊಂದು ಮಂಗ : ಹೌದ ನೋಡಲೇ, ದೇವರು ಅದೊಂದು ಘೋಲೋ ಮಾಡ್ಯಾನ... ಅವರ ಮಾತು ನಮಗ ತೀಳೀತಾವ, ನಮ್ಮ ಮಾತು ಅವರಿಗೆ ತಿಳಿಯೂದುಲ್ಲಾ...

ಹಿರಿಯ ಮಂಗ : ಹೌದ ಬಿಡು, ನೀ ಅನ್ನೂದೂ ಖರೇ ಅದ... ಏನಪಾ ಅಂದರs ನಾವು ಸುತ್ತಲಿದ್ದವರನೆಲ್ಲಾ ನೋಡಿ, ಕೇಳಿ ಕಲೀತೀವಿ. ಅವರಿಗೆಲ್ಲೆ ಗೊತ್ತದ ಅದು? ಅವರು ತಾವs ಶ್ರೇಷ್ಠಾ ಅಂತ ತಿಳಕೊಂಡಾರ, ಬ್ಯಾರೇ ಅವರಿಂದ ತಾವೇನೂ ಕಲೀಬೇಕಾಗಿಲ್ಲಾ ಅಂತ ತಿಳಕೊಂಡಾರ... ಮೂರ್ಖರು...

ಸಣ್ಣ ಮಂಗ: ಅರೇ ಅಜ್ಜಾ... ಈಗ ನೀನs ಅಂದಿ ಭಾಳ ಚಾಲಾಕ ಇದ್ದಾರ ಅವರು ಅಂತ... (ಮತ್ತೆ ಜಿಗಿದಾಡತೊಡಗುವದು.)

ಹಿರಿಯ : (ಸಿಟ್ಟಿನಿಂದ) ಮತ್ತ ಎದ್ಯಾ, ನೀ ಜಾಗಾ ಬಿಟ್ಟು? ಕೂಡು ನೋಡೂಣು ಒಂದ ಕಡೆ... ಹ್ಞೂ... ಖರೇನs... ಅವರು ಒಂದು ಕಡೆ ಮಹಾಚಾಲಾಕೂ ಇದ್ದಾರ... ಒಂದ ಕಡೇ ಮಹಾ ಮೂರ್ಖರೂ ಇದ್ದಾರ.

ಎಲ್ಲವೂ : (ಎದ್ದು ಅವನ ಸುತ್ತ ಕುಣಿಯತೊಡಗುತ್ತವೆ. ತಲೆಯ ಇಬ್ಬದಿಗಳನ್ನು ತಟ್ಟಿಕೊಳ್ಳುತ್ತ) ಒಂದ ಕಡೆ ಚಾಲಾಕು... ಒಂದ ಕಡೆ ಬುದ್ದೂ... ಒಂದ ಕಡೆ... (ಇತ್ಯಾದಿ)

ಹಿರಿಯ ಮಂಗ : (ಕೈಯಲ್ಲಿಯ ಬಡಿಗೆಯನ್ನು ನೆಲಕ್ಕೆ ಅಪ್ಪಳಿಸಿ) ಏನ ನಡಿಸೀರಿ ಇದನ್ನ? ನೀವು ಒಂದ ಕಡೆ ಸುಮ್ಮನs ಕೂತು ಕೇಳೂದುಲ್ಲಾ ಅಂದರs ನಾ ಏನೂ ಹೇಳೂದುಲ್ಲಾ ನಿಮಗ. ಹಾಳ ಭಾವ್ಯಾಗ ಬೀಳ್ರಿ, ನಾ ಹೋಗತೀನಿ.

ಎಲ್ಲ ಸಣ್ಣ ಮಂಗಗಳು : ಹಾಳ ಭಾವ್ಯಾ..? ಎಲ್ಲೆದs ಹಾಳ ಭಾವ್ಯಾ? ನಡೀರಿ ಬೀಳೂಣು... ಎಲ್ಲೆದs ಹಾಳ ಭಾವ್ಯಾ..? (ಹುಡುಕುತ್ತಿರುವವರಂತ ರಂಗಮಂಚದ ಮೇಲೆ ಅತ್ತಿತ್ತ ಓಡಾಡುತ್ತವೆ.)

ಒಂದು ಮಂಗ : ಏ ಹುಚಗೊಟ್ಟಗೋಳs, ಹಾಳ ಭಾವ್ಯಾಗ ಬೀಳ್ರಿ ಅಂದರs ಅಜ್ಜಾ ಸಿಟ್ಟಿಗೆದ್ದಾನ ಅಂತ ಅರ್ಥಾ... ನಡೀರಿ, ಅಜ್ಜನ್ನ ರಮಿಸಿ ಕರಕೊಂಡು ಬರೂಣು. ಅಪ್ಪಾ ಏನು ಹೇಳ್ತಾನ ಕೇಳಿರs ಕೇಳೂಣು.

ಇನ್ನೊಂದು : ಹೌದರ್ಯೋ ಮಕ್ಕಳs, ನಡೀರಿ, ಕೇಳೂಣು.. ಅಪ್ಪಾ ಹೇಳಿದ ಉಪಾಯದಿಂದನೂ ಏನೂ ಆಗಲಿಲ್ಲಾಂದರ ಮುಂದ ಅದನs ಅದ ಹಾಳ ಭಾವ್ಯಾ ಬೀಳೂದು... ಅಜ್ಜಾ, ಏ ಅಜ್ಜಾ...

ಎಲ್ಲ ಮಂಗಗಳು : ಅಜ್ಜಾ, ಅಜ್ಜಾ, ತಪ್ಪಾತು ಅಜ್ಜಾ, ಇನ್ನ ಗದ್ದಲಾ ಮಾಡೂದುಲ್ಲಾ, ತಪ್ಪಾತು ಅಜ್ಜಾ, ಸುಮ್ಮ ಕೂತು ಕೇಳತೀವಿ, ನೀ ಹೇಳಿಧಂಗ ಕೇಳತೀವಿ.

ಅವನ ಕೈ ಹಿಡಿದೆಳೆದು ತಂದು ಕೂಡಿಸುವವು.

ಅಜ್ಜ ಮಾತನಾಡುವದಿಲ್ಲ. ಮುನಿಸಿನಿಂದ ಮುಖ ತಿರುವಿ ಕುಳಿತಿದೆ.

ಒಂದು ಹಿರಿಯ ಮಂಗ : ಹೇಳಪಾ ಇನ್ನಽ... ಇಷ್ಟ್ಯಾಕ ಸಿಟ್ಟು ಮಾಡಿಕೋತೀ? ಹೇಳು, ಹುಡುಗೂರು ಎಲ್ಲಾ ಸುಮ್ಮ ಕೂತಾರ...

ಅಜ್ಜ : (ಇನ್ನೂ ಸಿಟ್ಟಿನಲ್ಲಿಯೇ) ಮತ್ತಽ... ಸಿಟ್ಟು ಮಾಡಿಕೋಬ್ಯಾಡಾ ಅಂದರಽ... ನಾ ಏನು ಹೇಳೂದು ನಿಮ್ಮ ಕಲ್ಯಾಣಾ ಆಗ್ಲೀ ಅಂತಽ ಅಲ್ಲಽ ಹೇಳೂದು...? ನನ್ನ ಸಲುವಾಗಿ ನಾ ಬಡಕೋತೀನೇನು? ನಂದೇನದಽ, ನಾಳೀ ಗೊಟಕ್ ಅಂದರೂ ಅಂದೆನೇ...

ಎರಡು ಸಣ್ಣ ಮಂಗಗಳು : (ತಟ್ಟನೇ ಎದ್ದು ಕುಣಿಯತೊಡಗುತ್ತವೆ) ನಾಳೀ ಗೊಟಕ್ ಅಜ್ಜಾ, ನಾಳೀ ಗೊಟಕ್...

ಇನ್ನೊಂದು ಮಂಗ : (ಎದ್ದು ಅವನ್ನು ಹೊಡೆದು ಕೂಡಿಸುತ್ತ) ಏ ತಲೀಯಿಲ್ಲದವರಽ, ಸುಮ್ಮ ಕೂಡ್ರ್ಯೋ, ಮಂಗ್ಯಾನ ಮಕ್ಕಳಽ... ಮೊದಲಽ ಅಜ್ಜಾಗ ಸಿಟ್ಟು ಬಂದಽದ... ಅಜ್ಜಾ, ದಯಮಾಡಿ ಹೇಳು ಅಜ್ಜಾ, ನಿನ್ನ ಕಾಲು ಬೀಳ್ತೀವಿ...

ಎಲ್ಲ ಮಂಗಗಳೂ ಸಾಷ್ಟಾಂಗ ನಮಸ್ಕಾರ ಹಾಕುವವು.

ಅಜ್ಜ : ಹ್ಞೂ, ಹೇಳ್ತೀನಿ ಕೇಳ್ರಿ... ಈಗಽ ನೋಡ್ರಿ, ಬ್ಯಾಸಿಗಿ ಬಂದ ಕೂಡಲೇ ಕಾಡಿನ್ಯಾಗೆಲ್ಲಾ ಆ ಕೆಂಪು ಬಣ್ಣದ ಹಣ್ಣಾಗತಾವಲ್ಲಾ, ಅವನ್ನಽ ನಾವೆಲ್ಲಾ ಹುಡಿಕಿ ಹುಡಿಕಿ ತಿಂತೀವಿ, ಯಾಕ ತಿಂತೀವಿ ಹೇಳ್ರಿ?

ಸಣ್ಣ ಮಂಗ: (ಜಿಗಿದೆದ್ದು) ಯಾಕಂದರಽ... ಭಾಽಳ ರುಚಿ ಇರತಾವ ಅದಕ್ಕ...

ಅಜ್ಜ : ಬರೇ ರುಚಿ ಇರತಾವ?

ಇನ್ನೊಂದು ಮಂಗ : (ಸಣ್ಣ ಮಂಗವನ್ನು ಜಗ್ಗಿ ಕೆಳಗ ಕೂಡಿಸುತ್ತ) ಬರೇ ರುಚಿ ಅಲ್ಲಾ ಅಜ್ಜಾ, ಅವನ್ನ ತಿಂದ ಕೂಡಲೇ ಏನ ಮಸ್ತ ನಶಾ ಬರ್‍ತಽದ ಅಂದೀ...

ಮತ್ತೊಂದು: ಹೌದಲೇ, ಭಾರೀ ನಶಾ ಏರತಽದ ನನಗಂತು... ಒಂದ ಹಣ್ಣ ತಿಂದು ಮಲಕೊಂಡೆ ಅಂದರಽ ಎರಡು ದಿನಾ ಏಳೂದುಲ್ಲಾ ನೋಡು ನಾ...

ಅಜ್ಜ : ಹ್ಞಾ, ಅವಽ ಹಣ್ಣು ನೋಡು, ನಾ ಹೇಳಿದ್ದು... ಆ ಹಣ್ಣು ಇನ್ನಮ್ಯಾಲೆ ಮನಶ್ಯಾರಿಗೆ ತಿನಸೂಣಂತ... ಆಮ್ಯಾಲೆ ನೋಡೀರಂತ ಏನ ಮಜಾ ಆಗತಽದ...

ಒಂದು ಮಂಗ : ಛೆ ಅಜ್ಜಾ, ಅದರಿಂದೇನಾಗಬೇಕಾಗೇದ? ಅವರೂ ತಿಂದು ಗಡದ್ದ ಮಲಕೋತಾರ ಆತು.

ಅಜ್ಜ : ಇಲ್ಲೋ ಹುಚ್ಚಾ, ಅವರು ಮಲಕೊಳ್ಳೂದುಲ್ಲಾ ನಮ್ಮ ಹಂಗ, ಅವರ ನಶಾ ನಮ್ಮ ಹಂಗ ಸಾದಾ ನಶಾ ಇರೂದುಲ್ಲ ಏನಪಾ... ಅವರಿಗೆ ಯಾತ್ಯಾತರ ನಶಾ ಏರತಽದ ಅನ್ನೂದು ಹೇಳ್ಳಿಕ್ಕೇ ಬರೂದುಲ್ಲ ನೋಡು, ನಶಾ ಏರಿದಾಗ ಅವರೇನೇನು ಮಾಡ್ತಾರ ಅದೂ ಹೇಳ್ಳಿಕ್ಕೆ ಬರೂದುಲ್ಲಾ.

ಒಂದು ಮಂಗ : ಏನೇನು ಮಾಡತಾರ ಹೇಳಲ್ಲಾ ಅಜ್ಜಾ...

ಅಜ್ಜ : ಯಾರು ಜಗಳಾಡತಾರ, ಯಾರು ಕುಣದಾಡತಾರ, ಯಾರು ಹೊಡದಾಡತಾರ. ಯಾರು ಬಡದಾಡತಾರ... ನೋಡೀರಂತ ಮಜಾ, ಏನೇನು ಮಾಡತಾರ ಎಲ್ಲಾ ನೋಡೀರಂತ... ಮೊದಲ ಕಾಡಿನ್ಯಾಗ ಹೋಗಿ ಆ ಹಣ್ಣಿನ ಗಿಡಾ ಎಷ್ಟು ಸಿಗತಾವ ಎಲ್ಲಾ ಕಿತ್ತಿಕೊಂಡ ಬರ್ರಿ, ಎಲ್ಲಾ ಕಡೆ ಒಂದೊಂದು ಹಚ್ಚೋಣಂತ.

ಒಂದು ಮಂಗ : ಆದರS ಅಜ್ಜಾ, ಈಗ ಕಾಡಿನ್ಯಾಗ ಆ ಗಿಡಾ ಉಳಿದಾವೆಲ್ಲಿ? ಎಲ್ಲೋ ಗುಡ್ಡದ ಮ್ಯಾಲೆ ಒಂದೆರಡು ಉಳಿದಿರಬೇಕು ಅಷ್ಟS... ಎಲ್ಲಾ ಕಡದ ಬಿಟ್ಟಾರ ಈ ಒಂದೆರಡು ವರ್ಷದಾಗS...

ಅಜ್ಜ : ಹೋಗೆರS ಹೋಗರ್‍ಯೋ, ಕೂತಲ್ಲೇ ಇಲ್ಲಾಂತ ಮಾತು ಮುಗಸಬ್ಯಾಡ್ರಿ, ಹೋಗಿ ಹುಡಕರೀ... ಎಷ್ಟು ಸಿಗತಾವ ಅಷ್ಟು ಕಿತಗೊಂಡು ಬರ್ರಿ... ನಮ್ಮ ಜೀವನ-ಮರಣದ ಪ್ರಶ್ನಿ ಅದ... ಹೋಗ್ರಿ, ಏಳ್ರಿನ್ನ, ಕೆಲಸಕ್ಕ ಹತ್ತರಿ.

ಎಲ್ಲ ಮಂಗಗಳು : ಹ್ಞೂ, ಏಳ್ರಿ ಇನ್ನ, ಕೆಲಸಕ್ಕ ಹತ್ತರಿ, ಹ್ಞೂ, ಏಳ್ರಿ ಇನ್ನ... (ಎನ್ನುತ್ತ ಅಜ್ಜನ ಸುತ್ತ ಕುಣಿಯುತ್ತ ಒಂದೆರಡು ಸುತ್ತು ತಿರುಗಿ ಸಾಲಾಗಿ ಹೋಗತೊಡಗುವವು.)

ಅಜ್ಜ : ಅಡವ್ಯಾಗ ಹೋಗಿ ಬರೇ ಗಿಡದಿಂದ ಗಿಡಕ್ಕ ಹಾರಕೋತ ಕೂಡಬ್ಯಾಡ್ರಿ. ಲಗೂನS ತೊಗೊಂಡು ಬರ್ರಿ... ಏನು, ನಾ ಹೇಳಿದ್ದು ತಿಳೀತಿಲ್ಲೋ... ಬರೊಬ್ಬರಿ ನೋಡಿ ಹೊತಗೊಂಡು ಬರ್ರಿ... ಆ ಗಿಡಾ ಅಷ್ಟS ತೊಗೊಂಡು ಬರ್ರಿ ಮತ್ತ... ಗುಡ್ಡಕ್ಕ ಗುಡ್ಡಾನS ಹೊತಗೊಂಡು ಬರಬ್ಯಾಡ್ರಿ ಮತ್ತ ನಿಮ್ಮ ಮುತ್ತ್ಯಾನ ಹಾಂಗ... (ಕೂಗುತ್ತ ತಾನೂ ಅವರ ಹಿಂದೆಯೇ ಹೋಗುವನು.)

ದೃಶ್ಯ : ೨

ಸಂಜೆಯ ಸಮಯ. ಅಜ್ಜ ಮಂಗ ರಂಗಮಂಚದ ಮೇಲೆ ಶತಪಥ ಹಾಕುತ್ತಿದೆ.

ಅಜ್ಜ : ಇನ್ನೂ ಬರಲಿಲ್ಲಲ್ಲಾ... ಎಷ್ಟು ಹೇಳಿ ಕಳಿಸಿದ್ದೆ ಲಗೂ ಬರ್ರಿ ಅಂತ... ಎಲ್ಲೆ ಧಾಂಧಲ್ಯಾ ಹಾಕ್ಕೋತ ಕೂತಾವೋ ಏನೋ... ಎಲ್ಲಿ ಏನರS ಅನಾಹುತ ಮಾಡ್ಕೊಂಡು ಕೂಡತಾವೋ ಅಂತ.

ಅಷ್ಟರಲ್ಲೇ ನಾಲ್ಕಾರು ಮಂಗಗಳು ಕೂಗಾಡುತ್ತ ಒಂದು ಗಿಡವನ್ನು ಹೊತ್ತು ತರುವವು. ಗಿಡಕ್ಕೆ ಕೆಂಪು ಹಣ್ಣುಗಳು ಜೋತುಬಿದ್ದಿವೆ.

ಅಜ್ಜ : ಬಂದಿರ್ಯಾ ಕಡೀಕ ಒಮ್ಮೆ... ಎಷ್ಟೊತ್ತು ಮಾಡಿದಿರೋ... ಲಗೂನS ಬರ್ರಿ ಅಂತ ಹೇಳಿದ್ದಿಲ್ಲೇನು ನಿಮಗ? ಹೊರಗ ಹೋದ್ರಿ ಅಂದರ ಹೊರಗS... ಹಿರೇರ ಮಾತಿನ ಖಬರS ಇರೂ ಹಾಂಗಿಲ್ಲಾ...

ಮಂಗಗಳು ಅವನ ಮಾತಿಗೆ ಉತ್ತರ ಕೊಡದೆ ಮರವನ್ನು ಕೆಳಗಿಳಿಸಿ ಉಸ್ಸೆಂದು ಬೆವರು ಒರೆಸುತ್ತ ಕೆಳ ಕೂಡುವವು.

ಒಂದು ಮಂಗ : ಏನು ಲಗೂ ಬರ್ತೀವೋ ಅಜ್ಜಾ? ಇಡೀ ಅಡವೀ ತುಂಬ ಹುಡುಕಬೇಕಾತು... ತಿರಗಿ, ತಿರಗಿ ಸಾಕಾತು ನೋಡು.

ಇನ್ನೊಂದು ಮಂಗ : ಇಷ್ಟೆ ಇಡೀ ದಿನಾ ಹುಡುಕಿದಾಗ ಒಂದು ಗಿಡಾ ಸಿಕ್ಕಿತು ನೋಡು. ಅದೂ ಎಲ್ಲೆ? ಗುಡ್ಡದ ತಲೀಮ್ಯಾಲೆ... ಅಲ್ಲಿಂದ ಹೊತಗಂಡು ಬಂದೀವಿ.

ಅಜ್ಜ : ಒಂದಽ ಸಿಕ್ಕಿತಽ? ಛೆ, ಪಂಚೇತಿ ಆತಲ್ಲಾ... ಒಂದಽ ಎಲ್ಲೆ ಹಚ್ಚೋದಪಾ ಇನ್ನ...? ನಾಲ್ಕ ಮಂದಿ ಬಂದ ಹೋಗೂ ಜಾಗಾದಾಗ ಹಚ್ಚಬೇಕು... ಎಲ್ಲೆ ಹಚ್ಚೋದು? ಸ್ವಲ್ಪ ವಿಚಾರಾ ಮಾಡಿ ಹೇಳ್ರಿ, ಎಲ್ಲೆ ಹಚ್ಚೋದು? (ವಿಚಾರ ಮಾಡುವವನಂತೆ ಕೈಯ ಮೇಲೆ ಗಲ್ಲವನ್ನಿಟ್ಟು ಕೂಡುವನು. ಪ್ರತಿಯೊಂದು ಮಂಗನೂ ತನ್ನ ಬದಿಯವನಿಗೆ ತಿವಿದು 'ಎಲ್ಲೆ ಹಚ್ಚೋದು. ವಿಚಾರ ಮಾಡು' ಎಂದು ಹೇಳಿ ತಾನೂ ಅಜ್ಜನಂತೆ ಕೂಡುವನು. ಎಲ್ಲಕ್ಕಿಂತ ಕೊನೆಯ ಸಣ್ಣ ಮಂಗ)

ಸಣ್ಣ ಮಂಗ: ಎಲ್ಲೆರಽ ದೂರ ಬ್ಯಾಡಾ ಅಜ್ಜಾ, ಇಲ್ಲೇ ಎಲ್ಲೆರಽ ಹಚ್ಚೋಣು, ದೂರ ಹಚ್ಚಿದರ ನಮಗ ಹಣ್ಣು ಸಿಗೂದಽ ಇಲ್ಲಾ.

ಅಜ್ಜ : (ನಗುತ್ತ) ಇಲ್ಲೆ ಆಮ್ಯಾಲೆ ತಂದು ಹಚ್ಚೋಣಂತ. ಈಗ ಇದನ್ನ ಒಂದು ದೊಡ್ಡ ಕೆಲಸದ ಸಲುವಾಗಿ ತಂದೀವಿ... ಮೊದಲ ಆ ಕೆಲಸಾ ಆಗಲಿ... ಅದರ ಯಶಸ್ಸಿನ ಮ್ಯಾಲೇ ನಮ್ಮ ಭವಿಷ್ಯ ಅವಲಂಬಿಸೇದ. ಏನ್ರೆಪಾ, ಎಲ್ಲೆ ಹಚ್ಚೋಣು ಅಂತೀರಿ?

ಒಂದು ಮಂಗ : ಅಜ್ಜಾ, ನಾ ಹೇಳ್ಳೇನು? ನನಗೊಂದು ವಿಚಾರ ಬಂದಽದ ನೋಡು, ಅಲ್ಲಾ, ಅಂದರಽ ನಾನು ಮನಶ್ಯಾರ ಊರಾಗ ಬೆಳದೀನಿ, ಮನಶ್ಯಾರ ವಿಚಿತ್ರ ಸ್ವಭಾವಾ ಸ್ವಲ್ಪ ನೋಡೀನಿ ಅಂತ ಹೇಳ್ತೀನಿ...

ಎಲ್ಲರೂ : ಏ ಹೇಳ ಹೇಳೋ... ಲಗೂ ಹೇಳು.

ಅಜ್ಜ : ಹೇಳೋ, ಅದಕ್ಯಾಕ ಇಷ್ಟ ಪೀಠಿಕೀ...?

ಅದೇ ಮಂಗ: ಅಲ್ಲಾ, ನಾ ಮನಶ್ಯಾರ ನಡುವ ಇದ್ದಾಗ ನೋಡಿದ್ದು ಅಂದರಽ ಈ ರಾಜಕಾರಣಿಗಳು ಇರ್ತಾರ ನೋಡು, ರಾಜಕಾರಣಿಗಳು... ಅವರ ತಲ್ಯಾಗ ಏನರಽ ಹಾಕಿ ಛೂ ಬಿಟ್ಟರಾತು... ಅದು ಹಬ್ಬಲಿಕ್ಕೇನೂ ತಡಾ ಹಿಡಿಯೂದುಲ್ಲಾ ನೋಡು... ಅಡಿವ್ಯಾಗಿನ ಬೆಂಕಿ ಹಬ್ಬಿಧಂಗ ಹಬ್ಬತದ... ಅದಕ್ಕ ಅವರಿಗೆ ಈ ಹಣ್ಣಗೋಳ್ನ ಮೊದಲ ತಿನಿಸಿದರ ಹ್ಯಾಂಗ ಅಂತ...?

ಅಜ್ಜ : ಹಿಂಗಂತೀಯಾ? (ವಿಚಾರಮಗ್ನನಾದವನಂತೆ) ಖರೇ ಅದ ನೋಡು ನೀ ಅನ್ನೋದು... ಅವರ ತಲೀ ಒಮ್ಮೆ ತಿರಗಿಸಿದರ ಸಾಕು... ಅವರಿಗೆ ಉಳಿದವರ ತಲೀ ತಿರಗಸಲಿಕ್ಕೇನು ಛಾಳೊತ್ತು ಹಿಡಿಯುದುಲ್ಲಾ... ಒಂದಽ ಗಿಡಾ ಅದ ಅಂದಮ್ಯಾಲೆ ಹಿಂಗಽ ಮಾಡೂದು ಬರೊಬ್ಬರಿ...

ಒಂದು ಮಂಗ : ಹಾಂಗಾದರ ಅವರೆಲ್ಲಾ ಬಂದು ಹೋಗೂ ಜಾಗಾ ಅಂದರಽ ವಿಧಾನಸೌಧಾ... ಅಲ್ಲೇ ಏಲ್ಲೆರಽ ಹಚ್ಚಿಬಿಡೂಣು ಎಲ್ಲಾರ ಕಣ್ಣಿಗೆ ಬೀಳೂಹಾಂಗ... ಅವರೊಳಗ ನಾಲ್ಕು ಮಂದಿ ತಿಂದರಽ ಸಾಕು, ಊರ ಮಂದಿಗೆಲ್ಲಾ ನಶಾ ಏರಸ್ತಾರ ಅವರು...

ಎಲ್ಲರೂ : ನಡೀರಿ ಹಾಂಗಾದರ... ಹಚ್ಚಿಬಿಡೂಣು, ವಿಧಾನಸೌಧದ ಮುಂದ ಗಿಡಾ ಹಚ್ಚಿಬಿಡೂಣು... ಹಚ್ಚೇ ಬಿಡೂಣು. ರಾಜಕಾರಣಿಗಳಿಗೆ ಹುಚ್ಚು ಹಿಡಿಸೇ ಬಿಡೂಣು... ನಡೀರಿ ನಡೀರಿ...

ಅಜ್ಜ : ಇಲ್ಲೋಲ್ರಿ, ಈಗs ಬ್ಯಾಡಾ, ಈ ಕೆಲಸಾ ಅಗದೀ ಸಪ್ಪು-ಗದ್ದಲಾ ಇಲ್ಲದs ಆಗಬೇಕು... ರಾತ್ರಿ ಆಗಲಿ, ಆಮ್ಯಾಲ ಹೋಗಿ ಹಚ್ಚಿ ಬರ್ರಿ... ಎಲ್ಲಾರೂ ಅಡ್ಡ್ಯಾಡೂ ರಸ್ತೇದ ಬಾಜುಕ್ಕ ಹಚ್ಚರಿ... ಹಚ್ಚಿ ಬರ್ರಿ, ಆಮ್ಯಾಲ ನೋಡೂಣಂತ ನಾಳಿನಿಂದ ಮಜಾ...

ಸಣ್ಣಮಂಗ : ಅಜ್ಜಾ, ಏನು ಮಜಾ ಆಗತsದ– ಅದನ್ನs ಹೇಳ್ಳಿಲ್ಲಾ ನೀನು?

ಅಜ್ಜ : ನೋಡೀರಂತೋ... ನೋಡೀರಂತ... ಈ ಮನಶ್ಯಾರಿಗೆ ಶಬ್ದಾ ಅಂದರ ಭಾಳ ಪ್ರೀತಿ ಏನಪಾ, ಅದಕ್ಕs ಅವರು ಯಾವಾಗಲೂ ಶಬ್ದದಾಗs ಮಾತಾಡೂದು... ನಮ್ಮ ಹಾಂಗ ಧ್ವನೀ ಮಾತು ಅವರಿಗೆ ಬರೂದs ಇಲ್ಲಾ...

ಇನ್ನೊಂದು ಮಂಗ : ಹೌದು ಖರೇ ಅದ ಅಜ್ಜಾ, ಅವರಿಗೆ ಶಬ್ದಗೋಳ ನಶಾ ಮೊದಲಿನಿಂದನs ಅದ. ಮೊದಲ ವಂಶಾ, ಗೌರವಾ, ಶೌರ್ಯಾ, ಪ್ರೀತಿ ಇಂಥಾ ಶಬ್ದಗೋಳ ನಶಾ ಇತ್ತು. ಇತ್ತಿತ್ತಲಾಗ ರಾಷ್ಟ್ರಾ, ಜನತಾ, ಜಾತಿ, ಧರ್ಮಾ, ಆಸ್ತಿ-ಪಾಸ್ತಿ ಅಂತ ಏನೇನೋ ಬಡಬಡಿಸಿಗೋತ ಇರತಾರ.

ಅಜ್ಜ : ಅದs ಮತ್ತ... ಹೊಸಾ ನಶಾ ಯಾಕ ಬೇಕು? ಅದs ಅವರ ತಲೀವಳಗಿದ್ದ ಹಳೇ ನಶಾನs ಹ್ಯಾಂಗ ಮ್ಯಾಲೆ ಏರತsದ ಈ ಹಣ್ಣು ತಿಂದ ನಂತರ, ನೋಡೀರಂತ... ನಾಳೆ ಮಜಾ ನೋಡಲಿಕ್ಕೆ ಅಲ್ಲೇ ಹೋಗೂಣಂತ ಎಲ್ಲಾರೂ...

ದೃಶ್ಯ : ೩

ವಿಧಾನಸೌಧದ ಅಂಗಳದಲ್ಲಿ ರಂಗಮಂಚದ ಒಂದು ಮೂಲೆಯಲ್ಲಿ ಕೆಂಪು ಹಣ್ಣಿನ ಗಿಡ ನಿಂತಿದೆ. ಅದರಲ್ಲಿಯ ಹಣ್ಣುಗಳು ಹಾಗೆಯೇ ಇವೆ. ರಂಗಮಂಚದ ಇನ್ನೊಂದು ಮೂಲೆಯಲ್ಲಿ ಮೇಜು-ಕುರ್ಚಿಗಳನ್ನಿಟ್ಟು ಚಹಾಪಾನದ ವ್ಯವಸ್ಥೆಯಾಗಿದೆ. ಅಜ್ಜ ಮಂಗ ಮತ್ತು ಇನ್ನೊಂದು ಮಂಗ ಮೆಲ್ಲನೆ ಅತ್ತ-ಇತ್ತ ನೋಡುತ್ತ ರಂಗಮಂಚವನ್ನು ಪ್ರವೇಶಿಸುತ್ತವೆ.

ಇನ್ನೊಂದು ಮಂಗ : ಅಜ್ಜಾ, ಮುಂಜಾನಿಂದ ನೋಡಲಿಕ್ಕೆ ಹತ್ತೀವಿ, ಇಷ್ಟ ಮಂದಿ ಬಂದರು, ಹೋದರು... ಯಾರೂ ಹಣ್ಣು ತಿನ್ನಲೇ ಇಲ್ಲಲ್ಲೋ ಇನ್ನೂ... ಎಲ್ಲಾ ಹಾಂಗs ಅವ ಮರದ ಮ್ಯಾಲ...

ಅಜ್ಜ : (ಆತಂಕದಿಂದ) ಹೌದೋ, ನನಗೂ ಅದs ಚಿಂತಿ ಹತ್ತೇದ... ಯಾರೂ ತಿನ್ನದೇ ಇದ್ದರs ನಾವಿಷ್ಟೆಲ್ಲಾ ಒದ್ದ್ಯಾಡಿ ಆ ಮರಾ ಇಲ್ಲೆ ತಂದು ಹಚ್ಚಿದ್ದು ವ್ಯರ್ಥ ಆಗತsದ ಅಲ್ಲೋ...

ಇನ್ನೊಂದು ಮಂಗ : ಇವರ್ಯಾರು ತಿನಲಿಲ್ಲಾಂದರs ಅವನ್ನ ಗಿಡದ ಮ್ಯಾಲ ಭಾಳ ಹೊತ್ತು ಕಾಯೂದು ಕಠಿಣ ಆಗತsದ ಅಜ್ಜಾ, ಬ್ಯಾರೇ ಮಂಗ್ಯಾಗೋಳು ಯಾವಾಗ ಬಂದು ತಿಂದು ಹೋದಾವು ಹೇಳ್ಳಿಕ್ಕೆ ಬರೂದಿಲ್ಲಾ...

ಅಜ್ಜ : ಹೌದೋ, ಏನರs ಉಪಾಯಾ ಮಾಡಬೇಕು. ಇವತ್ತs ಈ ಮಂದಿಗೆ ನಾವು ಈ ಹಣ್ಣು ತಿನಸಲಿಕ್ಕೆ ಬೇಕು.

ಇನ್ನೊಂದು ಮಂಗ : ಹ್ಯಾಂಗೋ ಅಜ್ಜಾ, ನಾವ್ನS ಹ್ಯಾಂಗ ತಿನಸೂದು? ನನಗಂತೂ ಏನೂ ಹೊಳೀವಲ್ಲತು ಬಿಡು... ನೀನS ಏನರS ಉಪಾಯಾ ಹೇಳು.

ಅಜ್ಜ : ಹ್ಞಾ... ಹಿಂಗ ಮಾಡೂಣು... ನೀ ಒಂದ ಕೆಲಸಾ ಮಾಡು... ಹಗSರಾಗಿ ಹೋಗಿ ಆ ಟೇಬಲ್ ಮ್ಯಾಲ ಇಟ್ಟದ್ದು ಒಂದ ಪ್ಲೇಟ್ ತೊಗೊಂಡು ಬಾ... ಓಡಿ ಬಾ ಮತ್ತ ಪಟ್ಟನS...

ಇನ್ನೊಂದು ಮಂಗ : ಪ್ಲೇಟು ತೊಗೊಂಡು ಓಡಿ ಬರ್ಲಿ? ಹೆ, ಏನ ಹೇಳತೀಯೋ ಅಜ್ಜಾ... ಆ ಮನಶ್ಯಾ ನನ್ನ ಸುಮ್ಮನS ಬಿಡ್ತಾನೇನು? ಕೋಲು ತೊಗೊಂಡು ಬೆನ್ನ ಹತ್ತತಾನ.

ಅಜ್ಜ : ಅದS ಮತ್ತS... ಅವ್ನಾ ನಿನ್ನ ಬೆನ್ನ ಹತ್ತಿ ಇಲ್ಲೆ ಬರ್ಲೀ ಅಂತS... (ಅವರ ಕಿವಿಯಲ್ಲಿ ಏನೇನೋ ಹೇಳುವದು.)

ಇನ್ನೊಂದು ಮಂಗ : ಹ್ಞಾ... ಹೀಂಗS... ತಿಳೀತು ಬಿಡು ಅಜ್ಜಾ... ಭಾರೀ ತಲೀ ಬಿಡು ನಿಂದು... ಭಾರೀ ತಲಿ...

ಅಜ್ಜ : ಹ್ಞೂ, ಹೋಗು ಇನ್ನ ಹೊತ್ತು ಮಾಡಬ್ಯಾಡಾ, ಉಳದ ಮಂದಿ ಬಂದಗಿಂದಾರು... ಈಗ ಅವ್ನಾ ಒಬ್ಬಾವ್ನನS ಇದ್ದಾನ... ಹೋಗು, ಹಗರಕS ಹ್ಞಾ..., ಸಪ್ಪಳಾ ಮಾಡದS ಹೋಗು.

ಇನ್ನೊಂದು ಮಂಗ ಮೆಲ್ಲಗೆ ಕಳ್ಳಹೆಜ್ಜೆಯನ್ನಿಡುತ್ತ, ಮೇಜಿನ ಮೇಲೆ ಪ್ಲೇಟುಗಳನ್ನಿಡುತ್ತಿದ್ದ ವೇಟರನ ಹಿಂದಿನಿಂದ ಹೋಗಿ ಪಟಕ್ಕನೆ ಒಂದು ಪ್ಲೇಟನ್ನೆತ್ತಿಕೊಂಡು ಹಾರಿ ಮರದ ಹಿಂದೆ ಓಡಿಬರುವದು. ವೇಟರ್ ಎಚ್ಚೆತ್ತು "ಏಯ್. ಏಯ್. ಕೊಡು ಅದನ್ನS..." ಎಂದು ಮಂಗನನ್ನು ಬಾಯಿಗೆ ಬಂದಂತೆ ಬಯ್ಯುತ್ತ ಅದರ ಹಿಂದೆ ಓಡಿ ಬರುವನು. ಮರದ ಹಿಂದೆ ಬಂದೊಡನೆ ಅವನನ್ನು ಹಿಡಿದು ಅವನು ಕೂಗದಂತೆ ಅವನ ಬಾಯಿಯಲ್ಲಿ ಒಂದು ಹಣ್ಣನ್ನು ತುರುಕುವವು. ಎರಡೂ ಮಂಗಗಳು ಕೂಡಿ ಅವನನ್ನು ಪರದೆಯ ಹಿಂದೆ ಎಳೆದುಕೊಂಡು ಹೋಗುವವು. ಇತ್ತ ಮೇಜಿನ ಮುಂದೆ ಚಹಾಪಾನಕ್ಕಾಗಿ ಮೂರು ವ್ಯಕ್ತಿಗಳು ಬಂದು ಕೂಡುವರು!

ವ್ಯಕ್ತಿ-೧ : ಹ್ಞೂ, ಕೂಡ್ರಿ, ಕೂಡ್ರಿ... ಯಾಕೋ ಕೃಷ್ಣಕುಮಾರ ಬರಲಿಲ್ಲಾ ಇನ್ನೂ...? ಬರೋಬ್ಬರೀ ವ್ಯಾಳ್ಯಾ ಹೇಳಿದ್ದಿರೋ ಇಲ್ಲೋ ಅವರಿಗೆ?

ವ್ಯಕ್ತಿ-೨ : (ಅವರ ಎದುರಿನ ಕುರ್ಚಿಯ ಮೇಲೆ ಕೂಡುತ್ತ) ಹ್ಞಾ, ಹೇಳಿದ್ದೆ ಸಾಹೇಬರS... ಬರ್ತೀನಿ ಅಂದಾರ, ಬಂದಾರು ಇಷ್ಟರಾಗS...

ವ್ಯಕ್ತಿ-೩ : ವ್ಯಾಳ್ಯಾಕ್ಕ ಬರಬೇಕು, ಇಷ್ಟು ಇಂಪಾರ್ಟಂಟ ವಿಷಯಾ ಚರ್ಚಾ ಮಾಡಬೇಕಾಗೇದ...

ವ್ಯಕ್ತಿ-೪ : (ಪ್ರವೇಶಿಸುತ್ತ) ನಮಸ್ಕಾರ್ರಾ, ನಮಸ್ಕಾರ್ರಾ, ಕ್ಷಮಿಸಬೇಕು, ತಡಾ ಆತು... ಏನು ಮಾಡೂದು ನೋಡ್ರಿ, ಸಾರ್ವಜನಿಕ ಕ್ಷೇತ್ರದಾಗ ಕೆಲಸಾ ಮಾಡುವವರಿಗೆ ನೂರಾಎಂಟು ವ್ಯಾಪ ಇರತಾವ... ಅಲ್ಲಿ ಉದ್ಘಾಟನಾ, ಇಲ್ಲೆ ವಾರ್ಷಿಕೋತ್ಸವಾ ಅಂತ... ಯಾರಿಗೂ ಇಲ್ಲಾ ಅನ್ನಲಿಕ್ಕೆ ಬರೂದಿಲ್ಲಾ.

ವ್ಯಕ್ತಿ-೧ : (ವ್ಯಂಗ್ಯವಾಗಿ) ಹೌದು, ಹೌದು. ನಿಮ್ಮ ವ್ಯಾಪ ಎಷ್ಟ ಅದಽ, ನಮಗೆ ಗೊತ್ತಿಲ್ಲಽ...? ಕೂಡ್ರಿ, ಹೊತ್ತಾಗೇದ, ಲಗೂ ವಿಷಯಕ್ಕ ಬರೂಣು...

ಇಷ್ಟರಲ್ಲಿ ಅಜ್ಜ ಮಂಗ ಮತ್ತು ವೇಟರನ ವೇಷ ತೊಟ್ಟ ಇನ್ನೊಂದು ಮಂಗ ಮರದ ಹಿಂದೆ ಬಂದು ನಿಂತಿವೆ. ವೇಟರನ ವೇಷ ತೊಟ್ಟ ಮಂಗದ ಕೈಯಲ್ಲಿಯ ಪ್ಲೇಟಿನಲ್ಲಿ ಆ ಮರದ ನಾಲ್ಕೈದು ಕೆಂಪು ಹಣ್ಣುಗಳಿವೆ.

ವ್ಯಕ್ತಿ-೨ : ಬೆಳಗಾವದ ಇಲೆಕ್ಶನ್ ಬಂತು... ನಮ್ಮ ಪಾರ್ಟೀ ಚುನಾವಣಾ ಪ್ರಚಾರದ್ದು ಏನೂ ವ್ಯವಸ್ಥಾ ಆಗಿಲ್ಲಾ ಇನ್ನೂ...

ವ್ಯಕ್ತಿ-೩ : ಹೌದು, ನಮ್ಮ ಚುನಾವಣಾ ಪ್ರಚಾರದ ಮುಖ್ಯ ಮುದ್ದೆ ಏನು, ಯಾವ ಮುದ್ದಾ ಮುಂದ ಮಾಡಿದರ ಹೆಚ್ಚು ಮತಾ ನಮ್ಮ ಕಡೆ ಬಂದಾವು ಅನ್ನೂದನ್ನ ವಿಚಾರ ಮಾಡಬೇಕು.

ವೇಟರನ ವೇಷದಲ್ಲಿದ್ದ ಮಂಗ ಮೆಲ್ಲಗೆ ಹಿಂದಿನಿಂದ ಹೋಗಿ ಕೈಯಲ್ಲಿಯ ಹಣ್ಣಿನ ತಟ್ಟೆಯನ್ನು ಮೇಜಿನ ಮೇಲಿಟ್ಟು ರಂಗದ ಇನ್ನೊಂದು ಬದಿಯಿಂದ ಮಾಯವಾಗುವದು. ತಮ್ಮ ಚರ್ಚೆಯಲ್ಲಿ ಮಗ್ನರಾದ ಅವರು ಯಾರೂ ಅವರ ಕಡೆಗೆ ಗಮನ ಕೊಡುವದಿಲ್ಲ.

ವ್ಯಕ್ತಿ-೧ : ಹೇಳ್ರಿ ಎಲ್ಲಾರೂ ನಿಮ್ಮ ನಿಮ್ಮ ವಿಚಾರಾ ಹೇಳ್ರಿ. ಆಮ್ಯಾಲ ನಾವು ನಮ್ಮ ವಿಚಾರ ಏನದಽ ಹೇಳ್ತೀವಿ.

ವ್ಯಕ್ತಿ-೨ : ಸರ್, ಅರ್ಥವ್ಯವಸ್ಥಾದ ಬಗ್ಗೆ ಮಾತಾಡಿ ಏನೂ ಉಪಯೋಗ ಇಲ್ಲಾ. ಬ್ಯಾಂಕ್ ರೇಟ್ಸ್ ಇಳಿದ ಬಗ್ಗೆ, ಟ್ಯಾಕ್ಸ್ ಹೆಚ್ಚಾದದ್ದರ ಬಗ್ಗೆ ಮೊದಲಽ ಮಂದಿಗೆ ತಲಿ ಕೆಟ್ಟಽದ. ಆ ಬಗ್ಗೆ ನಾವೀಗ ಏನರಽ ಪ್ರಾಮೀಸ್ ಮಾಡಿದರ ಮುಂದ ನಮಗ ಅದು ಕುತ್ತಗೀಗೇ ಬಂದೀತು.

ವ್ಯಕ್ತಿ-೩ : ಹೌದು ಸಾಹೇಬರಽ, ಅವರು ಹೇಳಿದ್ದು ಅಗದೀ ಖರೇ ಅದಽ ನೋಡ್ರಿ... ಅರ್ಥವ್ಯವಸ್ಥಾದ ಬಗ್ಗೆ ಮಾತಽ ಆಡೂ ಹಾಂಗಿಲ್ಲಾ ಈಗ... ಅದನ್ನ ಮರಸೂ ಅಂಥಾ ಯಾವದರಽ ಮುದ್ದೇ ತಗೀಬೇಕು.

ವ್ಯಕ್ತಿ-೪ : ನಾ ಹೇಳ್ತೀನಿ ಕೇಳ್ರಿ, ಅಲ್ಲಾ... ಅಂದರಽ... ನನ್ನ ವಿಚಾರಾ ಹೇಳೂ ಅಂದರ ಹೇಳ್ತೀನಿ.

ವ್ಯಕ್ತಿ-೧ : ಹೇಳ್ರಿ, ಹೇಳ್ರಿ ಮತ್ತಽ... ಎಲ್ಲಾರೂ ಕೂಡೇ ಒಂದು ನಿರ್ಣಯಾ ಮಾಡಲಿಕ್ಕೇ ಅಂತ ಇವತ್ತ ಕೂಡಿದ್ದು... (*ಹಣ್ಣಿನ ತಟ್ಟೆಯನ್ನೆತ್ತಿ ಎಲ್ಲರಿಗೂ ಕೊಡುತ್ತ*) ತೊಗೋಳ್ರಿ, ತೊಗೋಳ್ರಿ, ಹೇಳ್ರಿ, ನಿಮ್ಮ ಅಭಿಪ್ರಾಯ ಏನು...?

ವ್ಯಕ್ತಿ-೪ : ನೋಡ್ರಿ, ನಮ್ಮ ಪಾರ್ಟೀಗೆ ಬಹುಮತಾ ಸಿಗಬೇಕು ಅಂದರಽ ಎಲ್ಲಾರಿಗೂ ಅಪೀಲ್ ಆಗೂ ಅಂಥಾ ಸೆನ್ಸಿಟಿವ್ ಮುದ್ದೆ ಹಿಡೀಬೇಕು... ಎಲ್ಲಾರಿಗೂ ಅಭಿಮಾನ ಇರೂ ವಿಷಯಾ ಹಿಡೀಬೇಕು.

ಮೂವರೂ : ಯಾವ ವಿಷಯಾ ಅಂತೀರಿ ನೀವು?

ವ್ಯಕ್ತಿ-೪ : ಒಂದು ಅಂಥಾ ವಿಷಯಾ ಅಂದರಽ ಭಾಷಾ, ಇನ್ನೊಂದು ಅಂದರಽ ಜಾತೀ-ಧರ್ಮಾ (*ಹಣ್ಣನ್ನು ತಿನ್ನುತ್ತ*) ತಮ್ಮ ತಮ್ಮ ಜಾತಿ-ಧರ್ಮದ ಬಗ್ಗೆ ಎಲ್ಲಾರಿಗೂ

ಅತಿಶಯ ಅಭಿಮಾನ ಇರತsದ... (ಹಣ್ಣನ್ನು ತಿನ್ನುತ್ತ) ಆ ವಿಚಾರದಾಗ ಮಾತಾಡಲಿಕ್ಕೆ ಹತ್ತಿದರs ಜನರಿಗೆ ಒಮ್ಮಿಗಿಲೇ ನಶಾನs ಏರತsದ... (ಎಲ್ಲರೂ ಹಣ್ಣನ್ನು ತಿನ್ನುತ್ತಿದ್ದಾರೆ.)

ವ್ಯಕ್ತಿ-೨ : (ಆಗಲೇ ನಶೆ ಏರಿದವರಂತೆ) ಹೌದು, ಹೌದು, ನೀವು ಹೇಳೂದು ಖರೇ, ಸಾಹೇಬರs, ಜನರನ್ನ ಹೊಡೆದೆಬ್ಬಿಸಲಿಕ್ಕೆ ಇದೇ ಒಂದು ಉಪಾಯ... ನಮ್ಮ ಜಾತೀ-ಧರ್ಮಾ ನಾವು ಕಾಪಾಡಬೇಕು. ವಿದೇಶೀಯರು ಬಂದು ನಮ್ಮ ಧರ್ಮಾ ಹಾಳು ಮಾಡ್ಯಾರ, ನಮ್ಮ ಗುಡಿ-ಗುಂಡಾರಗಳನ್ನು ಒಡದಾರ.

ಎಲ್ಲರೂ : (ಮತ್ತೇರಿದವರಂತೆ) ಹೌದು, ಹೌದು, ನಮ್ಮ ಜಾತಿ-ಧರ್ಮಾ ನಾವು ಕಾಪಾಡಿಕೋಬೇಕು...

ವ್ಯಕ್ತಿ-೨ : ನಮ್ಮ ಧರ್ಮದ ಜನರನ್ನ ಧರ್ಮಾಂತರಗೊಳಿಸಿ ತಮ್ಮ ಧರ್ಮದ ಒಳಗೆ ಸೇರಿಸಿಕೊಳ್ಳಲಿಕ್ಕೆ ಹತ್ಯಾರ. ಅದನ್ನ ತಡೀಬೇಕು. ಸಾಹೇಬರs, ಯಾವ ಹಣ್ಣರೀ ಇವು...? ಏನು ರುಚೀ ಅವ!

ವ್ಯಕ್ತಿ-೩ : (ಅತ್ತಿತ್ತ ನೋಡುತ್ತ) ಅಲ್ಲೆ ನೋಡ್ರಿ, ಅದs ಗಿಡದ್ದು ಕಾಣತಾವ...

ವ್ಯಕ್ತಿ-೧ : ಏ ಯಾರಿದ್ದೀರೋ ಅಲ್ಲೇ... ಇನ್ನೊಂದು ನಾಲ್ಕು ಹಣ್ಣು ಹರಕೊಂಡು ಬರ್ರಿ.

ಒಬ್ಬ ವೇಟರ್ ಬಂದು ಹಣ್ಣುಗಳನ್ನು ಹರಿದು ತಂದು ಪ್ಲೇಟನಲ್ಲಿಡುವನು.

ತೊಗೋಳ್ರಿ... (ವೇಟರ್‌ಗ) ಒಂದು ಚೀಲಾ ತೊಗೊಂಬಾ, ಉಳಿದದ್ದು ಹಣ್ಣು ಹಾಕಿ ಕೊಡು, ಆಫೀಸಿನ್ಯಾಗ ನಮ್ಮ ಪಾರ್ಟೀ ವರ್ಕರ್ಸ್‌ಗೂ ಹಂಚಲಿ... ನಾಳೆ ಇಲೆಕ್ಶನ್ ಕೆಲಸಾ ಮಾಡವರು ಅವರು... ಅವರಿಗೂ ಒಂದಿಷ್ಟು ಹುರುಪು ತುಂಬಲಿ... ನಿರ್ಣಯ ಆಧಂಗಾತು ಹಾಂಗಾದರ... ಧರ್ಮದ ಹಿತಾ... ದೇಶದ ಹಿತಾ... ಅದನ್ನ ನಾವು ಮೊದಲ ಕಾಯಕೋಬೇಕು. ನಮ್ಮ ದೇಶಕ್ಕ ಅವರ ಪುರಾತನ ವೈಭವ ತಿರಗಿ ಬರಬೇಕು. ನಮ್ಮ ಪಕ್ಷ ಈ ಕಾರ್ಯಕ್ರಮಕ್ಕ ಬದ್ಧ ಆಗೇದ. ಜೈ ಭಾರತ ಮಾತಾಕೀ ಜೈ. ನಮ್ಮ ಪುರಾತನ ಧರ್ಮಕ್ಕೆ ಜಯವಾಗಲಿ...

ವ್ಯಕ್ತಿ-೩ : ಆದರs ಸಾಹೇಬರs, ನಮ್ಮ ದೇಶದಾಗೇನು ಒಂದs ಧರ್ಮ ಅದsನs...? ಯಾವ ಧರ್ಮದ ಮಾತಾಡಿದರೂ ಇನ್ನೊಂದು ಧರ್ಮದ ವೋಟ್ಸ್ ಕಳಕೋತೀವಿ.

ವ್ಯಕ್ತಿ-೧ : ಅಲ್ರೀ, ಇಷ್ಟ ದಿನದಿಂದ ರಾಜಕಾರಣದಾಗ ಇದ್ದೀರಿ. ಇನ್ನೂ ಇಷ್ಟೂ ತಿಳದಿಲ್ಲs ನಿಮಗ? ಅವರ ಮುಂದ ಅವರ ಹಂಗs ಮಾತಾಡೂದು, ಇವರ ಮುಂದ ಇವರ ಹಂಗs ಮಾತಾಡೂದು.

ಎಲ್ಲರೂ ಕೂಡಿ : ಭಾರತ ಮಾತಾಕೀ ಜೈ... (ನಶೆ ಏರಿದವರಂತೆ ತೂಗಾಡುತ್ತ ಹೋಗುವರು.)

ಎರಡೂ ಮಂಗಗಗಳು ಹೊರಗೆ ಬಂದು ಆನಂದದಿಂದ ಕುಣಿಯತೊಡಗುವವು.

ಅಜ್ಜ : ಇನ್ನ ಅದs ನೋಡು ಮಜಾ, ಹ್ಯಾಂಗ ಚಳ್ಳಹಣ್ಣು ತಿನಿಸಿದಿವಿ ಇವರಿಗೆ, ದೊಡ್ಡ ಶಾಣ್ಯಾರು ಅಂತ ಹೇಳಿಕೋತಾರ ಮಕ್ಕಳು!

ಇನ್ನೊಂದು ಮಂಗ : ಅಜ್ಜಾ, ನಿನ್ನ ಉಪಾಯ ಅಂತೂ ಸಫಲ ಆತು... ಎಲ್ಲಾರೂ ಹಣ್ಣು ತಿಂಪರು... ಇನ್ನು ಉಳದವರಿಗೆ ತಿನಸಲಿಕ್ಕೆ ಅಂತ ತೊಗೊಂಡೂ ಹೋದರು... ಮುಂದೇನಾಗೂದು ಇನ್ನ, ಅಜ್ಜಾ?

ಅಜ್ಜ : ನೋಡತಿರು, ಇನ್ನ ಅವರಿಗೆಲ್ಲಾ ಹ್ಯಾಂಗ ನಶಾ ಏರತಽದ ಅಂತ... ನಾ ಹೇಳಿದ್ದೆನಲ್ಲಾ ನಿನಗ... ಅವರಿಗೆ ಶಬ್ದದ ನಶಾ ಅಂತ... ಜಾತಿ-ಧರ್ಮಾ ಅನಕೋತ ಹಣ್ಣು ತಿಂದಾರ... ಅವರಿಗೆ ಆ ಶಬ್ದದ್ದಽ ನಶಾ ಏರತಽದ ನೋಡು... ಅದರ ಸಲುವಾಗೇ ಹೊಡದಾಟಾ ಬಡದಾಟಾ ಸುರು ಆಗತಽದ... ನೋಡೀಯಂತ... ಹ್ಯಾಂಗ ಬ್ಯಾಸಿಗ್ಯಾಗಿನ ಅಡಿವೀ ಬೆಂಕೀ ಹಾಂಗ ಹಬ್ಬತಽದ ಈ ಧರ್ಮದ ಬೆಂಕೀ ಅಂತ.

ಅವೂ ಕುಣಿಯುತ್ತ ಹೊರಗೆ ಹೋಗುವವು.

ದೃಶ್ಯ : ೪

ಈ ದೃಶ್ಯದಲ್ಲಿ ಶಕ್ಯವಿದ್ದಷ್ಟು ಜನರನ್ನು ಕೂಡಿಸಬೇಕು. ಪರದೆ ಸರಿದಾಗ ರಂಗದ ಮೇಲೆ ಮೊದಲ ದೃಶ್ಯದಲ್ಲಿಯ ಅದೇ ಪ್ರತೀಕವಿದೆ. ಆದರೆ ಈಗ ಅದರ ಮೇಲೆ ಕೇವಲ ಮಸೀದೆಯ ಗುಂಬಜವಿದೆ. ಮಂಗಗಳು ಅಂದಿನಂತೆಯೇ ಡೊಳ್ಳು ಹಿಡಿದು ಅದರ ಸುತ್ತಲೂ ಕುಣಿಯುತ್ತಿವೆ.

ಮಂಗಗಳು : ಬಾಲಾ ಹೋಗಿ ಡೊಳ್ಳು ಬಂತು ಡುಂ... ಡುಂ...

ಒಂದು ಮಂಗ : ಶ್, ಏನೋ ಗದ್ದಲ ಕೇಳಸತಽದ. ನೋಡ್ರಿ ಅಲ್ಲೆ... (ನೇಪಥ್ಯದ ಕಡೆಗೆ ಕೈ ಮಾಡಿ ತೋರಿಸುವದು. ಎಲ್ಲ ಮಂಗಗಳೂ ಕುಣಿಯುವದನ್ನು ಬಿಟ್ಟು, ಒಂದು ಸಾಲಾಗಿ ನಿಂತು ಬಗ್ಗಿ ನೋಡುವವು.)

ಇನ್ನೊಂದು : ಹೌದಲ್ಲೋ, ದೊಡ್ಡ ದಂಡಽ ಹೊರಟದ... ಅಜ್ಜಾ, ನೋಡಿಲ್ಲೆ, ಹ್ಯಾಂಗ ಮೈಮ್ಯಾಲ ಎಚ್ಚರ ಇಲ್ಲದವರ ಹಾಂಗ ಒದರಿಕೋತ ಹೊಂಟಾರ... ಇತ್ಲಾಕಡೇನಽ ಬರಲಿಕ್ಕೆ ಹತ್ಯಾರ...

ಅಜ್ಜ : (ಬಗ್ಗಿ ನೋಡುತ್ತ) ನೋಡ್ರಿ, ಹ್ಯಾಂಗ 'ನಮ್ಮ ಧರ್ಮಾ, ನಮ್ಮ ಧರ್ಮಾ' ಅಂತ ತಲೀ ಕೆಟ್ಟವರ ಹಾಂಗ ಕಿರಿಚಿಗೊಳ್ಳಿಕ್ಕೆ ಹತ್ಯಾರ... ನಾ ಹೇಳಿದ್ದಿನಿಲ್ಲೋ ನಿಮಗ, 'ಧರ್ಮಾ-ಜಾತಿ' ಅಂತ ಬಡಬಡಿಸಿಕೋತ ಹಣ್ಣು ತಿಂದಾರ, ಅದರದಽ ನಶಾ ಏರತಽದ ಅವರಿಗೆ ಅಂತ...? ನೋಡ್ರಿ ಅಲ್ಲೆ... ನಡೀರಿ, ಲಗೂನಽ ಅಡಿಕ್ಕೊಳ್ಳೂಣು... ಇಲ್ಲೇ ಬಂದರು ಅವರೆಲ್ಲಾ, ಅಡಿಕ್ಕೊಂಡು ಮಜಾ ನೋಡೂಣು.

ಎಲ್ಲ ಮಂಗಗಳು ನೇಪಥ್ಯಕ್ಕೆ.

ಜನರ ದಂಡು ರಂಗಮಂಚದ ಮೇಲೆ ಬರುತ್ತಿದೆ. ಕೈಯಲ್ಲಿ ಲಾಠಿ. ಸುತ್ತಿಗೆಗಳಂತಹ ಸಾಧನಗಳಿವೆ. ದಾರಿಯಲ್ಲಿ ನಿಂತು ತಡೆಯಲೆತ್ನಿಸುತ್ತಿದ್ದ ಇಬ್ಬರು ಪೋಲೀಸರನ್ನು ತಳ್ಳಿ ಮಸೀದೆಯ ಹತ್ತಿರ ಬರುತ್ತಾರೆ. ಗುಂಪಿನಲ್ಲಿಯ ಸಂನ್ಯಾಸಿವೇಶದ ಒಬ್ಬ ವ್ಯಕ್ತಿ ಕಟ್ಟೆಯ ಮೇಲೆ ಹತ್ತಿನಿಂತು ಭಾಷಣ ಮಾಡುತ್ತಾನೆ. ಉಳಿದವರು ನಿದ್ದೆಯಲ್ಲಿದ್ದವರಂತೆ ಕೇಳುತ್ತಾರೆ.

ಸಂನ್ಯಾಸಿ : ಬಂಧುಗಳೇ, ಇಲ್ಲಿ ನಮ್ಮ ಪವಿತ್ರ ದೇವಾಲಯ ಇತ್ತು ಪುರಾತನ ಕಾಲದಾಗ... ನಮ್ಮ ಪೂರ್ವಜರಿಗೆ ದೊಡ್ಡ ಯಾತ್ರಾಸ್ಥಳ ಆಗಿತ್ತು ಇದು... ಈಗ ಪರಧರ್ಮೀಯರು ಆಕ್ರಮಿಸಿಕೊಂಡು ಕೂತುಬಿಟ್ಟಾರ... ಕೆಡವರೀ ಇದನ್ನ... ಧ್ವಂಸ ಮಾಡ್ರಿ... ನಮ್ಮ ಪುರಾತನ ದೇವಾಲಯಾ ಪುನರುಜ್ಜೀವನ ಗೊಳಿಸೂಣು... ಬರ್ರಿ, ಭಕ್ತರೇ, ಜೈ ಭಾರತ ಮಾತಾಕೀ... ಜೈ ಭಗವಾನ್...

ಎಲ್ಲರೂ ಮುನ್ನುಗ್ಗಿ ಹೋಗಿ ಕೈಯಲ್ಲಿದ್ದ ಆಯುಧಗಳಿಂದ ಒಡೆದು ಒಡೆದು ಕಟ್ಟಡವನ್ನ ಕೆಡವುತ್ತಾರೆ.

ಸಂನ್ಯಾಸಿ : (ಜನರನ್ನು ಹುರಿದುಂಬಿಸುತ್ತ) ಬರ್ರಿ, ಬರ್ರಿ, ಭಕ್ತರs, ದೇವಾಲಯಾ ಕಟ್ಟೂಣು... ನಮ್ಮ ಧರ್ಮದ ಪುನರುದ್ಧಾರ ಮಾಡೂಣು...

ಎಲ್ಲರೂ ಕೂಡಿ ದೇವಾಲಯವನ್ನು ಕಟ್ಟುತ್ತಾರೆ. ಅದೇ ಥರ್ಮೋಕೋಲ್ ಚೌಕಗಳನ್ನಿಟ್ಟು– ಕೇವಲ ಮೇಲಿನ ಗೋಪುರವಷ್ಟೇ ಬೇರೆ– ದೇವಾಲಯವನ್ನು ಕಟ್ಟಿ ಗಂಟೆ-ಜಾಗಟೆ ಬಾರಿಸಿ, ಪೂಜೆ ಮಾಡಿ ಜನ ಚದುರುತ್ತಾರೆ.

ಮಂಗಗಳು : (ಮತ್ತೆ ಡೊಳ್ಳು ಬಾರಿಸುತ್ತ ದೇವಾಲಯದ ಸುತ್ತಲೂ ಕುಣಿಯುತ್ತವೆ.) ಬಾಲಾ ಹೋಗಿ ಡೊಳ್ಳು ಬಂತು ಡುಂ... ಡುಂ... ಬಾಲಾ ಹೋಗಿ ಡೊಳ್ಳು ಬಂತು ಡುಂ... ಡುಂ... ಮಸೀದಿ ಹೋಗಿ ಮಂದಿರ ಬಂತು ಡುಂ... ಡುಂ... ಮಸೀದಿ ಹೋಗಿ ಮಂದಿರ ಬಂತು ಡುಂ... ಡುಂ...

ರಂಗದ ಮೇಲೆ ಒಂದು ನಿಮಿಷ ಕತ್ತಲೆ. ಹಿನ್ನೆಲೆಯಲ್ಲಿ ಬೇಂದ್ರೆಯವರ 'ನಿರ್ಬುದ್ಧ' ಕವನದ ಈ ಸಾಲುಗಳನ್ನು ಹಾಡಬಹುದು.

> **ನಾವು ಪೂಜಿಸುತಿಹುದ ಹೊಟ್ಟೆಕಿಚ್ಚು**
> **ಬೇರೆ ಎನ್ನುವದೇಕೆ 'ಬೆಂಕಿ ಹಚ್ಚು'?**
> **ಕೊಲ್ಲುವೆವು, ಸಾಯುವೆವು ಇದೆ ಕಾಯಕಾ**
> **ತಲೆಗೆ ಬೆಲೆಯೆಷ್ಟು ಕೇಳುವ ನಾಯಕಾ!**

ರಂಗದ ಮೇಲೆ ಬೆಳಕಾದಾಗ ಮಂಗಗಳು ಮತ್ತೆ ಅದೇ ರೀತಿ ಕುಣಿಯುತ್ತವೆ.

ಅಜ್ಜ : ಶ್ಶ್, ಮತ್ತೊಂದು ದಂಡು ಬರಲಿಕ್ಕ ಹತ್ತೇದ... ನಡೀರಿ, ನಡೀರಿ, ಅಡಿಕೊಳ್ಳೂಣು... ಮರೆಯಾಗಿ ನಿಂತು ಮಜಾ ನೋಡೂಣು.

ಎಲ್ಲ ಮಂಗಗಳೂ ಅಡಗಿಕೊಳ್ಳುವವು. ಮತ್ತೊಂದು ತಂಡ 'ಬುದ್ಧಂ ಶರಣಂ ಗಚ್ಛಾಮಿ. ಧಮ್ಮಂ ಶರಣಂ ಗಚ್ಛಾಮಿ' ಎಂದು ಪಠಿಸುತ್ತ ರಂಗಮಂಚದ ಮೇಲೆ ಬರುತ್ತದೆ. ಬುದ್ಧ ಭಿಕ್ಷುವಿನಂತೆ ವೇಷ ಧರಿಸಿದ ಒಬ್ಬ ಅವರ ಮುಂದಾಳಾಗಿದ್ದಾನೆ. ಅವನು ಎಲ್ಲರಿಗಿಂತ ಸ್ವಲ್ಪ ಎತ್ತರದಲ್ಲಿ ನಿಂತು ಮಾತನಾಡುತ್ತಾನೆ.

ಭಿಕ್ಷು : ಇದು ಹಿಂದಿನ ಕಾಲದಾಗ ಬೌದ್ಧರ ಆಸ್ತೀ ಆಗಿತ್ತು. ಈ ಸ್ಥಳದಾಗ ಒಂದು ಬೌದ್ಧವಿಹಾರ ಇತ್ತು ಅಂತ ಅಶೋಕ ಸಮ್ರಾಟ ಶಿಲಾಶಾಸನದಾಗ ಬರಸಿಟ್ಟಾನಂತ... ಇತಿಹಾಸಕಾರರು ಹೇಳ್ತಾರ. ಜಗತ್ತಿನ ಮೂಲಿ-ಮೂಲಿಯಿಂದ ಜನ ಈ ವಿಹಾರಕ್ಕ ಬರ್ತಿದ್ದರಂತ. ಮುಂದ ಯಾವನೋ ರಾಜಾ ನಮ್ಮ ವಿಹಾರಾ ಕೆಡಿವಿ ಗುಡೀ ಕಟ್ಟಿಸಿದಾ... ಕೆಡವರಿ ಇದನ್ನ...

ನಮ್ಮ ವಿಹಾರ ಇದ್ದ ಜಾಗಾ ಇದು... ಕೆಡವರಿ ಇದನ್ನ... ಮತ್ತ ನಾವು ವಿಹಾರಾ ಕಟ್ಟೋಣು ಇಲ್ಲೆ... ಬುದ್ಧ ಭಗವಾನರಿಗೆ ಜಯವಾಗಲಿ... ಜಯವಾಗಲಿ...

ಎಲ್ಲರೂ ಮತ್ತೆ ಹುಯ್ಯೆಂದು ಗದ್ದಲ ಹಾಕುತ್ತ ದೇವಾಲಯವನ್ನು ಕೆಡವಿ ಬೌದ್ಧ ಸ್ತೂಪವನ್ನು ಕಟ್ಟುತ್ತಾರೆ. –ಅದೇ ಥರ್ಮೋಕೋಲ್ ಕಟ್ಟಡ. ಮೇಲೆ ಸ್ತೂಪದಾಕಾರ ಇಷ್ಟೇ... ಅದರ ಮುಂದೆ ಕುಳಿತು 'ಬುದ್ಧಂ ಶರಣಂ ಗಚ್ಛಾಮಿ. ಧಮ್ಮಂ ಶರಣಂ ಗಚ್ಛಾಮಿ' ಎಂದು ಪಠಿಸಿ ಎದ್ದುಹೋಗುತ್ತಾರೆ.

ಮಂಗಗಳು ಹೊರಗೆ ಬಂದು ಮೊದಲಿನಂತೆ ಕುಣಿಯತೊಡಗುತ್ತವೆ.

ಮಂಗಗಳು : ಬಾಲಾ ಹೋಗಿ ಡೊಳ್ಳು ಬಂತು ಡುಂ... ಡುಂ...
ಮಸೀದಿ ಹೋಗಿ ಮಂದಿರ ಬಂತು ಡುಂ... ಡುಂ...
ಮಂದಿರ ಹೋಗಿ ವಿಹಾರ ಬಂತು ಡುಂ... ಡುಂ...
ಬಾಲಾ ಹೋಗಿ ಡೊಳ್ಳು ಬಂತು ಡುಂ... ಡುಂ...

ರಂಗದ ಮೇಲೆ ಮತ್ತೆ ಒಂದು ನಿಮಿಷ ಕತ್ತಲೆ. ಬೇಂದ್ರೆಯವರ ಕವನದ ಮುಂದಿನ ಸಾಲುಗಳನ್ನು ಹಾಡಬಹುದು.

> ಭೂಮಿ ಎಂಬುದು ಮಣ್ಣು, ಪ್ರಜೆ ಎಂಬುದೂ ಮಣ್ಣು,
> ಸುಡುಗಾಡು ನಾಗರಿಕತೆ,
> ಒಳಗೆ ಮಸೆಯುತ್ತಿಹುದು ಶಸ್ತ್ರಾಸ್ತ್ರ ಒಳಸಂಚು
> ಹೊರಗೆ ಶಾಸ್ತ್ರದ ಪಾಠ-ಪ್ರವಚನಗಳು

ಬೆಳಕಾದಾಗ ರಂಗಮಂಚದ ಮೇಲೆ ಮೊದಲಿನಂತೆಯೇ ಮಂಗಗಳು ಕುಣಿಯುತ್ತಿವೆ.

ಅಜ್ಜ : ಶ್, ಇನ್ನೊಂದು ದಂಡು ಬರಲಿಕ್ಕೆ ಹತ್ತೇದ... ಶ್, ಗಪ್-ಚಿಪ್... ಬರ್ರಿ, ಮತ್ತ ಅಡಿಕ್ಕೊಂಡು ಮಜಾ ನೋಡೂಣು.

ಈ ಸಲ ಜೈನರ ಗುಂಪು ಬರುತ್ತದೆ.

ಅವರ ಮುಂದಾಳು ಸಂನ್ಯಾಸಿ ಮಾತಾಡುತ್ತಾನೆ.

ಜೈನ ಸಂನ್ಯಾಸಿ : ಬಂಧುಗಳೇ, ಬೌದ್ಧ ವಿಹಾರಕ್ಕಿಂತ ಮೊದಲು ನಮ್ಮ ತೀರ್ಥಂಕರರ ಬಸದಿಗಳಿದ್ದವು ಇಲ್ಲಿ ಎಲ್ಲ ಕಡೆಗೆ... ಈಗಲೂ ಅಗಿದು ನೋಡಿದರ ನಮ್ಮ ಬಸದಿಯ ಅವಶೇಷಗಳು ಕಾಣಸತಾವ. ಇಲ್ಲಿ ಸುತ್ತಮುತ್ತಲಿನ ಪ್ರದೇಶದಾಗೆಲ್ಲಾ ಸಾಕಷ್ಟು ಸಿಕ್ಕಾವ... ಇಲ್ಲೆ ನಮ್ಮ ಪಾರ್ಶ್ವನಾಥ ಮಂದಿರ ಇತ್ತು ಅನ್ನೂದಕ್ಕ ಇತಿಹಾಸದಾಗ ದಾಖಲೇನೂ ಸಿಕ್ಕಾವ... ಅದರ ಮ್ಯಾಲೆ ಬೌದ್ಧರ ವಿಹಾರಾ ಕಟ್ಟಿದರು... ಮೂಲದಾಗ ನಮ್ಮ ಜಾಗಾ ಇದು... ನಮಗ ತಿರಗಿ ಬೇಕು... ಕೆಡವರಿ ಇದನ್ನ... ಮತ್ತ ನಮ್ಮ ಪಾರ್ಶ್ವನಾಥ ಮಂದಿರಾ ಕಟ್ಟೋಣು... ಕೆಡವರಿ ಇದನ್ನ...

ಅವರು ಅದನ್ನು ಕೆಡವುತ್ತಿದ್ದಂತೆ ಹಿನ್ನೆಲೆಯಲ್ಲಿ ಬೇಂದ್ರೆಯವರ ಕವನದ ಮುಂದಿನ ಸಾಲುಗಳು :

ನಮ್ಮ ದೇವರು ಹೆಚ್ಚು; ನಿಮ್ಮ ದೇವರು ಹೆಚ್ಚು,
ದೀಪ ಹಚ್ಚುವ ಕೈಯು ಕೊಲೆಗೆ ಬದ್ಧ,
ಬುದ್ಧನೇ ನಿಜವಿರಲಿ, ಸಿದ್ಧನೇ ನಿಜವಿರಲಿ,
ಇತಿಹಾಸ ತಿಳಿಯದವ ಶುದ್ಧ ನಿರ್ಬುದ್ಧ

ಹಾಡು ಮುಗಿಯುತ್ತಿದ್ದಂತೆಯೇ ರಂಗಮಂಚದ ಮೇಲೆ ಬೆಳಕು ಬೀಳುವಾಗ ಲಂಬಾಣಿಗಳಂತೆ ವೇಷ ಧರಿಸಿದ ಜನರ ಗುಂಪೊಂದು ಬಂದು ಜೈನರ ಗುಂಪನ್ನು ಹೊಡೆದೋಡಿಸುವದು.

ಅವರ ಮುಂದಾಳು : ಏ ಹೋಗ್ರ್ಯೋ, ಹೋಗರ್ಯೋ ಮಕ್ಕಳರ್‍ಯಾ, ನಿಮ್ಮಕಿಂತಾ ಮೊದಲ ಇಲ್ಲೆ ನಮ್ಮ ತಾಂಡೇ ಇತ್ತು. ನಮ್ಮ ತಾಂಡೇದ ಜಾಗಾ ಇದು... ನಮ್ಮ ತಾಂಡೇದ ದೇವರು ಹುಲಿ... ಹ್ಞಾ, ವಾಘೋಬಾ... (ಹುಲಿಯಂತೆ ಜಿಗಿದು ಗುಡುಗುವನು) ಇಲ್ಲೆ ನಮ್ಮ ವಾಘೋಬಾನ ಗುಡಿ ಇತ್ತು. ನಾವು ಮತ್ತ ನಮ್ಮ ವಾಘೋಬಾನ ಗುಡಿ ಕಟ್ಟವರು ಇಲ್ಲೆ... ಏ ಬರ್ರಲೇ, ಕಟ್ಟೋಣು...

ಅವರು ಚೀರಾಡುತ್ತ ಕೂಗಾಡುತ್ತ ಗುಡಿಯನ್ನು ಕಟ್ಟಲು ಪ್ರಯತ್ನಿಸುತ್ತಿದ್ದಂತೆ ಇಬ್ಬರು ಬೇಟೆಗಾರರಂತೆ ವೇಷ ಧರಿಸಿದ ಕಾಡುಜನರಂತೆ ಕಾಣುವ ವ್ಯಕ್ತಿಗಳು ಮೆಲ್ಲಗೆ ಸದ್ದಿಲ್ಲದೆ ಬಂದು ಅವರು ಒಂದು ಮೂಲೆಯಲ್ಲಿಟ್ಟಿದ್ದ ಕುಡುಗೋಲು-ಕತ್ತಿಗಳನ್ನು ತಮ್ಮ ಗಂಟಿಗೆ ಸೇರಿಸಿಕೊಳ್ಳುವರು. ನಂತರ ಬಿಲ್ಲು-ಬಾಣಗಳನ್ನೆತ್ತಿ ಹಿಡಿದು ಹಾರಿ ರಂಗಮಂಚದ ಮಧ್ಯಕ್ಕೆ ಬರುವರು.

ಬೇಟೆಗಾರರು: ಏಯ್ ಯಾರೋ ನೀವು...? ಇಲ್ಲ್ಯಾಕ ಬಂದೀರಿ? ನಮ್ಮ ಜಂಗಲ್ ಇದು... ನಡೀರಿ... ಇಲ್ಲಿಂದ... ನಡೀಲಿಲ್ಲಾ ಅಂದರ ಒಂದs ಬಾಣದಲೇ ನಿಮ್ಮನ್ನೆಲ್ಲಾ ಕೊಂದ ಹಾಕತೀವಿ... (ಬಾಣವನ್ನೇರಿಸಿ ಸಿದ್ಧರಾಗಿ ನಿಲ್ಲುವರು. ಲಂಬಾಣಿಗಳ ಗುಂಪು ಹೆದರಿ ಪಲಾಯನ ಮಾಡುವದು) ಇಲ್ಲೆ ಎಲ್ಲಾರಕಿಂತ ಮೊದಲ ನಮ್ಮ ಗುಡಿಸಲ ಇತ್ತು. ಓಡಿ ಹೋದರಲೇ, ನಡೀ, ಗುಡಸಲಾ ಕಟಗೊಳ್ಳೋಣು. (ಗುಡಿಸಲು ಕಟ್ಟಲು ಪ್ರಾರಂಭಿಸುವರು.)

ಮಂಗಗಳು ಮೆಲ್ಲಗೆ ಹಿಂದಿನಿಂದ ಬಂದು ಅವರ ಬಿಲ್ಲು ಬಾಣಗಳನ್ನೆಲ್ಲ ಮುರಿದು ಹಾಕುವವು. ಒಂದು ಮಂಗ ಅವರ ಗಂಟನ್ನೆತ್ತಿಕೊಂಡು ಓಡಿಹೋಗುವದು. ಆಮೇಲೆ ಉಳಿದವೆಲ್ಲ ಬಂದು ಕೇಕೆ ಹಾಕುತ್ತ ಅವರ ಮೈಮೇಲೆ ಬಿದ್ದು ಅವರನ್ನು ಅಲ್ಲಿಂದ ಓಡಿಸುವವು.

ಅಜ್ಜ : ತಮ್ಮ ಜಾಗಾ ಅಂತ... ಎಲ್ಲಾರಕಿಂತ ಮೊದಲ ಇಲ್ಲಿ ನಾವಿದ್ದಿವಿ. ಇಲ್ಲೆ ಎಂಥೆಂಥಾ ಮರಗೋಳಿದ್ದವು... ಆಹಾ, ಏನು ಹಾರ್‍ಯಾಡತಿದ್ದಿವಿ ನಾವು! ಏನೋ ಪಾಪ, ಈ ಮನಶ್ಯಾರು ಎಲ್ಲಿಂದನೋ ಬಂದರು. ಇರವಲ್ಲರ್‍ಯಾಕ ನಮ್ಮ ಜೋಡಿ ಅಂತ ಬಿಟ್ಟರs... ಅಡವೀ ಎಲ್ಲಾ ಧ್ವಂಸ ಮಾಡಿಬಿಟ್ಟರು... ಬರೇ ಜಗಳಾ... ಯುದ್ಧಾ... ಅದೇನು ಗುಂಡು ಹಾರಸೂದು... ಏನು ಬಾಂಬು ಹಾಕೂದು... ಛಿ ಮೂರ್ಖರು! ಜಗತ್ತೆಲ್ಲಾ ಹಾಳು ಮಾಡಿಬಿಟ್ಟರು...

ಉಳಿದೆಲ್ಲ ಮಂಗಗಳು : ಹೋದರು... ಹಾಳಾಗಿ ಹೋದರು... ನಿಶ್ಚಿಂತ ಆತು.

ಎಲ್ಲ ಮಂಗಗಳೂ ಕೂಡಿ ಆ ಕೆಂಪು ಹಣ್ಣಿನ ಗಿಡವನ್ನು ರಂಗದ ಮೇಲೆ ತರುವವು. ಅದನ್ನು ಮಧ್ಯ ಇಟ್ಟು, ಆನಂದದಿಂದ ಕುಣಿಯತೊಡಗುವವು. ಎಲ್ಲ ಮಂಗಗಳಿಗೂ ಈಗ ಬಾಲಗಳಿವೆ.

ಮಂಗಗಳು : ಡೊಳ್ಳು ಹೋಗಿ ಬಾಲಾ ಬಂತು ಡುಂ... ಡುಂ...
ಡೊಳ್ಳು ಹೋಗಿ ಬಾಲಾ ಬಂತು ಡುಂ... ಡುಂ...
ಮಸೀದಿ ಹೋಗಿ ಮಂದಿರ ಬಂತು ಡುಂ... ಡುಂ...
ಮಂದಿರ ಹೋಗಿ ವಿಹಾರ ಬಂತು ಡುಂ... ಡುಂ...
ವಿಹಾರ ಹೋಗಿ ಬಸದಿ ಬಂತು ಡುಂ... ಡುಂ...
ಬಸದಿ ಹೋಗಿ ಹುಲಿ ಬಂತು ಡುಂ... ಡುಂ...
ಹುಲಿ ಹೋಗಿ ಬಾಲಾ ಬಂತು ಡುಂ... ಡುಂ...
ಡೊಳ್ಳು ಹೋಗಿ ಬಾಲಾ ಬಂತು ಡುಂ... ಡುಂ...

ಸಮಾಪ್ತ.

ದಮಯಂತಿ ನರೇಗಲ್ಲ : ಇಂಪನ, ೪ನೇ ಕ್ರಾಸ್, ಸಾಧನಕೇರಿ, ಧಾರವಾಡ-೫೮೦ ೦೦೮

ಪುಸ್ತಕ ಪರಿಶೀಲನೆ

೧. ಮುತ್ತಿನ ಸತ್ತಿಗೆ : ಡಾ. ತಾಳ್ತಜೆ ವಸಂತಕುಮಾರ

ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ-೯೮, ಪ್ರ.ಮು. ೨೦೦೧, ಪು.೩೧೨, ರೂ. ೧೫೦/-

ಪ್ರಸ್ತುತ ಪುಸ್ತಕದಲ್ಲಿ 'ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತಪಡಿಸಿದ ದತ್ತಿ ಉಪನ್ಯಾಸಗಳು, ವಿಚಾರಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು, ಸಂಭಾವನಾ ಗ್ರಂಥಗಳಲ್ಲಿ ಸೇರ್ಪಡೆಯಾದ ಲೇಖನಗಳು ಹಾಗೂ ನಾಡಿನ ಮಹತ್ವದ ನಿಯತಕಾಲಿಕೆಗಳಲ್ಲಿ ಬೆಳಕು ಕಂಡ ಬರೆಹಗಳು ಸೇರಿವೆ.' ಒಟ್ಟು ಲೇಖನಗಳು ೨೦. ಎಲ್ಲವೂ ಸಂಶೋಧನಾಪರವಾಗಿವೆ. ವಸ್ತುಗಳ ದೃಷ್ಟಿಯಿಂದ ಇವೆಲ್ಲವನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು : ಸಾಹಿತ್ಯ, ಭಾಷಾವಿಜ್ಞಾನ ಮತ್ತು ಸಂಸ್ಕೃತಿ. ಸಾಹಿತ್ಯವಿಷಯಕ ಲೇಖನಗಳನ್ನು ಮತ್ತೆ ಎರಡು ಉಪಭಾಗ ಮಾಡಬಹುದು : ಅ. ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಆ. ಅರ್ವಾಚೀನ ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟವು ಎಂದು. ಈ ಸಂಕಲನದಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳೇ ಪ್ರಧಾನವಾಗಿವೆ. ಅವುಗಳ ಒಟ್ಟು ಸಂಖ್ಯೆ ೧೪. ಇನ್ನುಳಿದವುಗಳಲ್ಲಿ ೨ ಭಾಷಾಭ್ಯಾಸಕ್ಕೆ ಮತ್ತು ೨ ಕನ್ನಡ ಸಂಸ್ಕೃತಿಗೆ ಸಂಬಂಧಪಟ್ಟವು ಇವೆ.

ತಾಳ್ತಜೆಯವರ ಸಾಹಿತ್ಯಸಂಶೋಧನೆಯ ಹರವು ಮತ್ತು ಬೀಸು ಬಲವಾಗಿದೆ. ಆದಿಕವಿ ಪಂಪನಿಂದ ಹಿಡಿದು ಅವರ ಸಾಹಿತ್ಯಾಸಕ್ತಿ ಆಧುನಿಕ ಕವಿಯಾದ ಶಿವರುದ್ರಪ್ಪನವರ ವರೆಗೂ ಹರವಿಕೊಂಡಿದೆ. ಈ ಆಸಕ್ತಿಯು ಕೇವಲ ಸಾಹಿತ್ಯಕೃತಿಗಳ ಭಾಷೆ, ಅವುಗಳ ಬಂಧ, ಶೈಲಿ ಇವಿಷ್ಟಕ್ಕೇ ಸೀಮಿತವಾಗಿಲ್ಲವೆನ್ನುವುದೇ ತಾಳ್ತಜೆಯವರ ವೈಶಿಷ್ಟ್ಯ. ಅವರು ತಾವು ಕೈಗೆತ್ತಿಕೊಂಡ ಕೃತಿಗಳ, ಕೃತಿಕಾರರ ಸಾಂಸ್ಕೃತಿಕ ಸಂದರ್ಭಗಳನ್ನೂ ಪರಿಕಿಸುತ್ತಾರೆ; ಹೀಗಾಗಿ— ಸಾಮಾನ್ಯವಾಗಿ ನಾವು ನೋಡುವ ಸಾಹಿತ್ಯ ವಿಮರ್ಶಾತ್ಮಕ ಲೇಖನಗಳಲ್ಲಿ ಕಾಣಸಿಗದ—ಹೆಚ್ಚಿನ ಗಾಂಭೀರ್ಯ, ತೂಕ ಇಲ್ಲಿಯ ಲೇಖನಗಳಿಗೆ ಇದೆ. ಉದಾಹರಣೆಗೆ ಈ ಸಂಕಲನದ ಮೊದಲ ಲೇಖನವಾದ 'ಪಂಪ ಮತ್ತು ಪರಿಸರ' ಎಂಬುದನ್ನೇ

ತೆಗೆದುಕೊಳ್ಳಿರಿ. ತಾಳ್ತಜೆಯವರು ತಮ್ಮ ಸಂಶೋಧಕನ ವಿಚಕ್ಷಣೆಯನ್ನು ಪಯೋಗಿಸಿಕೊಂಡು ಪರಿಸರ ಶಬ್ದದ ವ್ಯಾಪ್ತಿಯನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಾರೆ. ಅವರ ಪ್ರಕಾರ ಪಂಪನ ಪರಿಸರದ ಅಭ್ಯಾಸ ಮಾಡಬೇಕಾದರೆ ಅಂಥ ಅಭ್ಯಾಸವು ಈ ಕೆಳಗಿನ ಮಾನದಂಡಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ :

೧. ಪಂಪನ ಕೃತಿಗಳಲ್ಲಿ ಅಭಿವ್ಯಕ್ತವಾದ ಆಂತರಿಕ-ಬಾಹ್ಯ ಪರಿಸರ,

೨. ಕವಿಯ ಕಾಲದಲ್ಲಿ ಪರಿಸರ ಮೂಲವಾದ ಸಂಘರ್ಷದ ನೆಲೆಗಳು,

೩. ಇವುಗಳಿಗೆ ಕವಿಯು ಸ್ಪಂದಿಸಿದ ರೀತಿ,

೪. ಎರಡು ಅತಿಗಳ ಮಧ್ಯಬಿಂದುವಾಗಿರುವ ಅವನ ಕಾವ್ಯ,

೫. ಪಂಪನ ಕುರಿತಾದ (ಈ ವರೆಗಿನ) ಅಧ್ಯಯನಗಳ ಸಮೀಕ್ಷೆ,

೬. ಪಂಪನಲ್ಲಿ ಜಾಗೃತವಾಗಿದ್ದ ಪರಿಸರ ಪ್ರಜ್ಞೆಯ ಕಲ್ಪನೆ, ಜಿಜ್ಞಾಸೆ..... ಹೀಗೆ.

ತಾಳ್ತಜೆಯವರ ಸಮೀಕ್ಷೆ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ನಿರ್ಧರಿಸುವುದು ಪಂಪನ ಕಾವ್ಯಾಭ್ಯಾಸಿಗಳಿಗೆ ಬಿಟ್ಟದ್ದು. ಆದರೆ ಈ ಮತ್ತು ಈ ಸಂಗ್ರಹದ ಇನ್ನಿತರ ಲೇಖನಗಳಲ್ಲಿ ಅವರು ಅಳವಡಿಸಿಕೊಂಡ ಸಂಶೋಧನಾತ್ಮಕ-ಸಾಹಿತ್ಯಿಕ ದೃಷ್ಟಿಕೋಣವು ಗಮನಾರ್ಹ, ಅಭ್ಯಾಸಾರ್ಹ.

ಈ ಸಂಕಲನದಲ್ಲಿಯ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಎರಡು ಲೇಖನಗಳು ಕನ್ನಡದ ಪದಕೋಶ ಮತ್ತು ಕಿಟೆಲ್ಲರ ಕನ್ನಡ ನಿಘಂಟುವನ್ನು ಕುರಿತವಾಗಿವೆ. ಇನ್ನುಳಿದ ಎರಡು ಲೇಖನಗಳು ತುಳು ಮತ್ತು ಹವ್ಯಕ ಸಂಸ್ಕೃತಿಗೆ ಸಂಬಂಧಿಸಿವೆ. ಇದರಲ್ಲಿ ನನಗೆ ಬಹಳ ಮೆಚ್ಚಿಗೆಯಾದ ಲೇಖನವೆಂದರೆ ದಕ್ಷಿಣ ಕನ್ನಡ ಹವ್ಯಕ ಬ್ರಾಹ್ಮಣರ ಊಟದ ಅಡುಗೆ ಬಗ್ಗೆ ಅವರು ಬರೆದುದು. ಇಂಗ್ಲಂಡ್, ಅಮೇರಿಕಾ ದಂಥ ದೇಶಗಳ ಸಂಶೋಧಕರು ಸಂಸ್ಕೃತಿಯ ಅಭ್ಯಾಸಗಳಲ್ಲಿ ತಾವು ಮಾನ್ಯಮಾಡಲ್ಪಟ್ಟ, ನಮ್ಮ ದೇಶದ ಅನೇಕ ಸಂಸ್ಕೃತಿ-ಸಂಶೋಧಕರಿಗೆ ಮಾದರಿ ಕೂಡ ಆದ, 'ಪರಿಕರ ಪೃಥಃಕರಣ' (Componential Analysis) ಪದ್ಧತಿಯನ್ನು ತಾಳ್ತಜೆಯವರು ಈ ಲೇಖನದಲ್ಲಿ ಅಳವಡಿಸಿಕೊಂಡಿದ್ದಾರೆ. ಆದರೆ ಒಂದು ಮಾತು: ಸಂಸ್ಕೃತಿಯೆನ್ನುವುದು— ಅದು ಜನಾಂಗವೊಂದರ ಅಡುಗೆಯೇ ಆಗಿರಲಿ, ವೇಷಭೂಷಣವೇ ಆಗಿರಲಿ— ಸಂಕೀರ್ಣವಾದ, ಸಾಮರಸ್ಯದಿಂದೊಡಗೂಡಿದ ಆಚರಣೆಯಷ್ಟೇ! ಅಂಥವನ್ನು ಅಭ್ಯಾಸ ಮಾಡುವಾಗ ನಾವು ನಮ್ಮ ಅನುಕೂಲಕ್ಕಾಗಿ ಆ ಸಂಸ್ಕೃತಿಯ ಅಭಿವ್ಯಕ್ತಿಯನ್ನು (ಉದಾ : ದಕ್ಷಿಣ ಕನ್ನಡದ ಹವ್ಯಕರ ಅಡುಗೆಯನ್ನು) ವಿಘಟಿಸಿ ನೋಡಬಹುದೇನೋ ಖರೆ; ಅದೇ ವೇಳೆಗೆ ಹಾಗೆ ಅಭಿವ್ಯಕ್ತವಾದ ಆ ಸಂಸ್ಕೃತಿಯ ಸಾಮೂಹಿಕ-ಸಾಮಾಜಿಕ-ವ್ಯಷ್ಟಿನಿಷ್ಠ ಸಂಘಟನಾ ಶಕ್ತಿಯನ್ನೂ ಸೂಚಿಸಲು ಮರೆಯಬಾರದಲ್ಲವೇ?

ಬರಿಯ ಓದಿಸಿಕೊಂಡು ಹೋಗುವುದಷ್ಟೇ ಸಾಹಿತ್ಯದ ಲಕ್ಷಣ ಅಥವ 'ಬರಿಯ ಓದಿಸಿಕೊಳ್ಳುವು ದಷ್ಟೇ ಸಾಹಿತ್ಯದ ಲಕ್ಷ್ಯ ಎನ್ನುವ ಭ್ರಮೆ ಇಡಿಯ (ಕನ್ನಡ?) ಸಾರಸ್ವತ ಪ್ರಪಂಚವನ್ನು ಆವರಿಸಿ'ಕೊಂಡಿರುವ ಇಂದಿನ ದಿನಮಾನದಲ್ಲಿ, ಸಂಶೋಧನ ಲೇಖನಗಳು ಅಷ್ಟರ ಮಟ್ಟಿಗೆ ಓದಿಸಿಕೊಳ್ಳುವುದಿಲ್ಲ ಎನ್ನುವುದೇನೋ ನಿಜ; ಅಂಥ ಓದಿಗೆ ತಕ್ಕ ಒಲುಮೆ, ಆಸಕ್ತಿ ಓದುಗರಲ್ಲಿ ಇರಬೇಕಾಗುತ್ತದೆ ಎನ್ನುವುದೂ ಅಷ್ಟೇ ನಿಜ. ಆದರೂ ಇದರಲ್ಲಿ ಸಂಶೋಧಕ-ಲೇಖಕರದೂ, ಒಂದಿಷ್ಟು ಜವಾಬ್ದಾರಿ ಇರುತ್ತದಲ್ಲವೇ? ತಾವು ಬರೆದ ಲೇಖನಗಳ ಭಾಷೆ ಅತೀ ತಾಂತ್ರಿಕವಾಗಿಯೋ, ಅಥವಾ ಅದನ್ನು ಇಂಗ್ಲಿಶ್‌ನಲ್ಲಿ ಭಾಷಾಂತರಿಸಿಕೊಂಡು ಓದಿ ಅರ್ಥಮಾಡಿಕೊಳ್ಳಬಲ್ಲವರಿಗಾಗಿಯೋ ಇದ್ದರೆ ಆಗ ಪಾಪ, ಸಾಮಾನ್ಯ ಓದುಗರದೇನು ತಪ್ಪು? ಉದಾಹರಣೆಗೆ, ತಾಳ್ತಜೆಯವರು ಮೊದಲ ಮಾತಿನಲ್ಲಿ ತಮ್ಮ ಬಗ್ಗೆ ಹೇಳಿಕೊಂಡ ಈ ಮಾತನ್ನು ಗಮನಿಸುವುದು :

"ಇಂದಿನ ಸಾಹಿತ್ಯಿಕ ಸಂದರ್ಭದ ಎಲ್ಲ ಬರೆಹಗಾರರಂತೆಯೇ ನಾನು ಕೂಡ ಈ ಒಳ-ಹೊರಗಿನ ನಿರ್ಬಂಧಗಳನ್ನು ಸ್ವೀಕರಿಸಿಯೇ ಬರೆಯುವವನು. ವಿಭಜನೆ, ನಾಶ, ಸ್ಥಾನಾಂತರ,

ರೂಪಪಲ್ಲಟ, ವರ್ಗಾವಣೆಗಳ ಬಗೆಗಿನ ಔತ್ಸುಕ್ಯ-ಆತಂಕಗಳೆರಡನ್ನೂ ಅನುಭವಿಸುತ್ತಾ ಅನಿಸಿಕೆಗಳಿಗೆ ಸ್ಥಾಯೀರೂಪ ಕೊಡುವ ಕ್ರಿಯೆಗೆ ಹೊಂದಿಕೊಂಡವನು....." ಇತ್ಯಾದಿ, ಇತ್ಯಾದಿ.

ಇಂಥ ಭಾಷೆಯಾಗಲಿ, ಅಥವಾ ಇಂಥ ಭಾಷೆಯನ್ನೊಳಗೊಂಡ ಲೇಖನಗಳಾಗಲಿ ಸಾಮಾನ್ಯ ಓದುಗರಿಗಾಗಿ, ಅಂದರೆ 'ಬರಿಯ ಓದಿಸಿಕೊಳ್ಳುವುದಷ್ಟೇ ಸಾಹಿತ್ಯದ ಲಕ್ಷ್ಯ'ವೆಂದು ನಂಬಿದ ಓದುಗರಿಗಾಗಲಿ ಅಲ್ಲ ಎಂದು ತಾಳ್ತಜೆಯವರು ಅನ್ನುತ್ತಾರಾದರೆ ಅದಕ್ಕೆ ಪ್ರತ್ಯುತ್ತರವಿಲ್ಲ; ಆದರೆ, ಗಂಭೀರ ಸಂಶೋಧಕರಾಗಿ, ಅಂಥ ಸಂಶೋಧನೆಗಳ ಮುಖವಾಣಿಯಾಗಿ, ಲೇಖಕರಾಗಿ, ಸಾಮಾನ್ಯ ಸುಶಿಕ್ಷಿತರೊಡನೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವ, ಅವನ್ನು ತಿಳಿಸಿ ಹೇಳುವ, ತಿದ್ದುವ, ಹೊಣೆಯನ್ನು ಇವರು ತಾವಾಗಿಯೇ ಕಳೆದುಕೊಳ್ಳುತ್ತಿದ್ದಾರಲ್ಲ! ಎಂದು ಕಾಳಜಿಯಾಗುತ್ತದೆ. ಅಷ್ಟೆ.

ಒಟ್ಟಿನ ಮೇಲೆ, ತಾಳ್ತಜೆಯವರ ಲೇಖನಗಳು ಕುತೂಹಲಕಾರಿಯಾಗಿವೆ, ವಿಚಾರ ಪ್ರಚೋದಕವಾಗಿವೆ, ಅಭ್ಯಾಸಾರ್ಹವಾಗಿವೆ.

ಪುಸ್ತಕದ ಕೊನೆಗೆ ತಮ್ಮ ಸ್ವಂತದ ಕೃತಿಗಳ/ಲೇಖನಗಳ ಪಟ್ಟಿಯನ್ನು ಕೊಡುವುದರ ಜೊತೆಗೆ ಈ ಸಂಗ್ರಹದ ಲೇಖನಗಳಲ್ಲಿ ತಾಳ್ತಜೆಯವರು ಉಪಯೋಗಿಸಿಕೊಂಡ ಇತರರ ಲೇಖನಗಳ/ಕೃತಿಗಳ ಆಕರವನ್ನೂ ಕೊಟ್ಟಿದ್ದರೆ ಅವರ(ಅಂದರೆ ತಾಳ್ತಜೆಯವರ)ಸಂಶೋಧನಾಗೌರವಕ್ಕೆ ಪುಟವಿಟ್ಟಂತಾಗುತ್ತಿತ್ತು.
—ಡಾ. ಬಿ. ಟಿ. ದೇಸಾಯಿ, ಅಮೃತಾ, ೨೩೦, ರಾಣಿ ಚೆನ್ನಮ್ಮ ನಗರ, ಧಾರವಾಡ-೫೮೦ ೦೦೧

೨. *ಅಮ್ಮ ಪಂಡರಿಬಾಯಿ* : ಸಿ. ಎಸ್. ನಂಜುಂಡಯ್ಯ

ಅಭಿರುಚಿ ಪ್ರಕಾಶನ, ೫ನೇ ಕ್ರಾಸ್, ಬಸವನಗುಡಿ, ಶಿವಮೊಗ್ಗ-೧, ಪ್ರ. ಮು. ೨೦೦೩, ಪು. ೧೭೪, ರೂ. ೨೦೦/-

ಆತ್ಮಚರಿತ್ರೆಯಾಗಲಿ, ಜೀವನಚರಿತ್ರೆಯಾಗಲಿ ಸಾರ್ಥಕತೆ ಪಡೆಯುವುದು ವೈಭವೀಕರಣ ರಹಿತ ವಾಸ್ತವ ಬರಬಣಿಗೆಯಿಂದ. ಅಂಥ ಕೃತಿಗಳು ನಮ್ಮ ಸಾಹಿತ್ಯದಲ್ಲಿ ಸಾಕಷ್ಟು ಬಂದಿವೆ. ಆದರೆ ಚಲನಚಿತ್ರ ಕಲಾವಿದರ ಕುರಿತಾಗಿ ಬಂದಿರುವ ಅಂಥ ಕೃತಿಗಳು ಕಡಿಮೆ ಎಂದೇ ಹೇಳಬೇಕು. ಸಿ. ಎಸ್. ನಂಜುಂಡಯ್ಯನವರು ಆ ಕೊರತೆಯನ್ನು ನೀಗಿಸಿ ಜೀವನಚರಿತ್ರೆಯನ್ನು ಆತ್ಮಚರಿತ್ರೆಯ ಮಟ್ಟಕ್ಕೆ ಏರಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಅಮ್ಮ ಪಂಡರಿಬಾಯಿ' ಕಲಾವಿದೆ ಪಂಡರಿಬಾಯಿ ಅವರ ಬದುಕು ಬರಹದ ದಾಖಲೆ. ಅಂದಿನ ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ ಭಟ್ಕಳದಲ್ಲಿ ೧೯೨೪ರಲ್ಲಿ ಜನಿಸಿದ ಪಂಡರಿಬಾಯಿ ಕಲಾವಿದೆಯಾಗಿ, ಕನ್ನಡ ಚಿತ್ರನಿರ್ಮಾಪಕಿಯಾಗಿ ಕನ್ನಡದೊಂದಿಗೆ ದಕ್ಷಿಣ ಭಾರತದ ಚಿತ್ರೋದ್ಯಮದಲ್ಲಿ ಒಂದು ಶಕೆಯನ್ನೇ ನಿರ್ಮಿಸಿದರು. ಸಹಜ ಅಭಿನಯದೊಂದಿಗೆ ಹೃದಯಶ್ರೀಮಂತಿಕೆಯನ್ನೂ ಮೈಗೂಡಿಸಿಕೊಂಡು 'ಅಮ್ಮ'ನಾಗಿ ಕನ್ನಡಿಗರ ಹೃದಯಸಾಮ್ರಾಜ್ಯದಲ್ಲಿ ಭದ್ರವಾಗಿ ಬೇರೂರಿದರು. ಆ ಚಿತ್ರಣ ಇಲ್ಲಿ ಹೃದಯಂಗಮವಾಗಿ ಬಂದಿದೆ.

ಹೇಗಿದ್ದರು ಪಂಡರಿಬಾಯಿ ಎಂದರೆ ಹೀಗಿದ್ದರು ಎಂಬುದನ್ನು ಇದಕ್ಕಿಂತ ಚೆನ್ನಾಗಿ ವಿವರಿಸುವುದು ಸಾಧ್ಯವಿಲ್ಲ. 'ಶುಭ್ರ ಬಿಳಿ ಸೀರೆ ಆಕೆಯ ಮೊದಲ ಆಯ್ಕೆ. ಅಗಲವಾದ ಮುಖದ ವಿಶಾಲ ಹಣೆಗೆ ದೊಡ್ಡ ಕುಂಕುಮ ಎರಡನೆಯ ಆಯ್ಕೆ. ರೇಷ್ಮೆ ಸೀರೆಗಳು ಬಂಗಾರದ ಒಡವೆಗಳು, ಕೈತುಂಬ ಹಣ ಅವರು ಅಲಕ್ಷಿಸಿದ ವಸ್ತುಗಳು. ಬದುಕಿನುದ್ದಕ್ಕೂ ಬಂಧುಗಳಿಗೇ ಅಲ್ಲದೆ ಇತರರಿಗೂ ಗಂಧದ ಕೊರಡಾದರು. ತಾನು ಗಳಿಸಿದುದನ್ನು ಇತರರ ಒಳಿತಿಗಾಗಿ ಬಳಸಿದರು. ಪಾಂಡುರಂಗನ ಸ್ಮರಣೆ ಮಾಡುತ್ತಲೇ ಎಲ್ಲಾ ಉತ್ತಮ ಕಾರ್ಯಗಳನ್ನೂ ಮಾಡಿ ಮುಗಿಸಿದರು. ಅವರ ವಿಚಾರವಲ್ಲಿ ಹೇಳುವುದಾದರೆ ಜೀವನರಂಗ ಮತ್ತು ಚಿತ್ರರಂಗದ ಜೀವನ ಒಂದಕ್ಕೊಂದು ಪೂರಕವಾಗಿದ್ದವು.'

ಪಂಡರಿಬಾಯಿ ಅವರು ಕನ್ನಡ, ತುಳು, ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದೀ ಚಿತ್ರಗಳಲ್ಲಿ ಅಭಿನಯಿಸಿದ್ದರೂ ಕನ್ನಡ ಚಿತ್ರರಂಗದಲ್ಲಿ ಅವರು ತಮ್ಮ ವಿಶಿಷ್ಟ ಛಾಪು ಮೂಡಿಸಿದ್ದನ್ನು ಲೇಖಕರು ಸರಿಯಾಗಿ ಪ್ರಸ್ತಾಪಿಸಿದ್ದಾರೆ : `ಅಮ್ಮ ಪಾತ್ರದ ಹಿರಿಮೆಯನ್ನು ಪಂಡರಿಬಾಯಿ ತಮ್ಮ ಜೀವನದ ಇಬ್ಬರಿಂದ ಬಳುವಳಿಯಾಗಿ ಪಡೆದಿದ್ದಾರೆ. ಮೊದಲನೆಯದು ಅವರ ತಾಯಿ ಕಾವೇರಮ್ಮ. ಎರಡನೆಯದು ಅವರ ಮೊದಲನೇ ಅತ್ತಿಗೆ ಶ್ರೀಮತಿ ಶಾರದಾಬಾಯಿ. ತಾಯಿಯಾದವಳು ಹೇಗಿರಬೇಕು? ಹೇಗೆ ನಡೆದುಕೊಳ್ಳಬೇಕೆಂಬುದನ್ನು ಇವರಿಬ್ಬರಿಂದ ನೋಡಿ ಕಲಿತರು. ಅದನ್ನು ಬೆಳ್ಳಿಪರದೆಯ ಅಮ್ಮನಾಗಿ ಬೆಳೆಸಿಕೊಂಡರು.` ಬಾಲ್ಯದಿಂದ ಅಂತ್ಯದ ವರೆಗಿನ ಅನೇಕ ಮಾಹಿತಿಗಳು, ಅನೇಕ ಸಾರ್ಥಕ ಹೇಳಿಕೆಗಳು ಇಲ್ಲಿ ಸೇರಿವೆ. ಇನ್ನೂ ಸೇರಬೇಕಾದ ಕೆಲವು ಮಾಹಿತಿಗಳ ಕೊರತೆ ಈ ಕೃತಿಯಲ್ಲಿ ಇರುವುದನ್ನೂ ಲೇಖಕರು ಪ್ರಾಂಜಲವಾಗಿ ಒಪ್ಪಿಕೊಳ್ಳುತ್ತಾರೆ.

ಅನೇಕ ಕಪ್ಪು ಬಿಳುಪು ಮತ್ತು ವರ್ಣಚಿತ್ರಣಗಳ ಸುಂದರ ಮುದ್ರಣದ ವಿನ್ಯಾಸದ ಈ ಪುಸ್ತಕದ ೧೮ ಅಧ್ಯಾಯಗಳೂ ವಿಶಿಷ್ಟ್ಯವಾಗಿವೆ. ಕೊನೆಯ ಮೂರು– ಜ್ಞಾನೇಶ್ವರಿ, ಅಭಂಗಗಳು, ಕಥನ-ಕವನಗಳು– ಅಧ್ಯಾಯಗಳು ಪಂಡರಿಬಾಯಿಯವರ ಕವಿಹೃದಯವನ್ನು ತೆರೆದಿಡುವ ಬರಹಗಳು. ಕಲಾವಿದೆಯಂತೆ ಕವಯಿತ್ರಿಯೂ ಆಗಿದ್ದ ಪಂಡರಿಬಾಯಿಯವರ ಕುರಿತಾದ ಇದು ಮಾದರಿಯ ಕೃತಿ.

—ಜಿ. ಟಿ. ಶ್ರೀಧರ ಶರ್ಮ, ತ್ಯಾಗರಾಜ ವಿಸ್ತರಣೆ, ಅಜ್ಜಂಪುರ - ೫೭೭ ೫೪೭

೩. *ಸಾಂಖ್ಯ ದರ್ಶನ* : ಎಸ್. ಎಸ್. ಹಿರೇಮಠ

ಸಮತಾ ಪ್ರಕಾಶನ, ಹರಪನಹಳ್ಳಿ-೫೮೩ ೧೩೧, ಪ್ರ.ಮು. ೨೦೦೩, ಪು. ೧೦೦, ರೂ. ೩೫/-

ಭಾರತೀಯ ದರ್ಶನಗಳನ್ನು ವೈದಿಕ ಅವೈದಿಕ ಎಂದು ಲಭ್ಯ ಕೆಲವೇ ಮೂಲ ಆಕರಗಳನ್ನು ಆಧರಿಸಿ ಪ್ರತಿಪಾದನೆಯ ಹೊಸ ಆಯಾಮಗಳನ್ನು ಸೃಷ್ಟಿಸುವ ಬರಹಗಳು ಕನ್ನಡದಲ್ಲಿ ಕಡಿಮೆ. ನಮ್ಮ ವೇದ, ಉಪನಿಷತ್ತು, ಸ್ಮೃತಿ, ಆಗಮ, ಪುರಾಣ, ಕಾವ್ಯ, ಚರಿತ್ರೆ ಇತ್ಯಾದಿ ಸಾಹಿತ್ಯರಾಶಿಗೆ ತಾತ್ವಿಕ ತಳಪಾಯ ಹಾಕಿದ ಸಾಂಖ್ಯ ಚಿಂತನೆ ಪ್ರಾಮುಖ್ಯವಾಗಿ ಪ್ರಕೃತಿ ಪ್ರಧಾನ. ಇದು ಮೂಲದಲ್ಲಿ ನಿರೀಶ್ವರವಾದಿ ಮತ್ತು ಅವೈದಿಕ ಪರಂಪರೆಯದು ಎಂಬ ವೈಚಾರಿಕ ನಿಲುವಿನ ಸೂಕ್ಷ್ಮತೆ ತೀಕ್ಷ್ಣತೆಗಳನ್ನು ಮಂಡಿಸಲು ೧) ದರ್ಶನ, ಪರಿಭಾಷೆ, ಉಗಮ, ೨) ಕರ್ನಾಟಕದ ಧರ್ಮ ದರ್ಶನ, ೩) ಇಂದಿನ ಸಂದರ್ಭ, ೪) ಚಾರಿತ್ರಿಕ ಹಿನ್ನೆಲೆ, ೫) ಕನ್ನಡ ನಾಡಿನ ಶಾಸನಗಳಲ್ಲಿ ಸಾಂಖ್ಯ ಕಪಿಲ, ೬) ದರ್ಶನಗಳೆಷ್ಟು, ೭) ಕಪಿಲ, ೮) ಸಾಂಖ್ಯದರ್ಶನಗಳು ಮತ್ತು ಪ್ರಾಚೀನತೆ, ೯) ಸಾಂಖ್ಯ ತತ್ತ್ವ, ೧೦) ಕನ್ನಡ ನಾಡಿನಲ್ಲಿ ಸಾಂಖ್ಯ ಪರಿಕಲ್ಪನೆ ಎಂಬ ತರ್ಕಬದ್ಧ ವಿವರಣೆ ಇಲ್ಲಿಯ ೧೦ ಅಧ್ಯಾಯಗಳಲ್ಲಿ ಅಡಕವಾಗಿದೆ. 'ಕೃಷಿಕ ಸಂಸ್ಕೃತಿಯಲ್ಲಿ ಒಡಮೂಡಿದ ಸಾಂಖ್ಯ, ಪ್ರಕೃತಿ ತತ್ತ್ವ ಮತ್ತು ಮಾತೃಪ್ರಾಧಾನ್ಯತೆಯ ಆಧಾರದಲ್ಲಿ ಜನಪದ ಮೌಖಿಕ ಧಾರೆಯೊಳಗೆ ಪರಿಕ್ರಮಿಸಿ ಬರುವದರ ಗುರುತುಗಳನ್ನು ಲಿಖಿತ ಪರಂಪರೆಯಲ್ಲಿ ಹುಡುಕಾಡುವ ಅಧ್ಯಯನಗಳಲ್ಲಿ ಚರ್ಚೆಗೆ ಕಾರಣವೆನಿಸುವ ಅಭಿಪ್ರಾಯ ಉಲ್ಲೇಖಗಳು ಸಹಜ. ಡಾ. ನಿಂಗಪ್ಪ ಮುದೇನೂರ ಅವರು ಈ ಪುಸ್ತಕದಲ್ಲಿ ಬರೆದ 'ಕೃತಿಯ ಒಡಲಲ್ಲಿ ಮೂಡಿದ ಮಾತು` ಪುಟಗಳಲ್ಲಿ ದ್ರಾವಿಡ ಪರಂಪರೆ, ಭಾರತೀಯ ಸಮುದಾಯಗಳು ವಿಸ್ತತಗೊಳ್ಳುವಿಕೆ, ಮಾನವೀಯ ಸಂಬಂಧಗಳನ್ನು ಭೌತಿಕವಾದದ ಹಿನ್ನೆಲೆಯಲ್ಲಿ ಗುರುತಿಸುವಿಕೆ ಮುಂತಾದ `ಹೊಸಬಗೆಯ ಆಲೋಚನಾ ಕ್ರಮಕ್ಕೆ ಹಿರೇಮಠರು ನಮ್ಮನ್ನು ಈಡು ಮಾಡುವದರಿಂದ ಈ ಕೃತಿ ಇಲ್ಲಿ ಮುಖ್ಯ... ಕರಗಿ ಹೋಗಿರುವದನ್ನು ದ್ರವೀಕರಿಸಿ ಘನೀಕರಿಸಿ ಒಪ್ಪವಾಗಿ ನಮ್ಮ ಕೈಗಿತ್ತಿದ್ದಾರೆ` ಎಂದು ಹೇಳಿದ್ದು ಯೋಗ್ಯವೇ ಆಗಿದೆ. ಸಾಂಖ್ಯದ ಕುರಿತು ಇನ್ನೂ ತಿಳಿದುಕೊಳ್ಳಬೇಕಾದುದು ಸಾಕಷ್ಟಿದೆ ಎಂಬ ಬಯಕೆಯನ್ನು ಸಹೃದಯ ಓದುಗರಲ್ಲಿ ಈ ಕೃತಿ ಮೂಡಿಸುತ್ತದೆ. ೭೬ ರಷ್ಟು ಸಂಸ್ಕೃತ, ಕನ್ನಡ, ಹಿಂದೀ ಗ್ರಂಥಗಳ

ಆಕರ ಸಾಮಗ್ರಿ ಲೇಖಕರ ಗಾಢ ಅಧ್ಯಯನ ಗಾತ್ರವನ್ನು ಸೂಚಿಸುತ್ತದೆ. ಸಾಂಖ್ಯ ದಲಿತರ ಸೃಷ್ಟಿಯಾಗಿರಬಹುದು ಎಂಬ ಆಲೋಚನೆ ಹೊಸ ದಿಗಂತಗಳನ್ನು ಸೂಚಿಸುತ್ತದೆ.

—ಶಿವಶಂಕರ ಹಿರೇಮಠ, ವಿಮುಕ್ತ, ಶಿವಗಿರಿ, ಧಾರವಾಡ - ೫೮೦ ೦೦೭

೪. ಕನ್ನಡ ಜಗದ್ಗುರು : ಚಂದ್ರಶೇಖರ ವಸ್ತ್ರದ

ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ, ಸಿದ್ಧಸಂಸ್ಥಾನ ಮಠ, ಚಿಂಚಣಿ-೫೯೧ ೨೨೨, ತಾ. ಚಿಕ್ಕೋಡಿ, ಪ್ರ.ಮು. ೨೦೦೩, ಪು. ೧೪೯, ರೂ. ೩೦/-

ಈ ಪುಸ್ತಕದ ಬಗ್ಗೆ ಡಾ. ಗುರುಲಿಂಗ ಕಾಪಸೆಯವರು ಬೆನ್ನುಡಿಯಲ್ಲಿ ಬರೆದ ಸಾಲುಗಳನ್ನು ನೋಡಿ : "ಅವರು ತೊಟ್ಟ ಕಾವಿ ಬಟ್ಟೆ, ಕನ್ನಡದ ಬಾಳಬಟ್ಟೆಯಾಗಿತ್ತು. ಅವರು ಹಿಡಿದ ಕೋಲಿನಲ್ಲಿ ಕನ್ನಡದ ಕೆಚ್ಚಿತ್ತು. ಅವರು ಮಾತಾಡುವ ನಾಲಗೆಯಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ರಸಘಟ್ಟಿಯಿತ್ತು. ಕಣ್ಣಲ್ಲಿ ಕನ್ನಡದ ಅಸಾಧಾರಣ ಹೊಳಪಿತ್ತು. ಅವರು ಇಡುವ ಒಂದೊಂದು ಹೆಜ್ಜೆಯಲ್ಲಿ ಕನ್ನಡದ ಧೀರೋದಾತ್ತ ಸ್ಪಂದನವಿತ್ತು. ಅವರ ಚಿಂತನೆಯಲ್ಲಿ ಕನ್ನಡ ಸಮಗ್ರ ನೆಲ-ಜಲಗಳ ಹಿರಿಮೆ-ಗರಿಮೆಗಳಿದ್ದವು; ಭೂತ-ವರ್ತಮಾನ-ಭವಿಷ್ಯತ್ತುಗಳ ಮಿಂಚಿನ ತರಂಗಗಳಿದ್ದವು. ಅಂತೆಯೇ ಅವರು 'ಕನ್ನಡ ಜಗದ್ಗುರು' ಎಂಬ ಅಭಿದಾನಕ್ಕೆ ಪಾತ್ರರಾದರು."

ನಮ್ಮ ರಾಜ್ಯದಲ್ಲಿರುವ ಹಲವಾರು ಮಠಗಳ ಜಗದ್ಗುರುಗಳಲ್ಲಿ ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಮಾತ್ರ 'ಕನ್ನಡ ಜಗದ್ಗುರು' ಎಂದು ಬಿರುದಾಂಕಿತರು. ಅವರ ಕನ್ನಡ ಪ್ರೀತಿ, ಅದರ ಸರ್ವತೋಮುಖ ಚಿಂತನೆ; ಅದರ ಅಗ್ರಸ್ಥಾನ ಅಬಾಧಿತವಾಗಿರುವಲ್ಲಿ ಅವರ ದುಡಿಮೆ ಅಪಾರ. ಧರ್ಮ-ದೇವರಿಗಿಂತಲೂ ಭಾಷೆ ಶಕ್ತಿಶಾಲಿ ಎಂದು ಹೇಳುವ ಶ್ರೀಗಳು ಇವರೊಬ್ಬರೇ.

ರಾಷ್ಟ್ರನಿರ್ಮಾಣದ ನಿಜವಾದ ಕಳಕಳಿ ಇರುವ ಮತ್ತು ತಮ್ಮ ಅವಿಶ್ರಾಂತ ದುಡಿಮೆಯ ಪ್ರಚಾರ ಬಯಸದ ಮಹಾನ್ ವ್ಯಕ್ತಿ ಇವರು. ಚಂದ್ರಶೇಖರ ವಸ್ತ್ರದ ಇವರು ಗದುಗಿನ ತೋಂಟದಾರ್ಯ ಮಠದ ಶ್ರೀಗಳ ಕುರಿತು ಬರೆದ ಕೃತಿ 'ಕನ್ನಡ ಜಗದ್ಗುರು' ಓದಿದಾಗ ಶ್ರೀಗಳ ಘನತೆಯ ಕುರಿತು ಗೌರವ ಮೂಡುತ್ತದೆ. ಇಂದು ರಾಜ್ಯದ ಸಣ್ಣ ಹೋಬಳಿಗಳಲ್ಲಿ ಸಹಿತ ಇಂಗ್ಲಿಶ್ ಮಾಧ್ಯಮದ್ದು ಎನ್ನುವ ಭಾಷಾವಿಹೀನ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವ ಮತ್ತು ಬೀಗುವ ಪಾಲಕರಿಂದಾಗಿ ಆಗುತ್ತಿರುವ ಅನಾಹುತದ ಅರಿವು ಗದುಗಿನ ಶ್ರೀಗಳಿಗೆ ಖಂಡಿತ ಇದೆ. ಅದಕ್ಕಾಗಿ ಅವರು ತಪ್ಪಿಯೂ ಆಂಗ್ಲ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಲಿಲ್ಲ. ಮಗು ಭಾಷೆಯನ್ನು ಚೆನ್ನಾಗಿ ಕಲಿಯಲು ಸಾಧ್ಯವಾಗುವುದು, ಆ ಭಾಷೆಯು ಮಗುವಿರುವ ಪರಿಸರದಲ್ಲಿ 'ಆಡುವ ಬರೆಯುವ ಓದುವ' ಭಾಷೆಯಾಗಿರುವುದರಿಂದ ಮಾತ್ರ ಎಂಬ ಅರಿವಿರುವ ಶ್ರೀಗಳಲ್ಲಿ ಪರಭಾಷೆಯ ಕುರಿತು ಚಿತ್ತಚಾಂಚಲ್ಯ ಸಾಧ್ಯವೇ ಇಲ್ಲ ಎಂಬುದನ್ನು ಅವರ ಶಿಕ್ಷಣದಾಸೋಹ, ಸಂಸ್ಕೃತಿದಾಸೋಹ ಲೇಖನಗಳಲ್ಲಿ ವಸ್ತ್ರದ ಅವರು ಚೆಂದಾಗಿ ಚಿತ್ರಿಸಿದ್ದಾರೆ.

ಶ್ರೀಗಳು ಬಸವಣ್ಣನವರ ನಿಜ ಹರಿಕಾರರು. ಹನ್ನೆರಡನೆಯ ಶತಮಾನದಲ್ಲಿ ಆದ ಶರಣ ಕ್ರಾಂತಿಯ ದರ್ಶನ ಈಗ ಗದುಗಿನ ತೋಂಟದಾರ್ಯ ಶ್ರೀಗಳ ಪ್ರಗತಿಪರ ಚಿಂತನೆಗಳಿಂದ ಆಗುತ್ತಿದೆ ಎಂಬುದು ಅವರ ಬಗೆಗಿನ ನುಡಿ ದಾಸೋಹದಲ್ಲಿ ಕಂಡುಬಂದರೆ, ಅವರ ಅನನ್ಯ ಕನ್ನಡ ಪುಸ್ತಕ ಪ್ರೀತಿಯನ್ನು ಪುಸ್ತಕದಾಸೋಹದಲ್ಲಿ ಕಾಣಬಹುದು. ದೇವದಾಸಿಯರಾಗಿ ನಿಕೃಷ್ಟ ಬಾಳು ಬಾಳುತ್ತಿರುವ ಸಹೋದರಿಯರ ಬಾಳು ಹಸನಾಗಬೇಕು ಮತ್ತು ಎಲ್ಲರಂತೆ ಅವರೂ ವೈವಾಹಿಕ ಜೀವನ ನಡೆಸಿ ಆದರ್ಶ ಸಮಾಜದ ಭಾಗಿಗಳಾಗಬೇಕೆಂಬ ದೃಢ ಸಂಕಲ್ಪದ ಧೋರಣೆಯೊಂದಿಗೆ ಕೆಲಸ ಮಾಡುತ್ತಿರುವ ಬಗೆಗೆ ಕೂಡಾ ಲೇಖಕರು ದಾಖಲಿಸಿದ್ದಾರೆ.

ಲಲಿತಕಲೆಗಳಿಗೂ ಆಶ್ರಯ ತಾಣವಾಗಿರುವ ತೋಂಟದಾರ್ಯಮಠದ ಸಿದ್ಧಲಿಂಗಶ್ರೀಗಳು ನಿತ್ಯಸ್ಮರಣೀಯರು ಎಂಬುದು ಈ ಪುಸ್ತಕ ಓದಿ ಮುಗಿಸಿದಾಗ ಮನದಾಳದಲ್ಲಿ ಒಡಮೂಡುತ್ತದೆ. ಲೇಖಕರ ಸರಳ ವೈಖರಿಯ ಶೈಲಿಯಿಂದಾಗಿ ಎಲ್ಲರೂ ಓದಿ ಮನನವಾಗಿಸಿಕೊಳ್ಳುವ ಕೃತಿ ಇದಾಗಿದೆ.
—ಶ್ರೀಪತಿ ಮಂಜನಬೈಲು, ಅನಂತಮುರಳಿ, ೧೬೫, ಗುರುಪ್ರಸಾದನಗರ, ಬೆಳಗಾವಿ - ೮

೫. ಮನದಾಳದ ಮಾತುಗಳು : ರೂಪಾ ಕುಲಕರ್ಣಿ

ರೂಪಾ ಪ್ರಕಾಶನ, ೩೯೯, ೧೪ನೇ ಮೇನ್, ೧ನೇ ಬ್ಲಾಕ್, ೨ನೇ ಹಂತ, ಬಸವೇಶ್ವರನಗರ, ಬೆಂಗಳೂರು-೭೯, ಪ್ರ.ಮು. ೨೦೦೩, ಪು. ೧೬೮, ರೂ. ೬೦/-

ಮಧ್ಯಮ ವರ್ಗದ ಲೇಖಕಿಯೊಬ್ಬರು ತಮ್ಮ ದಾಂಪತ್ಯ ಜೀವನದುದ್ದಕ್ಕೂ ಸಂಘರ್ಷದಲ್ಲಿ ಬೆಂದು ಪಕ್ವಗೊಂಡು `ಧನ್ಯತೆ` ಪಡೆದಾಗ ಹೊರಬಿದ್ದ ಕಥೆಯೇ ಈ ಆತ್ಮಕಥೆ. ಕೇವಲ ಶಿಷ್ಟರು, ಪ್ರತಿಷ್ಠಿತರು, ಧುರೀಣರು, ಗಣ್ಯರು ಆತ್ಮಕಥೆ ಬರೆದು ನಿವೇದಿಸುವ ಪರಂಪರೆಯ ಒಂದು ಕಾಲವಿತ್ತು. ಅದು ಈಗ ಬದಲಾಗಿದೆ. ಶ್ರೀಸಾಮಾನ್ಯನು ತನ್ನ `ಬಾಳಿನ ಚಿತ್ರಣ`ವನ್ನು ನೀಡಬಲ್ಲ ಎಂಬುದಕ್ಕೆ ರೂಪಾ ಕುಲಕರ್ಣಿಯವರ ಈ ಕೃತಿ ಸಾಕ್ಷಿ. ಕೌಟುಂಬಿಕ ಹೊಣೆಗಾರಿಕೆಯಲ್ಲಿ ಮುಂದೆ ಮುಂದೆ ಹೋಗಿ ಈಗ ವಿಶ್ರಾಂತ ಜೀವನದಲ್ಲಿ ಇದನ್ನು ರಚಿಸಿದ್ದಾರೆ. ಹೀಗಾಗಿ ಬಾಳಿನಲ್ಲಿ ನಡೆದುಹೋದ ಘಟನೆಗಳಿಗೆ ಅವಲೋಕನ-ಆಲೋಚನೆಗೆ ಸಾಕಷ್ಟು ಸಮಯ ದೊರೆತಿದೆ.

ಡಾ. ಶ್ರೀನಿವಾಸ ಕುಲಕರ್ಣಿ ಹಾಗೂ ರೂಪಾ ಕುಲಕರ್ಣಿ ದಂಪತಿಗಳು ಸಾಹಿತಿಗಳು. ಅನ್ಯೋನ್ಯ ದಾಂಪತ್ಯ ಜೀವನ ಅವರ ಸಾಹಿತ್ಯಕೃಷಿಯನ್ನು ಹುಲುಸಾಗಿಸಿದೆ. ಈ ಮೊದಲು `ಬಫೆ ಊಟ' ಕುರಿತು ಬರೆದ ಹರಟೆಗಳ ಸಂಕಲನ ಅವರ ಯಶಸ್ವಿ ಕೃತಿ. ಇದಕ್ಕೆ ಡಾ. ಅನುಪಮಾ ನಿರಂಜನರ `ಸಿಹಿ-ಕಹಿ' ಪ್ರೇರಕ ಎಂದು ಪ್ರಾಂಜಲಮನದಿಂದ ಹೇಳಿದ್ದಾರೆ.

ಪತಿ ಆಕಾಶವಾಣಿಯ ಪ್ರಮುಖ ಹುದ್ದೆಯಲ್ಲಿದ್ದ ಅಧಿಕಾರಿಯಾಗಿದ್ದರೂ ಅವರ ಹಿನ್ನೆಲೆಯ ಸ್ಫೂರ್ತಿ-ಪ್ರೇರಕರಾಗಿದ್ದ ಲೇಖಕಿಯರು ಆಕಾಶವಾಣಿಯ Recreation Club ದಲ್ಲಿ ಮನರಂಜನೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅಪರೂಪದ ಅನುಭವ, ಹೊಸ ಸಂಸಾರದ ಸಿಹಿ ಕಹಿಗಳು-ಮದುವೆಯ ಪೂರ್ವ-ನಂತರ ನಡೆದ ಕಾರ್ಯಕ್ರಮಗಳ ರಸವಂತಿಕೆಯನ್ನು ನೀಡಿದ್ದಾರೆ. ಮದುವೆ ನಂತರ ಬಿ.ಎ. ದಲ್ಲಿ ವಿಶ್ವವಿದ್ಯಾಲಯಕ್ಕೆ ದ್ವಿತೀಯ ಸ್ಥಾನ ಪಡೆದಾಗ ತಂದೆಯ ಅಭಿಮಾನ ಉಕ್ಕಿಬಂದ ಪ್ರಸಂಗ —ಹೀಗೆ ನೆನಪುಗಳು ಇಲ್ಲಿ ಸುಂದರ ಹೃದ್ಯ ನೋಟಗಳಾಗಿವೆ. ಮುಖ್ಯವಾಗಿ ಗುಜರಾತ್ ಭೂಕಂಪದಲ್ಲಿ ಮಗಳು ಆಕಸ್ಮಿಕವಾಗಿ ದೈವಬಲದಿಂದ ಪಾರಾದ ಘಟನೆ ಹೃದಯವಿದ್ರಾವಕವಾಗಿದೆ.
—ಡಾ. ವಸಂತ ಕುಲಕರ್ಣಿ, ಅನಂತಲಕ್ಷ್ಮೀ, ಚಾಲುಕ್ಯನಗರ, ವಿಜಾಪುರ - ೩

೬. ರಂಗಲೋಕ : ಡಾ. ಹೆಚ್. ಎ. ಪಾರ್ಶ್ವನಾಥ್

ಸಂವಹನ ಪ್ರಕಾಶನ, ೧೨/೧ಎ, ಈವನಿಂಗ್ ಬಜಾರ್ ಹಿಂಭಾಗ. ಶಿವರಾಂಪೇಟೆ, ಮೈಸೂರು-೫೭೦ ೦೦೧, ಪ್ರ.ಮು. ೨೦೦೩, ಪು. ೨೧೬, ರೂ. ೧೨೫/-

ಡಾ. ಹೆಚ್. ಎ. ಪಾರ್ಶ್ವನಾಥ್ ನಮ್ಮ ನಡುವಿನ ಸಂಯಮಶೀಲ ಲೇಖಕ, ನಟ, ರಂಗಚಿಂತಕರು. ಈಗಾಗಲೇ ರಂಗಭೂಮಿ ಕುರಿತಂತೆ ರಂಗಸಂಗ, ವ್ಯಕ್ತಿಶಕ್ತಿ, ರಂಗಪ್ರಸಂಗ ಮುಂತಾದ ಕೃತಿ ಪ್ರಕಟವಾಗಿವೆ. ರಂಗೇತರ ಕೃತಿಗಳೂ, ಸಂಶೋಧನ ಹೊತ್ತಿಗೆಗಳೂ ಹೊರಬಂದಿವೆ. ಬಿಡುವಿರದ ವೈದ್ಯಕೀಯ ಕ್ಷೇತ್ರದಲ್ಲಿ ಸಮಯ ಹೊಂದಿಸಿಕೊಂಡು ಡಾ. ಪಾರ್ಶ್ವನಾಥರು ಈಗ `ರಂಗಲೋಕ`ದಂತಹ ಕೃತಿಯನ್ನು ಕೊಟ್ಟಿದ್ದಾರೆ. ಈ ಕೃತಿಯಲ್ಲಿ ಸೇರಿರುವ ಬಹಳಷ್ಟು ಲೇಖನಗಳು, ನಾಡಿನ ಪ್ರಸಿದ್ಧ ದೈನಿಕ, ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವಿವಿಧ ಗೋಷ್ಠಿ, ಅಭಿನಂದನ ಗ್ರಂಥಗಳಲ್ಲಿ ಮಂಡಿತವಾದ ಪ್ರಬಂಧಗಳೂ ಸೇರಿವೆ.

ಡಾ. ಪಾರ್ಶ್ವನಾಥ್‌ರು ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ವೃತ್ತಿ, ಪ್ರವೃತ್ತಿ ಸಂಬಂಧ ನೆಲೆಯಾದಲ್ಲೆಲ್ಲ ತಮ್ಮ ಸಂಪರ್ಕಕ್ಕೆ ಬಂದ ನಟರು, ನಾಟಕಕಾರರು, ರಂಗಪೋಷಕರು, ಕೇಳಿ ತಿಳಿದವರ ವಿಚಾರಗಳನ್ನು ಅಭ್ಯಸಿಸಿದ್ದಾರೆ. ಒಪ್ಪ ಓರಣವಾಗಿ ಸೇರಿಸಿ ಬೆರಗುಗೊಳಿಸುವಷ್ಟು ಮಾಹಿತಿಗಳನ್ನು 'ರಂಗಲೋಕ'ದಲ್ಲಿ ನೀಡಿರುತ್ತಾರೆ. ೨೦೦ ಕ್ಕಿಂತ ಹೆಚ್ಚು ಪುಟಗಳಲ್ಲಿ ಬಿಂಬಿತವಾಗಿರುವ ರಂಗಚಟುವಟಿಕೆ ಮಾಹಿತಿಗಳಲ್ಲಿ ಹವ್ಯಾಸಿ, ವೃತ್ತಿ, ಬೀದಿ, ಜಾನಪದ, ಮಕ್ಕಳ ನಾಟಕಗಳ ಬೆಳವಣಿಗೆಯನ್ನು ವಿವರವಾಗಿ ತಿಳಿಸಿದೆ. ಕಾಲ-ದೇಶ ಸಂಬಂಧವಾದ ಈ ಮಾಹಿತಿಗಳು ತುಂಬಾ ಮಹತ್ವವಾದವುಗಳು.

ಸಿನಿಮಾ, ದೂರದರ್ಶನ ಮುಂತಾದ ವಿದ್ಯುನ್ಮಾನ ಮಾಧ್ಯಮಗಳ ಭರಾಟೆಯಲ್ಲಿ ವೃತ್ತಿ, ಹವ್ಯಾಸಿ, ಜಾನಪದ, ಬೀದಿ, ರೇಡಿಯೋ ನಾಟಕಗಳ ಚಟುವಟಿಕೆಗಳು ಮಸಕಾಗಬಾರದು ಎನ್ನುವುದು ಪಾರ್ಶ್ವನಾಥ್‌ರ ಆಶಯ. ಈ ನೆಲೆಯಲ್ಲಿ ಶ್ರೀರಂಗ, ಕಾರ್ನಾಡ್, ಕೈಲಾಸಂ, ಕಂಬಾರ, ಕಾರಂತರು ಎಷ್ಟು ಮುಖ್ಯರೋ, ಗುಬ್ಬಿ ವೀರಣ್ಣ, ಕಂದಗಲ್ಲ, ಚಿಂದೋಡಿ ವೀರಪ್ಪ, ಹಿರಣ್ಣಯ್ಯ ಅಷ್ಟೇ ಮುಖ್ಯರು. ಈ ಎಲ್ಲರ ಸಾಹಸ-ಸಾಧನೆಗಳನ್ನು ಪರಿಚಯಿಸುವ ಲೇಖಕರ ಪ್ರಯತ್ನವನ್ನು ಅಭಿನಂದಿಸಬೇಕು.

ಮೈಸೂರು, ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿನ ರಂಗಚಟುವಟಿಕೆಗಳನ್ನು ಪರಿಚಯಿಸುವಲ್ಲಿ ಲೇಖಕರು, ಆ ಭಾಗದ ನಾಟಕಕಾರರು, ನಟರು, ಕಲಾಪೋಷಕರು, ಸಂಘ-ಸಂಸ್ಥೆಗಳ ಪರಸ್ಪರ ಕೊಳುಕೊಡುಗೆಯನ್ನು ಯಥೋಚಿತವಾಗಿ ದಾಖಲಿಸಿದ್ದಾರೆ. ಒಂದು ಸ್ಥಳದಲ್ಲಿ ಅಂಕುರಗೊಂಡ ರಂಗಚಟುವಟಿಕೆ, ಅಲ್ಲಿಗೇ ಸೀಮಿತವಾಗದೆ ರಾಜ್ಯ, ರಾಷ್ಟ್ರ, ವಿಶ್ವಮಟ್ಟದಲ್ಲಿ ಗುರುತಿಸಿಕೊಂಡ ವಿವರಗಳು, ಖ್ಯಾತನಾಮರ ಉಲ್ಲೇಖಗಳು 'ರಂಗಲೋಕ'ದಲ್ಲಿವೆ. ಶಿಕ್ಷಣ, ಸಂಸ್ಕೃತಿ, ಸಂಗೀತ, ಸಾಹಿತ್ಯದ ಉತ್ತಮಾಂಶಗಳು ರಂಗಭೂಮಿಯ ವರ್ತುಲದಲ್ಲಿ ಸೇರಿಸಿಕೊಂಡು ಸಮುದಾಯ, ಸಮಾಜಸ್ವಾಸ್ಥ್ಯ ಕಾಯ್ದುಕೊಳ್ಳಬೇಕಾದ ಆವಶ್ಯಕತೆಯನ್ನೂ ಪಾರ್ಶ್ವನಾಥ್‌ರು ಕೃತಿಯ ಉದ್ದಕ್ಕೂ ಹೇಳುತ್ತಿರುತ್ತಾರೆ. ಹವ್ಯಾಸಿ, ವೃತ್ತಿ, ಅಸಂಗತ ಇತ್ಯಾದಿ ವರ್ಗೀಕೃತ ರಂಗಚಟುವಟಿಕೆಗಳು ವ್ಯಕ್ತಿವಿಕಸನ, ಪ್ರಜ್ಞೀಕರಣ, ಸೌಹಾರ್ದತೆಗೆ ಸಹಾಯಕವಾಗಬೇಕೆಂಬ ಲೇಖಕರ ಇಲ್ಲಿನ ಕಳಕಳಿ ಸ್ವಾಗತಾರ್ಹ.

ಡಾ. ಪಾರ್ಶ್ವನಾಥ್‌ರ 'ರಂಗಲೋಕ'ದಲ್ಲಿ ದಾಖಲಾದ ನಟರು, ನಾಟಕಕಾರರು, ಕವಿ, ಕಲಾವಿದರು, ಕಲಾಪೋಷಕರ ವಿವರಗಳು ರಂಗಭೂಮಿಯ ಬಗ್ಗೆ ಅಧ್ಯಯನ ನಡೆಸುವವರಿಗೆ ಆಕರವಾಗಬೇಕು ಎನ್ನುವ ಸದಾಶಯದಲ್ಲಿ ಪುನರುಕ್ತಿಗಳು ಬರುವುದು ಸಹಜ. ಅನುಬಂಧದಲ್ಲಿ ಈ ಹಿಂದೆ ಇದೇ ಲೇಖಕರು ಬರೆದ 'ರಂಗಸಂಗ' ಕೃತಿ ಕುರಿತು ಅವರ ಅಭಿಮಾನಿಗಳು, ಪತ್ರಿಕೆಗಳು, ಸಹೃದಯರು ಬರೆದ ಬರಹಗಳಿವೆ. ಇವುಗಳ ಅಗತ್ಯವೇನಿಲ್ಲ. ಲೇಖಕರು ಈ ಎಲ್ಲ ಮೆಚ್ಚಿಕೆಯನ್ನು ಮೀರಿ ಬೆಳೆದವರು. ಬದಲಾಗಿ 'ರಂಗಲೋಕ'ದಲ್ಲಿ ಸೇರಿರುವ ನಟ, ನಾಟಕಕಾರ, ಕವಿ, ಕಲಾವಿದರು, ಸಂಘ-ಸಂಸ್ಥೆಗಳು, ಪೋಷಕರ ಯಾದಿಯನ್ನು ಅಕಾರಾದಿಯಲ್ಲಿ ಸೇರಿಸಿದ್ದರೆ ಸಾಕಾಗಿತ್ತು. ಏನೇ ಇರಲಿ, ಡಾ. ಪಾರ್ಶ್ವನಾಥ್‌ರ ಈ ಸಾಹಸ ಶ್ಲಾಘನೀಯವಾಗಿದೆ. ಪ್ರೊ. ಎಚ್. ಎಂ. ಚನ್ನಯ್ಯನವರ ಮುನ್ನುಡಿ ಕೃತಿಗೆ ತಿಲಕವಿಟ್ಟಂತಿದೆ. ಬಿ. ವಿ. ವೈಕುಂಠರಾಜು, ಪ್ರಧಾನ ಗುರುದತ್ತರ ಮೆಚ್ಚಿಕೆ ನುಡಿಗಳು ಈ ಕೃತಿಯ ಶೋಭೆಯನ್ನು ಹೆಚ್ಚಿಸಿವೆ.

—ಎ. ಡಿ. ನಂಜುಂಡಸ್ವಾಮಿ, ೪೩೬, 'ಬಿ' ಬ್ಲಾಕ್, ಜಲಪುರಿ, ಮೈಸೂರು - ೫೭೦ ೦೧೯

೭. ಸೂಜಿಗಲ್ಲು : ಲತಾ ಗುತ್ತಿ

ನಿಸರ್ಗ ಪ್ರಕಾಶನ, ೩ನೇ ಮಹಡಿ, ಶಂಕರನ್ ಕಾಂಪ್ಲೆಕ್ಸ್, ೩೦೦, ಲ್ಯಾಂಗ್‌ಫೋರ್ಡ್ ರಸ್ತೆ, ಬೆಂಗಳೂರು-೪೫, ಪ್ರ.ಮು ೨೦೦೨, ಪು. ೭೯, ರೂ. ೫೫/-

ಲತಾ ಗುತ್ತಿ ಅವರಲ್ಲಿ, ಖಂಡಿತಕ್ಕೂ ಒಬ್ಬ ಒಳ್ಳೆಯ ಕವಿಯ ಅಸ್ತಿತ್ವವಿದೆ. ಕವಿಯಾಗಿ, ಬದುಕನ್ನು, ಅದರ ವಿವಿಧ ಕೋನಗಳಲ್ಲಿ ನೋಡಬಲ್ಲ ಸ್ವಂತಿಕೆ ಇದೆ. ಹೀಗಾಗಿ, ಇಲ್ಲಿಯ ಅನೇಕ ಕವಿತೆಗಳನ್ನು ಓದಿದಾಗ, ಒಂದು ಹೊಸ ಪ್ರಪಂಚದ ಸ್ಪರ್ಶಸುಖ ದೊರೆಯುತ್ತದೆ.

ನಾವು ಕಳೆದುಕೊಂಡ ಜೀವದ್ರವ್ಯಗಳಿಗೆ ಬದುಕಿನ ಜೀವಂತ ಘಟಕಗಳಿಗೆ ಮಿಡುಕುವ 'ಅಂತರಾಳ' ಒಂದು ಗಮನಿಸಬೇಕಾದ ಪ್ರಯೋಗ. ಇದೇ ಬಗೆಯ ವಸ್ತುವನ್ನೊಳಗೊಂಡ, 'ಗರ್ಭಿಗಮ್ಮತ್ತು ಮತ್ತು ಹಾಲಿವುಡ್', 'ಪ್ರಶ್ನೆ' ಮತ್ತು 'ಯುಗಾದಿ (೨)' ಕವಿತೆಗಳೂ ಕೂಡ ತಕ್ಕಷ್ಟು ಯಶಸ್ವಿ. 'ಗೃಹಿಣಿ'ಯ ಪಾತ್ರನಿರ್ವಹಣೆಗೆ ಪ್ರವೇಶಿಸಿದ ಹೆಣ್ಣೊಬ್ಬಳ ಮೂರು ವಿಭಿನ್ನ ಹಂತದ ಮುಖಗಳನ್ನು ಎತ್ತಿ ತೋರಿಸುವ 'ಸೆರಗು' ಕವಿತೆಯಂತೂ ವಾಸ್ತವಕ್ಕೆ ಎಷ್ಟು ಹತ್ತಿರದ ಚಿತ್ರ! 'ತುಡಿತ'ದಂತಹ ಕವಿತೆಗಳಲ್ಲಿ ಎಷ್ಟು ವಿಭಿನ್ನ ದೃಷ್ಟಿಕೋನ! ಕೆಲವು ಕವಿತೆಗಳ ಕೆಲ ಸಾಲುಗಳಂತೂ ಸುಮ್ಮನೇ ನಮ್ಮ ಮನ ಗೆದ್ದುಬಿಡುವಷ್ಟು ಸಮರ್ಥವಾಗಿವೆ. ಉದಾ :

೧. ಬಿರುಸಿನ ಓಡಾಟದ ಕೆಲಸದ ಹುಡುಗಿ
ಸಹ್ಯಾದ್ರಿ

೨. ಕೆಳಗೆ ಬೋಳಾದ ಗುಡ್ಡಗಾಡುಗಳು
ತುಂಡರಿಸಿಕೊಂಡಿರುವ ಮನಸುಗಳು
ಗುಂಡು ಮದ್ದು ತುಂಬಿದ ಬಂದೂಕುಗಳು
ಯಾವುದು ಹಿತವಾಗಿ ಕಾಣಿಸಿತು ನಿನಗಲ್ಲಿ

೩. ಮುಂಗಾರು ಸಿಡಿಲು ಗುಡುಗು ಮಳೆಗೂ ಹೆದರದೆ
ಕಿಡಕಿಯಾಚೆ ಬೋಳು ಮರಗಳಲಿ
ಚಿಗುರೊಡೆಯುವ ಸಂಭ್ರಮ

೪. ತುಂಬಿ ನಿಂತ ಕೆರೆಯೊಳಗೆ
ಸ್ನಾನಕ್ಕಿಳಿದು ಹುಡುಗಿಯರ ಛೇಡಿಸುವ ಸೂರ್ಯ

೫. ಚಂದಿರ ನಗು ನಗುತ ಬೆಂಕಿ ಹಚ್ಚಿದರೆ
ಸೂರ್ಯ ಉರಿದುರಿದು ಕರಕಲಾಗಿಸಿದ
ಪ್ರೀತಿಯ ಮಾತುಗಳಿಂದ ಒಮ್ಮೆಯಾದರೂ
ಕಣ್ಣೀರು ಸುರಿಸುವಂತೆ ಮಾಡು.

ಕೆಲವು ಬಾರಿ, ವಾಚ್ಯದಾಪತ್ತು, ಕೆಲವು ಕವಿತೆಗಳನ್ನು ಕಳೆಗುಂದಿಸಿದ ಬಗ್ಗೆಯೂ ನಾನು ಪ್ರಸ್ತಾಪಿಸಬೇಕು. ಒಂದು ಇನ್ನಷ್ಟು ಒಳ್ಳೆಯ ಕವಿತೆಯಾಗಬಹುದಾಗಿದ್ದ 'ಬಮಿಯಾನ್ ಬುದ್ಧ ಮತ್ತು ಪಾರಿವಾಳ' ಮತ್ತು, ತನ್ನ ಹೊಸ ದೃಷ್ಟಿಕೋನದಿಂದ ಇನ್ನಷ್ಟು ನಮ್ಮ ಗಮನ ಸೆಳೆಯಬೇಕಾಗಿದ್ದ, 'ಕಾರ್ಪೋರೇಶನ್ ಸರ್ಕಲ್ಲಿನ ರಸ್ತೆಗಳು' ಇವು ಆ ಮುಖ್ಯ ಪ್ರಸ್ತಾಪಗಳು. ಇದೇ ಮಾತು, 'ಕಾರ್ಗಿಲ್', 'ಪಾಪ ಭಿಕ್ಷಾಪಾತ್ರೆಗೆ ನಿಮ್ಮ ಹಣ', 'ಕಾಬೂಲಿವಾಲಾ', 'ನನ್ನೊಂದಿಗೆ ಪುಸ್ತಕಗಳ ಮಾತು' ಇವುಗಳಿಗೂ ಅನ್ವಯಿಸುವಂತಹದು.

ಇನ್ನಷ್ಟು ಕವಿತೆಗಳ ಬಗ್ಗೆ ಇನ್ನೊಂದು ಮಾತು : ಇನ್ನೊಂದು ಮುಖ್ಯವಾಗಿ ಹೇಳಬೇಕಾದುದಕ್ಕೆ ಹತ್ತಿರ ಬಂದರು ಕವಯಿತ್ರಿ ಎಷ್ಟುವಾಗಲೇ ಕವಿತೆ ಮುಗಿಸಿಕೊಂಡು ಬಿಡುವುದು ಸ್ವಲ್ಪ ಕಿರಿಕಿರಿಗೆ ಕಾರಣವಾಗುತ್ತದೆ. ಪ್ರಾಯಶಃ ಒಂದು ವಿಶಿಷ್ಟ ವಸ್ತುವಿಗೆ, ಒಂದು ವಿಶಿಷ್ಟ ದೃಷ್ಟಿಕೋನಕ್ಕೆ, ಒಂದು ಅಭಿವ್ಯಕ್ತಿಗೆ, ಒಂದು 'ಪೂರ್ತಿ ಆಕಾರ' ಕೊಡುವತ್ತ ಲತಾ ಇನ್ನಷ್ಟು ಗಮನಹರಿಸಬೇಕು. ಉದಾ : 'ನನಸು, ನನಸು, ನನಸು', 'ಮುಖವಾಡ', 'ಅಂದುಕೊಂಡಷ್ಟು' ಇತ್ಯಾದಿ. ಮೇಲಿನ ಅಂಶಗಳನ್ನು ಹೊರತು ಪಡಿಸಿಯೂ 'ಸೂಜಿಗಲ್ಲು' ಸಂಗ್ರಹದಲ್ಲಿ ಕೆಲವು ಒಳ್ಳೆಯ ಕವಿತೆಗಳಿವೆ.

—ದೇಶಪಾಂಡೆ ಸುಬ್ಬರಾಯ, ನೆಲೆ, ೧೫, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ - ೫೮೦ ೦೦೮

ಸಂಕಲನ : ಅನಿಸಿಕೆ

೧. ನಾನು ಲೇಖನ ಬರೆದು ಮುಗಿಸಿವಾಗ ಅದನ್ನು ಪ್ರಕಟಿಸುವ ಗೋಜಿಗೆ ನೀವು ಹೋಗಲಿಕ್ಕಿಲ್ಲವೆಂದು ಭಾವಿಸಿದ್ದೆ, ಅದು ಪ್ರಕಟವಾದ ಮೇಲೆ ಅದನ್ನು ಓದುವ ಗೋಜಿಗೆ ಯಾರೂ ಹೊಗಲಾರರೆಂದು ಅಭಿಪ್ರಾಯ ಪಟ್ಟಿದ್ದೆ. ಆದರೆ ಎರಡೂ ವಿಚಾರಗಳಲ್ಲಿ ನಾನು ತಪ್ಪಾಗಿದ್ದು 'ಸಂಕಲನ'ದ ಕಸುವನ್ನು, ಅದರ ಓದುಗರ ಆರೋಗ್ಯಕರ ಕುತೂಹಲ ಮತ್ತು ವೈಚಾರಿಕತೆಯನ್ನು ಎತ್ತಿ ತೋರಿಸುವಂತಾಗಿದೆ. ಅರವಿಂದ ಚೊಕ್ಕಾಡಿಯಂಥವರು ನನ್ನ ಲೇಖನವನ್ನು ಓದಿದ್ದು ಮಾತ್ರವಲ್ಲದೆ ಅದರ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು 'ಸಂಕಲನ'ಕ್ಕೆ ಬರೆಯುವಷ್ಟು ಅದರಿಂದ ಪ್ರಚೋದಿತರಾಗಿದ್ದು ನೋಡಿ, ಆ ಲೇಖನ ಬರೆಯಲಿಕ್ಕೆ ನಾನು ಸಾಕಷ್ಟು ತಲೆ ಕೆರೆದುಕೊಂಡದ್ದು ಸಾರ್ಥಕವಾಯಿತು ಎಂದು ಅನಿಸುತ್ತದೆ. **– ಯು. ವೆಂಕಟ್ರಾಜ ರಾವ್, ಮುಂಬಯಿ**

೨. 'ಸಂಕಲನ'ದಲ್ಲಿ ಬರುತ್ತಿರುವ 'ಅವ್ವ ಅಪ್ಪ ಮಾಲಿಕೆ'ಯಂತೂ ಕನ್ನಡಕ್ಕೆ ಅದ್ಭುತ ಕೊಡುಗೆ. ಈ ಸಲದ 'ಕಡೀಪುಟ' ಓದಿ ಖುಶಿಯಾಯಿತು. ನಮ್ಮವರು ಒಂದೇ ಕ್ರಿಯೆಯನ್ನ ಎಷ್ಟು ರೀತೀಲೆ ಮಾಡ್ತಾರಲ್ಲ ಅನ್ನೂದನ್ನ ಮತ್ತ ಮತ್ತ ನೆನಸೂಹಂಗ ಆಯ್ತು. ಈ ಶಬ್ದಗಳ ಮೂಲಕ ಆಯಾ ಸಂಸ್ಕೃತಿ, ಪ್ರದೇಶ, ಭಾಷಾ ವೈಭಿನ್ಯಗಳೂ ತಿಳೀತಾವು. **– ಡಾ. ಎಂ. ಎಂ. ಕಲಬುರ್ಗಿ, ಧಾರವಾಡ**

೩. 'ಸಂಕಲನ' ತುಂಬಾ ಚೆನ್ನಾಗಿ ಬರುತ್ತಿದೆ. **– ಡಾ. ಗುರುಲಿಂಗ ಕಾಪಸೆ, ಧಾರವಾಡ**

೪. ಯಾವುದೇ ಪತ್ರಿಕೆಯನ್ನು ನಾವು ಓದಲು ಆರಂಭಿಸುವುದು 'ಮೊದಲ್ನೇ' ಪುಟದಿಂದ. ನಾನೂ ಅಷ್ಟೇ. ಆದರೆ, 'ಸಂಕಲನ' ಕೈಗೆ ಬಂದಾಗ ಮಾತ್ರ, ಓದನ್ನು ಆರಂಭಿಸುವುದು 'ಕಡೀಪುಟ'ದಿಂದ.

ಹಾಗೆಯೇ ಸಂಚಿಕೆ-೧೪ ಓದಿದಾಗ ಮಾತ್ರ ನನಗೆ ಆಶ್ಚರ್ಯವೇ ಆಯಿತು; ಹಾಗೇ ಆನಂದವೂ ಕೂಡ; ಏಕೆಂದರೆ ಇಲ್ಲಿ ನೀವು ಬರೆದದ್ದು, ನಾವು ಕಳೆದುಕೊಳ್ಳುತ್ತಿರುವ ಅನೇಕ 'ದಿನಬಳಕೆ ಮಹತ್ವದ' ಶಬ್ದಗಳ ಬಗ್ಗೆ; ಅಂಥವುಗಳನ್ನು 'ಸಂಗ್ರಹಿಸುವ' ಮಹತ್ವದ ಬಗ್ಗೆ ಅಂಥವು ಕಳೆದು ಹೋಗಬಾರದೆಂಬ ಕಳಕಳಿಯ ಹಿನ್ನೆಲೆಯಲ್ಲಿ. ಈ ಸಂದರ್ಭದಲ್ಲಿ, ಆನುಷಂಗಿಕವಾಗಿ, ನಾನು ಪ್ರಸ್ತಾಪಿಸಲೇಬೇಕಾದ ಅಂಶವೆಂದರೆ, ಕಳೆದ ಕೆಲವು ವರುಷಗಳಿಂದ ನಾನು, ಇದೇ ರೀತಿ ನಾವು ಕಳೆದುಕೊಳ್ಳುತ್ತಿರುವ ಶಬ್ದಗಳನ್ನು ಕುರಿತು (ತೀರ ವಿಶೇಷವೆಂದರೆ, 'ಧಾರವಾಡ ದೇಶಿ' ಶಬ್ದಗಳನ್ನೇ ಕುರಿತು) ಒಂದು ಕೋಶವನ್ನೇ ಸಿದ್ಧಪಡಿಸುತ್ತಿದ್ದೇನೆ. ಕೆಲವೇ ದಿನಗಳಲ್ಲಿ 'ಧಾರವಾಡ ದೇಶಿ–ಕಂದುತ್ತಿರುವ ಕೋಶ' ಹೆಸರಿನ ಪುಸ್ತಕ ಪ್ರಕಟಣೆಗೆ ಸಿದ್ಧವೂ ಆಗುತ್ತಿದೆ.

ಕೇಶವ ಶರ್ಮರ 'ಸಮೂಹ ಮಾಧ್ಯಮಗಳು ಮತ್ತು ಸಾಮಾಜಿಕ ಜವಾಬ್ದಾರಿ' ಒಂದು ಉತ್ತಮ ವಿಶ್ಲೇಷಣೆ. ದರವಂದು 'ಸಂಕಲನ'ದಲ್ಲಿ ಇಂಥ ಎತ್ತರದ ಒಂದೆರಡಾದರೂ ಬರಹಗಳಿಲೇಬೇಕು. ಪ್ರಸ್ತುತ ಲೇಖನ ಇನ್ನಷ್ಟು ಬೇರೆ ಮಗ್ಗಲುಗಳಲ್ಲಿ ಆಲೋಚಿಸಲು ನನ್ನನ್ನು ಪ್ರೇರೇಪಿಸಿದೆ.

ಬಿ. ಟಿ. ದೇಸಾಯಿಯವರ 'ಚಾಳೀ ಠೂ! ಪಾಲಾ ಪೂ!' ನಾಟಕ ಕುರಿತಂತೆ : ನಾಟಕದ ಎರಡನೆಯ ಮತ್ತು ಮೂರನೆಯ ದೃಶ್ಯಗಳ 'ಕ್ಷುಲ್ಲಕ ಹಿರಿಯರ ಮನೋಭೂಮಿಕೆ'ಯ ಸಂಭಾಷಣೆ ಕೆಲವು; ಮಕ್ಕಳ ಮನಸ್ಸಿನ ಮುಗ್ಧ ಮತ್ತು ಸ್ನಿಗ್ಧ ಮೂಲವಾದ ನಿರ್ಮಲ ಚೌಕಟ್ಟನ್ನು ಎಷ್ಟೋ ಕಡೆಗೆ ಮೀರಿಬಿಟ್ಟು ಇದು ಇತ್ತ ಮಕ್ಕಳ ನಾಟಕವೂ ಅಲ್ಲ, ಅತ್ತ ಪ್ರೌಢರ ನಾಟಕವೂ ಇಲ್ಲ ಎಂಬಂತಹ ರೂಪ ತಾಳಿಬಿಟ್ಟಿದೆ. **– ದೇಶಪಾಂಡೆ ಸುಬ್ಬರಾಯ, ಧಾರವಾಡ**

೫. 'ಸಂಕಲನ-೧೪' ರ ಕಡೀಪುಟದಲ್ಲಿ ಹೊಸ ಚಿಂತನೆ ನೀಡಿದ್ದೀರಿ. ಸಂಡಾಸಕ್ಕೆ ಹೋಗು, ಕೈಕಾಲಿಗೆ ಹೋಗು ಇತ್ಯಾದಿ ಇನ್ನೂ ಎಷ್ಟೋ ಇಂಥ ಪದಗಳು ಆಯಾ ಊರು, ಜನ, ಜಾತಿ, ಸಂಸ್ಕಾರ, ಉಪಭಾಷೆಗಳನ್ನು ಸೂಚಿಸುತ್ತವೆ. ಈಗ ಇಂಥವು ನಶಿಸಿಹೋಗತೊಡಗಿವೆ. ಮುದೇನೂರು ಸಂಗಣ್ಣನವರು ಸಂಪಾದಿಸಿದ, ೧೯೯೭ ರಲ್ಲಿ ಪ್ರಕಟವಾದ 'ಚಿಗಟೇರಿ ಪದಕೋಶ' ಇಂಥ ಪ್ರಾದೇಶಿಕ ಪದಸಂಗ್ರಹದ ಸ್ತುತ್ಯ ಪ್ರಯತ್ನ. ಆದಷ್ಟು ಬೇಗ ಇಂಥ ಕೆಲಸ ಎಲ್ಲ ಕಡೆಗೂ ನಡೆಯಬೇಕು.

– ಸಂಗಮೇಶ ಮೆಣಸಿನಕಾಯಿ, ಗದಗ

೬. 'ಸಂಕಲನ' ವರುಷ ವರುಷಕ್ಕೆ ಹೊಸ ಹೊಸತನ್ನು ಒಳಗೊಂಡು ಮೈ ತುಂಬಿಕೊಂಡು ನಳನಳಿಸುತ್ತಿದೆ. – **ಡಾ. ಮಂದಾಕಿನಿ ಪುರೋಹಿತ, ಧಾರವಾಡ**

೭. 'ಸಂಕಲನ' ನನ್ನ ಗಮನಕ್ಕೆ ಬಂದೇ ಇಲಲಿಲ್ಲ! ತುಂಬ ಉಪಯುಕ್ತ ಪತ್ರಿಕೆ. ಲೇಖಕರಿಗೆ ಸಂಭಾವನೆ ಕೊಡುವುದಂತೂ ಆಶ್ಚರ್ಯದ ಸಂಗತಿ. ಕೆಲವು ಪತ್ರಿಕೆಗಳ ಸಂಪಾದಕರು ಲೇಖಕರಿಂದಲೇ ಹಣ ಪಡೆಯುತ್ತಿದ್ದರೆ ಆಶ್ಚರ್ಯವಿಲ್ಲ. – **ಡಾ. ಸಿ. ಪಿ. ಕೆ., ಮೈಸೂರು**

೮. 'ಸಂಕಲನ' ತುಂಬ ಆಕರ್ಷಕವಾಗಿ, ಅರ್ಥಪೂರ್ಣವಾಗಿ ಬರುತ್ತಿದೆ. ಕನ್ನಡದ ಪತ್ರಿಕಾ ಸಂಸ್ಕೃತಿ, ಪುಸ್ತಕ ಸಂಸ್ಕೃತಿಗೆ ಆದರ್ಶವಾಗುವಂತಿದೆ. ಭಾಸನನ್ನು ಕುರಿತ ಎಸ್. ಎಸ್. ಹಿರೇಮಠರ ಲೇಖನ ನಿಜಕ್ಕೂ ಅಪೂರ್ವ. ನೀವು ಹೇಳಿದಂತೆ ಭಾಸನ ನಾಟಕಗಳ ಮರುಚಿಂತನೆ, ಮರುಪ್ರಯೋಗ ಇಂದಿನ ತುರ್ತು ಅಗತ್ಯ. 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆಯಂತೂ ಕನ್ನಡದಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿದೆ. – **ಡಾ. ಮ. ಸು. ಕೃಷ್ಣಮೂರ್ತಿ, ಮೈಸೂರು**

೯. ಎಂ. ಡಿ. ಗೋಗೇರಿಯವರು ಬರೆದ 'ನನ್ನ ಅವ್ವ ನನ್ನ ಅಪ್ಪ' ಓದಿ ಧಾರವಾಡ ಭಾಷೆಯ ಸೊಗಡು ಮತ್ತೆ ಮತ್ತೆ ನೆನಪಾಯಿತು. ದೂರದ ಚಿತ್ರದುರ್ಗ ಜಿಲ್ಲೆಯಲ್ಲಿರುವ ನನಗೆ ಆಗಾಗ ಇಂಥ ಲೇಖನಗಳನ್ನು ಓದಿ ನಮ್ಮ ಭಾಷೆಯಲ್ಲಿರುವ 'ಗಂಡುಗುಣ' ಅಭಿಮಾನ ಮೂಡಿಸುತ್ತದೆ. ಬಿ. ಟಿ. ದೇಸಾಯಿ ವಿರಚಿತ ಮಕ್ಕಳ ನಾಟಕ 'ಚಾಳೀ ಠೂ' ಕೂಡ ಚೆನ್ನಾಗಿದೆ.

– **ಪರಮೇಶ್ವರಪ್ಪ ಕುದರಿ, ಚಳ್ಳಕೆರೆ**

೧೦. ೧೩ನೇ ಸಂಚಿಕೆಯ ಕೊನೆಯಲ್ಲಿ ಹಿಂದಿನ ವರ್ಷದ ಸಮಗ್ರ ಸಾಮಗ್ರಿ ದರ್ಶನ ನೀಡಿದ್ದು ತುಂಬ ಉಪಯುಕ್ತ. ಒಂದು ವರ್ಷದ ಪತ್ರಿಕೆಯ ಸ್ವರೂಪ, ಲೇಖನಗಳ ಮಾಹಿತಿ ಎಲ್ಲ ಒಟ್ಟಿಗೆ ದೊರಕಿದೆ. 'ಸಂಕಲನ' ಸಂಚಿಕೆಯಿಂದ ಸಂಚಿಕೆಗೆ ಹೊಸ ವಿನ್ಯಾಸದಲ್ಲಿ ಬರುತ್ತಿದೆ.

– **ಡಾ. ಸಂತೋಷ ಚೊಕ್ಕಾಡಿ, ಮೈಸೂರು**

೧೧. 'ಸಂಕಲನ' ನಿಜಕ್ಕೂ ಗಮನಾರ್ಹ ಪತ್ರಿಕೆ. ಪ್ರತಿಯೊಬ್ಬರೂ ಓದಬೇಕಾದ, ಪ್ರೋತ್ಸಾಹಿಸಬೇಕಾದ ಪತ್ರಿಕೆ. ನಿಮ್ಮ ಸಾಹಸ ಅಭಿನಂದನೀಯ. – **ಶ್ರೀನಿವಾಸ ಜಿ. ರಾವ್, ಮುಂಬಯಿ**

೧೨. 'ಸಂಕಲನ'ದ ಈವರೆಗಿನ ಎಲ್ಲ ಸಂಚಿಕೆಗಳನ್ನು ಮೊನ್ನೆ ನೋಡಿದೆ, ಕೊಂಡೆ, ಓದಿದೆ. ಬರಗಾಲದಲ್ಲಿನ ಸುರಿಮಳೆಯಂತೆ ಈ ಸಂಚಿಕೆಗಳು. ಬಹಳ ಕಾಲದಿಂದ ಬರಡಾಗಿದ್ದ ಧಾರವಾಡ ಮತ್ತೆ ಹಸಿರಾಗಿದೆ. 'ಕಡೀಪುಟ', 'ನನ್ನ ಅವ್ವ ನನ್ನ ಅಪ್ಪ' ಲೇಖನಗಳಂತೂ ಆಪ್ತ, ಅದ್ಭುತ.

– **ಆರ್. ಎಮ್. ಗಿರ್ಜಿ, ಧಾರವಾಡ**

೧೩. 'ಸಂಕಲನ-೧೩'ರಲ್ಲಿ ಬಂದ ಸುಮಂಗಲಾಳ 'ನನ್ನ ಅಪ್ಪ ನನ್ನ ಅಮ್ಮ' ಓದಿ ಕಣ್ಣು ತುಂಬಿ ಬಂತು.... ಸಂಕಲನ-೧೪ ರಲ್ಲಿ ಬಂದ ಗೀತಾ ವಸಂತಳ ಕವಿತೆಗಳು ಮನುಜಮತವನ್ನು ಪಾರದರ್ಶಕಗೊಳಿಸುವ ಆಶಯ ಹೊಂದಿವೆ. ಬಿ. ಟಿ. ದೇಸಾಯರ 'ಚಾಳೀ ಠೂ' ನಾಟಕ ದೊಡ್ಡವರಿಗೂ ಮುದ ನೀಡುವಂತಿದೆ. ಭಾಸನ ಕುರಿತ ಹಿರೇಮಠರ ಲೇಖನ ಹೊಸ ಸಂವೇದನೆಗಳನ್ನು ಒದಗಿಸಿದೆ.

– **ಸುನಂದಾ ಪ್ರಕಾಶ ಕಡಮೆ, ಹುಬ್ಬಳ್ಳಿ**

೧೪. 'ಸಂಕಲನ' ಪ್ರಬುದ್ಧವಾಗಿ ಬರುತ್ತಿದೆ. ಪ್ರಕಟಿತ ಲೇಖನಗಳಿಗೆ ಸಂಭಾವನೆ ಕೊಡುವುದನ್ನು ನೀವೊಂದು ಪಾಲಿಸಿಯಂತೆ ಛಲದಿಂದ ನಡೆಸಿಕೊಂಡು ಬರುತ್ತಿದ್ದೀರಿ. ಆದರೆ ನನ್ನ ಲೇಖನಗಳಿಗೆ ಸಂಭಾವನೆ ಕಳಿಸಬೇಡಿ. – **ಎ. ಆರ್. ನಾಗಭೂಷಣ, ಮೈಸೂರು**

೧೫. 'ಸಂಕಲನ' ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ. – **ಪಾಂಡುರಂಗ ಕೋಟಿ, ಬ್ಯಾಡಗಿ**

೧೬. 'ಸಂಕಲನ' ಪತ್ರಿಕೆ ತುಂಬ ಚೆನ್ನಾಗಿದೆ. ಹಲವು ಬಗೆಯ ಲೇಖನಗಳು ಓದುಗನ ಜ್ಞಾನವನ್ನು ವಿಸ್ತರಿಸುವಲ್ಲಿ ತುಂಬಾ ಉಪಯುಕ್ತವಾಗಿದೆ. ಅದರಲ್ಲೂ ತಾವೂ ಬರೆಯುತ್ತಿರುವ ಕಡೀಪುಟ ನನಗೆ ತುಂಬಾ ಇಷ್ಟ. ಅಲ್ಲಿನ ಭಾಷೆಯೂ ತುಂಬಾ ಚೆಂದ. – **ಜಿ. ಇ. ಅಜ್ಜಪ್ಪ, ಮೈಸೂರು**

ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಾ ಆಕಿನ್ನ ಪ್ರೀತೀ ಮಾಡತೇನಿ, ನಾ ಅವ್ನನ್ನ ಬಯಸತೇನಿ, ನಾ ಅಂದರ ಆಕಿಗೆ/ಅವ್ನಗ ಪ್ರಾಣ, ನಾವು ಒಬ್ಬರಿಗೊಬ್ಬರು ಜೀವ್ನಾ ಕೊಡತೇವು, ನಾವಿಬ್ಬರೂ ಅಗಲಿದರ, ಒಂದ ವ್ಯಾಳ್ಯೆ ದೂರ ಆದರ ಬದುಕಾಕನ್ಅ ಸಾಧ್ಯ ಇಲ್ಲ —ಮುಂತಾದ ವಾಕ್ಯಗಳನ್ನ ಉರು ಹೊಡಕೊಂತ, ಬಡಬಡಿಸಿಗೊಂತ ಈಗಾಗಲೇ ಆಯುಷ್ಯದ ೫೦-೬೦ ವರ್ಷಗಳನ್ನ ಕಳಕೊಂಡೇವಿ. ನಮ್ಮಂಥವರು ನಮ್ಮ ಭರ್‍ರ್ ಹರೇದಾಗ ಕನವರಿಸಿದ ಶಬ್ದಗಳನ್ನ ಈಗಿನ ಪೂರಾ ಹಿರೇದಾಗ ಇರುವ ಅಸಂಖ್ಯ ಕಿರೇದವರು ಕಿರಿಕಿರಿ ಆಗೂವಷ್ಟು, ತಲಿ ಚಿಟ್ಟ ಹಿಡಿಯೂವಷ್ಟು ನಮೂನೀಲೆ ಹೇಳಾಕಹತ್ತ್ಯಾರ. ಅದನ್ನ ಕೇಳಿ ನಮ್ಮ ಕಿವ್ಹಿ, ಕಣ್ಣು, ತಲಿ, ಮನಸು ಶಾಂತೋತಿಶಾಂತ ಆಗಾಕಹತ್ತ್ಯಾವು.

ಅಂಗಾರ ಏನಿದು? ಆಕಿನ್ನ ಪ್ರೀತಿಸತೇನಿ ಅಂದರ, ನನ್ನೊಳಗ ಹುಟ್ಟಿದ ಈ ಪ್ರೀತಿ ಆಕೀ ಸಲುವಾಗಿ ಅಯ್ತ್ಯೋ, ಏನ ನನ್ನ ಸಲವಾಗ್ಯೋ? ಆಕಿ ಸಲವಾಗೆಂತ ಇದ್ದಿದ್ದರ, ಆಕಿ ಏನರ ನನಗ ಹಂಗ ಮಾಡ ಅಂತ ಹೇಳಿದ್ಲೇನು? ಅಥವಾ ನನಗ್ಅ ಆಕಿಗೆ ಉಪಕಾರ ಮಾಡೂ ಹುಕೀ ಹುಟ್ಟಿ ಏಕಾಏಕಿ ಪ್ರೀತಿರಸ ಸ್ರವಿಸಾಕ ಹತ್ತಿದ್‌ನ್ಯೋ ಹೆಂಗ? ಅಥವಾ ಆಕಿಗೆ ಮನಸ ಇರಲಿ ಬಿಡಲಿ, ಆಕೀ ಮ್ಯಾಲ ಹೇರಿ, ನಾನ್ಅ ಜಬರೀ ತೋರಸಾಕಹತ್ತಿದ್‌ನ್ಯೋ ಏನು? ಹಂಗಿರಲಿಲ್ಲಂದರ, ನನ್ನ ಮನೋಚಾಪಲ್ಯಕ್ಕ, ವೈಫಲ್ಯಕ್ಕ, ರಸಮೂಲವಾದ ವಿಭಾವ ಅನುಭಾವ ಸಂಚಾರೀ ಭಾವತ್ರಯೀ ಸಂಘಟ್ಟಣಕ್ಕ ತುತ್ತಾಗಿ, ಭಾವತೀವ್ರತೆ ಅಥವಾ ತುಮುಲದ ಸಾಂದ್ರತೆಯಿಂದಾಗಿ ತಲೆಯೆತ್ತುವ ರಸಾಭಾಸ, ಭಾವಾಭಾಸ, ಭಾವಶಾಂತಿ, ಭಾವೋದಯ, ಭಾವಸಂಧಿ ಅಥವಾ ಭಾವಶಾಬಲ್ಯಗಳಿಗೆ ಈಡಾಗಿ ನಾನಾಗೇ ನನ್ನ ಮೈ ಮ್ಯಾಲ ಆವಾಹಿಸಿಕೊಂಡಂಥ ಪ್ರೀತಿ(ಭೂತಿ ಅಲ್ಲ)ಭೂತವನ್ನ ಹೊತ್ತಗೊಂಡು ಹಿಂಗ ಹಂಡಬಂಡ ಹೋರೀಹಂಗ ವರ್ತಿಸಲಿಕ್ಕೆ ಹತ್ತೇನ್ಯೋ ಹೆಂಗ?

ನಾನು ಯಾರನ್ನ ಪ್ರೀತಿಸತೇನಿ, ಅದು ಅವರಿಗೆ ಗೊತ್ತಾಗಿ, ಅವರ ಕಡಿಂದ ಇಲ್ಲಾ ಅವರ ವತಿಯಿಂದ ಪ್ರತಿಕ್ರಿಯೆ ಬರತೊಡಗಿದಾಗ ನಡೆಯುವ ಪ್ರಕ್ರಿಯೆಗಳು, ಆಗುವ ಪರಿಣಾಮಗಳು, ತೋರುವ ಫಲಿತಾಂಶಗಳು ಇಬ್ಬರ ಮ್ಯಾಲೂ ಏಕರೂಪ ಪ್ರಭಾವ ಬೀರಬೇಕಲ್ಲ...? ಹಂಗ ಮಾಡಿ ಬದುಕಿನ ಕ್ಯಾನವಾಸಿನೊಳಗ ಇಬ್ಬರನ್ನೂ ಒಂದು ಫ್ರೇಮ್‌ನೊಳಗ(ಪ್ರೇಮ್ ಆಗಲಿಕ್ಕಿಲ್ಲ), ಒಂದು ಚೌಕಟ್ಟಿನೊಳಗ (ಚೌಹದ್ದಿನೊಳಗ ಇರಲಿಕ್ಕಿಲ್ಲ), ಕೂಡಿಸಿ ಕಡಿತನಕಾ ಏನ್ಅ ಗಂಡಾಗುಂಡಿ ಬರಲಿ, ಈಗಿನಂಗ್ಅ ಕೂಡಿ ಬಾಳಿರಿ, ಹಸನಾಗಿ ಬದುಕಿರಿ ಅಂತ ಈ ಪ್ರೀತಿ ಯಾಕ ಶಕ್ತಿ ನೀಡೂದುಲ್ಲ?

ಬಹುತೇಕ ಪ್ರೀತಿ ಅನ್ನೂದು ಪ್ರತಿಯೊಬ್ಬ ವ್ಯಕ್ತಿಯ, ಪ್ರತಿಯೊಂದು ಹೃದಯದ ಅನಿವಾರ್ಯ ಮಾರ್ದವತೆ. ದೇಹದೊಳಗಿನ ಬಿಸಿ ಹವಾಮಾನಕ್ಕ, ವಾತಾವರಣಕ್ಕ ತಕ್ಕಂಗ ತಾನ್ಅ ಹೆಚ್ಚು ಕಡಿಮಿ ಆಕ್ಕೊಂತ ಅದು ತನ್ನ ಬ್ಯಾಲನ್ಸ್ ಕಾಪಾಡಿಕೊಂಡ್ಹಂಗ. ಇದು ದೇಹದ ಮಾತು ಆತು. ಹಂಗನ್ಅ ಮನಸ್ಸಿನ + ಹೃದಯದ ತಾಪವನ್ನೂ ಮನುಷ್ಯ ಸಾಯುವ

ತನಕಾ ಸಮತೋಲನದಾಗ ಇಟಗೋಬೇಕಾಕ್ಕತಿ. ದೇಹಕ್ಕ ಔಷಧ ರಸ. ಮನಸ್ಸಿಗೆ ರಸ ಔಷಧ, ಮೃದುತ್ವ, ಅಮೃತತ್ವ. ಈ ಮೃದುತ್ವ, ಕೋಮಲತ್ವ ಎಂದೂ ಒಣಗದ್ಹಂಗ, ಗಟ್ಟಿಯಾಗದ್ಹಂಗ, ಘನೀಕೃತ ಆಗದ್ಹಂಗ ಕಾಪಾಡಿಕೊಳ್ಳುವ ನಿಟ್ಟಿನೊಳಗ ಅನಿಸಿಕೆ-ಭಾವಾಭಾವಗಳ ಸೈನಿಕ-ತತ್ತ್ವಗಳು ನಿರಂತರ ಕೆಲಸಾ ಮಾಡತಿರತಾವು. ಅದರಿಂದಾಗಿ ಭಾವಾಂದೋಲನ, ಭಾವ-ಶಬಲತೆ, ಮಿಶ್ರಭಾವಗಳ ಕುಲುಕಾಟ ಅಗತ್ಯ, ಅನಿವಾರ್ಯ. ಆಂದೋಲನ ಅಂದ ಮ್ಯಾಲ ಯುಕ್ತಿಹೂಡಿಕೆ, ತಂತ್ರಗಾರಿಕೆ, ಸುಳ್ಳು-ಸತ್ಯಗಳ ದ್ವಂದ್ವಮಿಶ್ರಣ, ಪ್ರಯತ್ನ, ಏರಾಟ-ಹೋರಾಟ, ಸೋಲು-ಹೊಂದಾಣಿಕೆಗಳೂ ಅನಿವಾರ್ಯ ಆಗತಾವು. ಇವೆಲ್ಲವನ್ನೂ ಏಕೀಕರಿಸಿ ಮನಶ್ಯಾ, ಪ್ರೀತಿ ಮಾಡತೇನಿ ಅಂತಾನ. ಹಿಂಗಾಗಿ ಪ್ರೀತಿ ಅನ್ನೂದು ಪ್ರಾಣಧರ್ಮ, ಮನೋಧರ್ಮ, ಶ್ವಾಸಕರ್ಮಗಳ ತ್ರಿಶೂಲ.

ದೇಹ ಮನಸ್ಸಿನ ರಂಗದ ಮ್ಯಾಲ ತನಗಾಗಿ ಪ್ರೀತಿಯ ಓಕಳಿ ಆಟಾ ಆಡತಯ್ತಿ. ಅದರ ಅಂಗಾಂಗಗಳಾದ ಹೂಟ ಕೂಟ ಬೇಟಾದಿ ಸಕಲ ಆಖೇಟ ವಿದ್ಯೆಗಳನ್ನ ಬಳಸಿಕೊಳ್ಳತಯ್ತಿ. ಈ ಏಕಮುಖಿ ಉದ್ದೇಶವನ್ನ, ಪ್ರಯತ್ನವನ್ನ ಸಮ್ಮುಖಪಕ್ಷದ ಮ್ಯಾಲೂ ಹೇರಿ, ತನಗ ಅನ್ಯಾಯ ಆತು, ಅವಮಾನ, ನಿರಾಸೆ ಆತು, ಪ್ರೇಮವೈಫಲ್ಯ ಆತು ಅಂತೆಲ್ಲ ಹೇಳಿಕೊಂತ, ಸಿಕ್ಕಸಿಕ್ಕವರ ಮ್ಯಾಲ ಹರಿಹಾಯ್ದು ಕತೆಯನ್ನು ಕಾದಂಬರಿ ಮಾಡತಯ್ತಿ, ಏಕಾಂಕವನ್ನ ಬಹ್ವಾಂಕ ನಾಟಕ ಮಾಡತಯ್ತಿ, ದೀರ್ಘ ದಾರಿಯೊಳಗ ಸಣ್ಣ ಸಣ್ಣ ಹೆಜ್ಜೀ ಇಡತಯ್ತಿ. ಆಗ ಈವರೆಗೆ ಸಾಧಿಸಿ ಕಲಿತ ಬಲೆಗಳು ಸಡಿಲಾಗಿ/ಬಿಗಿಯಾಗಿ ಲಲಿತ ಕಲೆಗಳಾಗತಾವು, ಕಾವ್ಯ ಸಾಹಿತ್ಯ ರಸಗಳಾಗತಾವು, ತತ್ತ್ವಶಾಸ್ತ್ರದ ಧೀಮಂತ ಚಿಂತನಗಳಾಗತಾವು. ಚದುರಿದ ಬದುಕು ಚತುರ ಜೀವನ ಆಗಿ ತತ್ಸಮ ಸಂಸ್ಕೃತ ಸಮಾಸ ಆಗತಯ್ತಿ.

ಇಂಥಾ ವಿಕಾಸದ ಹಂತದೊಳಗ ಪ್ರೀತಿಯ ಮೆಟ್ಟಿಲುಗಳು ಮ್ಯಾಲಕ ಏರುವ ನಿಚ್ಚಳ ನಿಚ್ಚಣಿಕಿ ಆಗಿ ಪರಿಣಮಿಸತಾವು. ಆಗ ಪ್ರೀತಿ ರೂಪಾಂತರ ನಿಷ್ಠೆಗೆ ಒಲಿದು ಹಿರಿಯರ ಬಗ್ಗೆ ಗೌರವ ಆಕ್ಕತಿ, ಆದರ ಆಕ್ಕತಿ. ಅನ್ಯರ ಬಗ್ಗೆ ಉದಾರ ಆಕ್ಕತಿ. ಚಿಕ್ಕವರ ಬಗ್ಗೆ ವಾತ್ಸಲ್ಯ, ಬಂಧುಗಳ ಬಗ್ಗೆ ಸೋದರಿಕೆ, ಸೇವಕರ ಬಗ್ಗೆ ಅಕ್ಕರೆ ಅನುಕಂಪ, ಕರ್ತವ್ಯದ ಬಗ್ಗೆ ಪ್ರಾಮಾಣಿಕತೆ ನಿಷ್ಠೆ ಆಕ್ಕತಿ. ಗುರುವಿನಲ್ಲಿ ಶ್ರದ್ಧೆ ಭಕ್ತಿಯಾಗಿ, ದೇವರಲ್ಲಿ ಉಪಾಸನೆ ಪ್ರಾರ್ಥನೆ ಪೂಜೆ ಆಗಿ ಸಮರ್ಪಣ ಭವನದೊಳಗ ಮೌನಗಾನಲೀನವಾಗತಯ್ತಿ. ಇದು ವಿಧಿ. ಅಂದರ ವಿಧಾನ. ಕಾನೂನು. ಖಚಿತ. ಅಜ್ಞಾನ ಹೋಗಿ ವಿಜ್ಞಾನೋನ್ಮುಖ ಸುಜ್ಞಾನವಾಗುವ ಪರಿ.

ಈ ರೀತಿ ಪ್ರೀತಿ ಅನ್ನೂದು ಸ್ವಾರ್ಥದ ನೆಲದಾಗ ಸ್ವಯಂಭೂ ಆಗಿ ಅಂಕುರಿಸುವ ಬೀಜ. ಔದಾರ್ಯ ಆದರ ಗೌರವ ಶ್ರದ್ಧೆ, ಭಕ್ತಿ, ಪೂಜೆ ಸೇವೆ ಸಮರ್ಪಣೆಗಳು ಈ ಅಂಕುರದ ಅಷ್ಟಷ್ಟ ಟಿಸಿಲುಗಳು. ಕಾವ್ಯ ಪ್ರತೀಕ ಕಲೆ ಪ್ರತಿಮೆ ಗಾನ ಸ್ವರಸಂಮಿಲನ ಪ್ರಭಾವ ಪರಿಣಾಮಗಳು ಶಾಖೋತ್ಪನ್ನ ಸುಮನಗಳು. ಚಿಂತನದ ಅಶ್ವಾರೋಹಿ ಉಸಿರು ಗಾಳಿಗುಂಟ ಗಮು-ಗಮಿಸುವ ನಿರ್ಗಂಧ. ಗಂಧಾದ್ರಿ ಮೂಲ ಇದರ ಗಂತವ್ಯ, ಗುರಿ. ಇದಕ್ಕೆ ದೇವರು ಇಟ್ಟ ಹೆಸರು ಪ್ರೀತಿಸಿರಿ.

SANKALANA: RNI No. KARKAN 14160/10/1/2002-TC

ಸಂಕಲನ : ೧೪ ಮೇ ೨೦೦೪

ಸಂಪುಟ ೩, ಸಂಚಿಕೆ ೩

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

• ಪಿ. ಎಂ. ಹೆಗಡೆ • ಉಮೇಶ ಎನ್. ಸಂಗನಾಳಮಠ

• ವಿಭಾ • ಸಿ. ಎನ್. ರಾಮಚಂದ್ರನ್

• ಡಿ. ಬಿ. ಢಂಗ • ಬಸವರಾಜ ಸಬರದ

• ಕಿರಣ

• ರಾ. ಕ. ನಾಯಕ

• ಎಂ. ಎಂ. ಕಲಬುರ್ಗಿ

• ಬಸವರಾಜ ಸಾದರ

• ದಮಯಂತಿ ನರೇಗಲ್ಲ

•

ಬಿ. ಟಿ. ದೇಸಾಯಿ ಜಿ. ಟಿ. ಶ್ರೀಧರ ಶರ್ಮ

ಶಿವಶಂಕರ ಹಿರೇಮಠ ಶ್ರೀಪತಿ ಮಂಜನಬೈಲು ವಸಂತ ಕುಲಕರ್ಣಿ

ಎ. ಡಿ. ನಂಜುಂಡಸ್ವಾಮಿ ದೇಶಪಾಂಡೆ ಸುಬ್ಬರಾಯ

•

ಯು. ವೆಂಕಟ್ರಾಜ ರಾವ್ ಡಾ. ಎಂ. ಎಂ. ಕಲಬುರ್ಗಿ

ಗುರುಲಿಂಗ ಕಾಪಸೆ ದೇಶಪಾಂಡೆ ಸುಬ್ಬರಾಯ ಸಂಗಮೇಶ ಮೆಣಸಿನಕಾಯಿ

ಮಂದಾಕಿನಿ ಪುರೋಹಿತ ಸಿ. ಪಿ. ಕೆ. ಮ. ಸು. ಕೃಷ್ಣಮೂರ್ತಿ

ಪರಮೇಶ್ವರಪ್ಪ ಕುದರಿ ಸಂತೋಷ ಚೊಕ್ಕಾಡಿ ಶ್ರೀನಿವಾಸ ಜಿ. ರಾವ್

ಆರ್. ಎಮ್. ಗಿರ್ಜಿ ಸುನಂದಾ ಪ್ರಕಾಶ ಕಡಮೆ ಎ. ಆರ್. ನಾಗಭೂಷಣ

ಪಾಂಡುರಂಗ ಕೋಟಿ ಜಿ. ಇ. ಅಜ್ಜಪ್ಪ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ ೫೮೦ ೦೦೪